ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | 45 | ಡಿಸೆಂಬರ್ 3 ಮಂಗಳವಾರ 2024

ಸಂಪುಟ: 45 | ಸಂಚಿಕೆ: 226 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ
ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಿರಂತರ ಮಳೆಗೆ ಮೈಸೂರು ತತ್ತರ

ಜನ ಜೀವನ ಅಸ್ತವ್ಯಸ್ತ

ನೆರೆ ಜಿಲ್ಲೆಗಳಲ್ಲೂ ವ್ಯಾಪಕ ಮಳೆ



ಮೈಸೂರು, ಕೊಡಗು, ಮಂಡ್ಯ, ಚಾ.ನಗರದಲ್ಲಿ ಶಾಲಾ–ಕಾಲೇಜಿಗೆ ಇಂದೂ ರಜೆ

ಫೆಂಗಲ್ ಚಂಡಮಾರುತದ ಪರಿಣಾಮ ನಿರಂತರ ಮಳೆಯಾಗುತ್ತಿರುವ ಹಿನ್ನೆಲೆ ಮೈಸೂರಿನ ಶಾಲೆ, ಅಂಗನವಾಡಿ ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ನಾಳೆ (ಡಿ.3) ರಜೆ ಘೋಷಣೆ ಮಾಡಲಾಗಿದೆ. ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಈ ಸಂಬಂಧ ಆದೇಶ ಹೊರಡಿಸಿದ್ದಾರೆ. ಮೈಸೂರು ಜಿಲ್ಲೆಯಲ್ಲಿ ನಿರಂತರ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಶಾಲೆ, ಅಂಗನವಾಡಿ ಹಾಗೂ ಪದವಿ ಪೂರ್ವ ಕಾಲೇಜಿಗೆ ರಜೆ ಘೋಷಣೆ ಮಾಡಲಾಗಿದೆ ರಾಜ್ಯದ ಹತ್ತು ಜಿಲ್ಲೆಯಲ್ಲಿ ರಜೆ ನೀಡಲಾಗಿದೆ



ಮೈಸೂರು, ಡಿ.2(ಆರ್‌ಕೆ)– ತಮಿಳುನಾಡಿನ ಕರಾವಳಿಯಲ್ಲಿ ಅಪ್ಪಳಿಸಿರುವ ಫೆಂಗಲ್ ಚಂಡಮಾರುತದ ಪರಿಣಾಮ ಮೈಸೂರು ಹಾಗೂ ನೆರೆಹೊರೆ ಜಿಲ್ಲೆಗಳಲ್ಲಿ ಭಾನುವಾರ ರಾತ್ರಿಯಿಂದ ಧಾರಾಕಾರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಜನ ಜೀವನ ಅಸ್ತವ್ಯಸ್ತಗೊಂಡಿದೆ.

ಭಾನುವಾರ ರಾತ್ರಿ 8 ಗಂಟೆಗೆ ಆರಂಭವಾದ ಮಳೆ ನಿರಂತರವಾಗಿ ಸುರಿಯುತ್ತಿದ್ದು, ಇದರಿಂದ ಕಚೇರಿಗಳಿಗೆ ಹೋಗುವವರಿಗೆ, ವ್ಯಾಪಾರ–ವಹಿವಾಟುಗಳಿಗೆ, ಉದ್ದಿಮೆಗಳಿಗೆ ತೆರಳಲು ಜನರು ಪರಿತಪಿಸುವಂತಾಯಿತು. ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನ ಸವಾರರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಮಳೆಯಿಂದ ರಕ್ಷಿಸಿಕೊಳ್ಳಲು ಕೊಡೆ, ರೈನ್ ಕೋಟ್ ಆಶ್ರಯಿಸಲಾಗಿದ್ದು, ಬೀದಿ ಬದಿ ವ್ಯಾಪಾರಿಗಳು, ಫಾಸ್ಟ್‌ಫುಡ್‌ಗಳು, ತಳ್ಳು ಗಾಡಿಯ ವ್ಯಾಪಾರಿಗಳು ಮಳೆಯಿಂದಾಗಿ ವ್ಯಾಪಾರವಿಲ್ಲದೆ ನಷ್ಟ ಅನುಭವಿಸುವಂತಾಯಿತು. ಮೈಸೂರಿನ ದೇವರಾಜ, ಕೆ.ಆರ್., ಮಂಡಿ, ಹಳೇ ಆರ್‌ಎಂಸಿ, ಬಂಡಿಪಾಳ್ಯ ಎಪಿಎಂಸಿ ಮಾರುಕಟ್ಟೆ, ಮಕ್ಕಾಜಿ ಚೌಕ, ಕೆಆರ್.ಸರ್ಕಲ್, ಸಂತೇಪೇಟೆ, ಶಿವರಾಂಪೇಟೆ, ಓಲ್ಡ್ ಬ್ಯಾಂಕ್ ರೋಡ್, ದೇವರಾಜ ಅರಸ್ ರಸ್ತೆ ಸಯ್ಯಾಜಿರಾವ್ ರೋಡ್‌ಗಳಂತಹ ಪ್ರಮುಖ ವಾಣಿಜ್ಯ ಕೇಂದ್ರಗಳು ಹಾಗೂ ಪ್ರಮುಖ ಸ್ಥಳಗಳಲ್ಲಿ ಮಳೆಯಿಂದಾಗಿ ವ್ಯಾಪಾರ–ವಹಿವಾಟಿಲ್ಲದೆ ಹತಾಶರಾದುದು ಕಂಡುಬಂದಿತು.

ಮುನ್ನೆಚ್ಚರಿಕೆ ಕ್ರಮವಾಗಿ ಈಗಾಗಲೇ ಜಿಲ್ಲಾಡಳಿತದಿಂದ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಿತ್ತು. ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಮೈಸೂರು ನಗರಾದ್ಯಂತ ಜನ ಮತ್ತು ವಾಹನ ಸಂಚಾರ ಅಸ್ತವ್ಯಸ್ತಗೊಂಡಿದೆ. ಜನಸಂಚಾರ ವಿರಳವಾಗಿದೆ. ಮೈಸೂರು ನಗರದಲ್ಲಿ ಮಾಮೂಲಿಯಂತೆ ವಹಿವಾಟು ಕಂಡುಬರಲಿಲ್ಲ. ಕುವೆಂಪುನಗರ ಹೆಚ್ ಬ್ಲಾಕ್‌ನಲ್ಲಿ ಮರದ ಭಾರಿ ರೆಂಬೆವೊಂದು ಮುರಿದು ಬಿದ್ದಿತ್ತು. ಪಾಲಿಕೆಯ ಅಭಯ ತಂಡದ ಸಿಬ್ಬಂದಿ ಇಂದು ಬೆಳಗ್ಗೆಯಿಂದಲೇ ಕಾರ್ಯಾಚರಣೆ ನಡೆಸಿ, ತೆರವುಗೊಳಿಸಿದರು. ಅದನ್ನು ಹೊರತುಪಡಿಸಿದರೆ ಅಬ್ಬರದ ಮಳೆ ಹಾಗೂ ಗಾಳಿ, ಮಿಂಚು, ಗುಡುಗು ಇಲ್ಲದ ಕಾರಣ ನಗರಾದ್ಯಂತ ಯಾವುದೇ ಅನಾಹುತ ಸಂಭವಿಸಿದ ಬಗ್ಗೆ ವರದಿಯಾಗಿಲ್ಲ. ಹವಾಮಾನ ಮುನ್ಸೂಚನೆ ಪ್ರಕಾರ ಡಿ.4ರವರೆಗೂ ಮಳೆ ನಿರಂತರವಾಗಿ ಸುರಿಯುವ ಸಾಧ್ಯತೆ ಇದ್ದು, ಪಾಲಿಕೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಪೂರ್ಣ ತಯಾರಿಯೊಂದಿಗೆ ■6ನೇ ಪುಟಕ್ಕೆ

ಕೊಡಗಿನಲ್ಲಿ 'ರೆಡ್ ಅಲರ್ಟ್' ಘೋಷಣೆ

ಮಡಿಕೇರಿ, ಡಿ.2–ಬಂಗಾಳಕೊಲ್ಲಿಯಲ್ಲಿ ಉಂಟಾದ ಫೆಂಗಲ್ ಚಂಡಮಾರುತ ಪ್ರಭಾವ ಕೊಡಗು ಜಿಲ್ಲೆಯ ಮೇಲೂ ಬೀರಿದ್ದು, ಜಿಲ್ಲೆಯ ವಿವಿಧೆಡೆ ಸೋಮವಾರ ಧಾರಾಕಾರ ಮಳೆಯಾದ ಬಗ್ಗೆ ವರದಿಯಾಗಿದೆ. ಈ ನಡುವೆ ಭಾರತೀಯ ಹವಾಮಾನ ಇಲಾಖೆ ಕೂಡ ಮುನ್ನೆಚ್ಚರಿಕೆ ನೀಡಿದ್ದು, ಡಿ.3ರಂದು ಜಿಲ್ಲಾದ್ಯಂತ 'ರೆಡ್ ಅಲರ್ಟ್' ಘೋಷಿಸಿದೆ. ಈ ಅವಧಿಯಲ್ಲಿ 204.5 ಮಿ.ಮೀ.ಗೂ ಅಧಿಕ ಮಳೆ ಸುರಿಯಬಹುದು ಎಂದು ಹವಾಮಾನ ಇಲಾಖೆ ಅಂದಾಜಿಸಿದ್ದು, ಸಾರ್ವಜನಿಕರು ಅಗತ್ಯ ಮುಂಜಾಗ್ರತಾ ಕ್ರಮ ವಹಿಸುವಂತೆ ಜಿಲ್ಲಾಡಳಿತ ಮಾಹಿತಿ ನೀಡಿದೆ.

ಬೆಂಗಳೂರು ಸೇರಿ ರಾಜ್ಯದ ಹಲವು ಭಾಗಗಳಲ್ಲಿ ಇನ್ನೂ 2 ದಿನ ಭಾರಿ ಮಳೆ



ಬೆಂಗಳೂರು: ಫೆಂಗಲ್ ಚಂಡಮಾರುತದ ಎಫೆಕ್ಟ್ ಇನ್ನಷ್ಟು ಹೆಚ್ಚಾಗಲಿದೆ. ಬಂಗಾಳ ಕೊಲ್ಲಿಯಿಂದ ಅರಬ್ಬಿ ಸಮುದ್ರದತ್ತ ಚಂಡಮಾರುತ ಪಥ ಬದಲಿಸಿದ್ದು ಬೆಂಗಳೂರು ಮತ್ತು ಕರ್ನಾಟಕದ ಇತರ ಭಾಗಗಳಲ್ಲಿ ಮುಂದಿನ ಎರಡು ದಿನಗಳ ಕಾಲ ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದೆ. ಬೆಂಗಳೂರಿನಲ್ಲಿ ಭಾನುವಾರ ಸಂಜೆಯಿಂದ ನಿರಂತರವಾಗಿ ಮಳೆಯಾಗುತ್ತಿದೆ. ಕರಾವಳಿ ಕರ್ನಾಟಕ ಮತ್ತು ದಕ್ಷಿಣ ಆಂತರಿಕ ಕರ್ನಾಟಕದ ಕೆಲವು ಭಾಗಗಳಲ್ಲಿ ಇಂದು ಭಾರಿ ಮಳೆ ಸುರಿಯಿತು. ಮಂಗಳವಾರವೂ ಭಾರಿ ಮಳೆಯಾಗುವ ಸಾಧ್ಯತೆ ಇದ್ದರೆ, ಈ ಪ್ರದೇಶಗಳಲ್ಲಿ ಬುಧವಾರದಿಂದ ಮಳೆ ಕಡಿಮೆಯಾಗುವ ಸಾಧ್ಯತೆಯಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೆಂಗಳೂರು ಮತ್ತು ಹಾಸನ, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಿಗೆ ಸೋಮವಾರ ಹಳದಿ ಅಲರ್ಟ್ ಘೋಷಿಸಲಾಗಿದೆ ಎಂದು ಭಾರತೀಯ ಹವಾಮಾನ ಇಲಾಖೆ, ಬೆಂಗಳೂರು ನಿರ್ದೇಶಕ ಸಿಎಸ್ ಪಾಟೀಲ್ ತಿಳಿಸಿದ್ದಾರೆ. ■6ನೇ ಪುಟಕ್ಕೆ

ಮಾ.1ರಿಂದ ದ್ವಿತೀಯ ಪಿಯು, ಮಾ.20ರಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ



ಬೆಂಗಳೂರು, ಡಿ.2(ಕೆಎಂಶಿ)–ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿಯು 2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ ದಿನಾಂಕಗಳ ತಾತ್ಕಾಲಿಕ ವೇಳಾಪಟ್ಟಿಯನ್ನು ಪ್ರಕಟಿಸಿದೆ. ದ್ವಿತೀಯ ಪಿಯುಸಿ ಪರೀಕ್ಷೆ 2025 ಮಾರ್ಚ್ 1 ರಿಂದ 19ರವರೆಗೆ ನಡೆಯಲಿದೆ. ಎಲ್ಲಾ ಪರೀಕ್ಷೆಗಳು ■6ನೇ ಪುಟಕ್ಕೆ

ದ್ವಿತೀಯ ಪಿಯುಸಿ ಪರೀಕ್ಷಾ ವೇಳಾಪಟ್ಟಿ

ಮಾರ್ಚ್–1	ಶನಿವಾರ: ಕನ್ನಡ, ಅರೇಬಿಕ್.
ಮಾರ್ಚ್–3	ಸೋಮವಾರ: ಗಣಿತ, ಶಿಕ್ಷಣ ಶಾಸ್ತ್ರ ತರ್ಕಶಾಸ್ತ್ರ ವ್ಯವಹಾರ ಅಧ್ಯಯನ.
ಮಾರ್ಚ್–4	ಮಂಗಳವಾರ: ತಮಿಳು, ತೆಲುಗು, ಮಲಯಾಳಂ, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್.
ಮಾರ್ಚ್–5	ಬುಧವಾರ: ರಾಜ್ಯಶಾಸ್ತ್ರ, ಸಂಖ್ಯಾಶಾಸ್ತ್ರ.
ಮಾರ್ಚ್–7	ಶುಕ್ರವಾರ: ಇತಿಹಾಸ, ಭೌತಶಾಸ್ತ್ರ.
ಮಾರ್ಚ್–8	ಶನಿವಾರ: ಹಿಂದಿ.
ಮಾರ್ಚ್–10	ಸೋಮವಾರ: ಐಚ್ಛಿಕ ಕನ್ನಡ, ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಗೃಹ ವಿಜ್ಞಾನ.
ಮಾರ್ಚ್–12	ಬುಧವಾರ: ಮನಃಶಾಸ್ತ್ರ, ರಸಾಯನಶಾಸ್ತ್ರ, ಮೂಲ ಗಣಿತ.
ಮಾರ್ಚ್–13	ಗುರುವಾರ: ಅರ್ಥಶಾಸ್ತ್ರ.
ಮಾರ್ಚ್–15	ಶನಿವಾರ: ಇಂಗ್ಲಿಷ್.
ಮಾರ್ಚ್–17	ಸೋಮವಾರ: ಭೂಗೋಳಶಾಸ್ತ್ರ, ಜೀವಶಾಸ್ತ್ರ
ಮಾರ್ಚ್–18	ಮಂಗಳವಾರ: ಸಮಾಜಶಾಸ್ತ್ರ, ವಿದ್ಯುನ್ಮಾನಶಾಸ್ತ್ರ, ಗಣಕ ವಿಜ್ಞಾನ.
ಮಾರ್ಚ್–19	ಬುಧವಾರ: ಹಿಂದೂಸ್ತಾನಿ ಸಂಗೀತ, ಮಾಹಿತಿ ತಂತ್ರಜ್ಞಾನ, ರಿಟೇಲ್, ಆಟೋಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಅಂಡ್ ವೆಲ್‌ನೆಸ್ ಪರೀಕ್ಷೆಗಳು

ಎಸ್‌ಎಸ್‌ಎಲ್‌ಸಿ ಪರೀಕ್ಷೆ ವೇಳಾ ಪಟ್ಟಿ

ಮಾರ್ಚ್–20	ಗುರುವಾರ: ಕನ್ನಡ, ತೆಲುಗು, ಹಿಂದಿ, ಮರಾಠಿ, ತಮಿಳು, ಉರ್ದು, ಇಂಗ್ಲಿಷ್, ಸಂಸ್ಕೃತ.
ಮಾರ್ಚ್–22	ಶನಿವಾರ: ಸಮಾಜ ವಿಜ್ಞಾನ.
ಮಾರ್ಚ್ 24	ಸೋಮವಾರ: ಇಂಗ್ಲಿಷ್, ಕನ್ನಡ.
ಮಾರ್ಚ್–27	ಗುರುವಾರ: ಗಣಿತ, ಸಮಾಜ ಶಾಸ್ತ್ರ.
ಮಾರ್ಚ್–29	ಶನಿವಾರ, ತೃತೀಯ ಭಾಷೆ: ಹಿಂದಿ, ಕನ್ನಡ, ಇಂಗ್ಲೀಷ್, ಸಂಸ್ಕೃತ, ತುಳು, ಕೊಂಕಣಿ, ಉರ್ದು, ಅರೇಬಿಕ್, ಪರ್ಷಿಯನ್. ಹಾಗೂ ಎನ್‌ಎಸ್‌ಕ್ಯೂಎಫ್ ವಿಷಯಗಳು– ಮಾಹಿತಿ ತಂತ್ರಜ್ಞಾನ, ಆಟೋಮೊಬೈಲ್, ಬ್ಯೂಟಿ ಅಂಡ್ ವೆಲ್‌ನೆಸ್, ಅಪರೆಲ್ ಮೇಡ್ ಅಪ್ಸ್ ಅಂಡ್ ಹೋಂ ಫರ್ನಿಷಿಂಗ್, ಎಲ್‌ಕ್ಟ್ರಾನಿಕ್ಸ್ ಅಂಡ್ ಹಾರ್ಡ್‌ವೇರ್. ಈ ವಿಷಯದ ಪರೀಕ್ಷೆಗಳು ಬೆಳಗ್ಗೆ 10 ರಿಂದ 12–15ರವರೆಗೆ.
ಏಪ್ರಿಲ್–01	ಮಂಗಳವಾರ: ಅರ್ಥಶಾಸ್ತ್ರ.
ಏಪ್ರಿಲ್–02	ಬುಧವಾರ: ವಿಜ್ಞಾನ, ರಾಜ್ಯಶಾಸ್ತ್ರ, ಹಿಂದೂಸ್ಥಾನಿ ಸಂಗೀತ, ಕರ್ನಾಟಕ ಸಂಗೀತ ಪರೀಕ್ಷೆಗಳು

ಮೈಸೂರಿನ ಮುನೇಶ್ವರನಗರದ ಮನೆಗಳಿಗೆ ವಕ್ಫ್ ಬೋರ್ಡ್‌ನಿಂದ ನೋಟಿಸ್

ನೀವು ಹೆದರಬೇಡಿ, ನಾವಿದ್ದೇವೆ; ಆ ನೋಟಿಸ್‌ಗೆ ಯಾವ ಬೆಲೆಯನ್ನೂ ನೀಡಬೇಡಿ!

ವಿಧಾನಸಭೆ ವಿಪಕ್ಷ ನಾಯಕ ಅಶೋಕ್ ನೇತೃತ್ವದ ಬಿಜೆಪಿ ತಂಡದಿಂದ ಅಭಯ

● ಮುನೇಶ್ವರನಗರದಲ್ಲಿ 101 ಮಂದಿಗೆ ವಕ್ಫ್ ಮಂಡಳಿ ವಾರ್ನಿಂಗ್ ● ಶ್ರೀ ಬಸವ ಜ್ಞಾನ ಮಂದಿರ ಕೂಡ ವಕ್ಫ್ ಆಸ್ತಿಯಂತೆ ● ನೋಟಿಸ್‌ಗೆ ಉತ್ತರಿಸಬೇಡಿ; ಬೆಲೆಯನ್ನೇ ನೀಡಬೇಡಿ

ಮೈಸೂರು, ಡಿ.2(ಬಿಎಲ್‌ಯು)– ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ನೇತೃತ್ವದ ಬಿಜೆಪಿ ತಂಡ ಮೈಸೂರಿನ ಗುಂಡೂರಾವ್‌ನಗರದ ಬಳಿಯ ಮುನೇಶ್ವರ ನಗರಕ್ಕೆ ಇಂದು ಭೇಟಿ ನೀಡಿ ವಕ್ಫ್ ಆಸ್ತಿ ಎಂದು ನೋಟಿಸ್ ಬಂದಿರುವ ಬಡಾವಣೆಯ ನಿವಾಸಿಗಳು ಹಾಗೂ ಮಠಾಧೀಶರನ್ನು ಭೇಟಿ ಮಾಡಿದರು.

ರೈತರು, ದೇವಸ್ಥಾನ, ಮಠ ಹಾಗೂ ಸರ್ಕಾರಿ ಶಾಲೆಯ ಆಸ್ತಿಗಳು ವಕ್ಫ್ ಆಸ್ತಿ ಎಂದು ಪರಿಗಣಿಸಿರುವ ಸರ್ಕಾರದ ವಿರುದ್ಧ ಬಿಜೆಪಿ ಸಮರ ಸಾರಿದೆ. ಅಶೋಕ್ ನೇತೃತ್ವದ ತಂಡ ಇಂದು ಮುನೇಶ್ವರನಗರಕ್ಕೆ ಭೇಟಿ ನೀಡಿ ಅಲ್ಲಿನ ನಿವಾಸಿಗಳಿಂದ ಅಹವಾಲು ಸ್ವೀಕರಿಸಿತು. ಮುನೇಶ್ವರ ನಗರದ ಶ್ರೀ ಬಸವ ಜ್ಞಾನ ಮಂದಿರದಲ್ಲಿ ಸಮಾವೇಶಗೊಂಡಿದ್ದ ಬಡಾವಣೆ ನಿವಾಸಿಗಳನ್ನು ಭೇಟಿ ಮಾಡಿದ ಅಶೋಕ್, ಅವರ ಸಮಸ್ಯೆ ಆಲಿಸಿದರು. ಮೈಸೂರು ಕಸಬಾ ಹೋಬಳಿ ಸರ್ವೆ ನಂಬರ್ 153 ರಲ್ಲಿ 101 ಮನೆಗಳಿದ್ದು, ಹತ್ತಾರು ವರ್ಷಗಳಿಂದ ಇಲ್ಲಿ ಮನೆ ನಿರ್ಮಿಸಿ ವಾಸ ಮಾಡುತ್ತಿದ್ದೇವೆ. ಆದರೆ ಇತ್ತೀಚೆಗೆ ವಕ್ಫ್ ಆಸ್ತಿ ಎಂದು ದಾಖಲಾತಿಯಲ್ಲಿ ಉಲ್ಲೇಖಿಸಲಾಗಿದೆ. ವಕ್ಫ್ ಬೋರ್ಡ್‌ನವರು ನೋಟಿಸ್ ನೀಡಿದ ಸಂದರ್ಭದಲ್ಲಿ ಇಲ್ಲಿನ ನಿವಾಸಿಗಳೆಲ್ಲಾ ಬಸ್ ಮಾಡಿಕೊಂಡು ಬೆಂಗಳೂರಿಗೆ ಹೋಗುತ್ತಿದ್ದೇವೆ. ವಕ್ಫ್ ಇಲಾಖೆ ಕಚೇರಿಗೆ ಹೋಗಿ ಹಕ್ಕು ಮಂಡಿಸುತ್ತಿದ್ದೇವೆ ಎಂದು ನಿವಾಸಿಗಳು ತಮ್ಮ ಬವಣೆ ತೋಡಿಕೊಂಡರು. ಶ್ರೀರಾಂಪುರ ಪಂಚಾಯಿತಿಯಿಂದ ಬಡಾವಣೆ ನಿವಾಸಿಗಳಿಗೆ 1974–75ನೇ ಸಾಲಿನಲ್ಲಿ ನೀಡಿರುವ ಡಿಮ್ಯಾಂಡ್ ರಿಜಿಸ್ಟರ್ ಪ್ರತಿ ನಮ್ಮ ಬಳಿ ಇದೆ. ನಾವು ವಾಸ ಮಾಡುತ್ತಿರುವ ಮನೆಗಳಿಗೆ ತೆರಿಗೆ ಕೂಡ ಪಾವತಿ ಮಾಡುತ್ತಿದ್ದೇವೆ. ಕುಡಿಯುವ ನೀರು, ವಿದ್ಯುತ್ ಸೇರಿದಂತೆ ಸರ್ಕಾರದ ಹಲವು ಸೌಲಭ್ಯ ■6ನೇ ಪುಟಕ್ಕೆ



ಮೈಸೂರಿನ ಗುಂಡೂರಾವ್ ನಗರದ ಬಳಿಯ ಮುನೇಶ್ವರನಗರಕ್ಕೆ ಸೋಮವಾರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಭೇಟಿ ನೀಡಿ, ವಕ್ಫ್ ತಿದ್ದುಪಡಿಯಾಗಿರುವ ಮನೆ ಮಾಲೀಕರ ಅಹವಾಲು ಸ್ವೀಕರಿಸಿದರು.

ದಟ್ಟಗಳ್ಳಿಯಲ್ಲಿ 48 ಮಂದಿಗೆ ನಿವೇಶನ ಮಂಜೂರು; ಮುಡಾ ನಿರ್ಣಯ ರದ್ದು

● 2023ರ ಮಾರ್ಚ್ 21ರ ಮುಡಾ ಸಭೆಯಲ್ಲಿ ವಿಷಯ ಸಂಖ್ಯೆ 13(4)ರಲ್ಲಿ ನಿರ್ಣಯ ಮಾಡಲಾಗಿತ್ತು ● ಹೈಕೋರ್ಟ್‌ನಲ್ಲಿ ಮುಡಾ ಪರವಾಗಿ ಆದೇಶವಿದ್ದರೂ ಅದನ್ನು ಧಿಕ್ಕರಿಸಿದ್ದ ಹಿಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ● ಕೋರ್ಟ್ ಆದೇಶವನ್ನು ಬದಿಗಿರಿಸಿ ನಿರ್ಣಯ ಕೈಗೊಳ್ಳುವ ಎದೆಗಾರಿಕೆ ಆಯುಕ್ತರಿಗೆ ಬಂದಿದ್ದಾದರೂ ಹೇಗೆ!? ● ಅಂದಿನ ಸಭೆಯಲ್ಲಿ ಹಾಜರಿದ್ದವರೆಲ್ಲರೂ ಹೊಣೆಗಾರರಾದರೆ ಇವರಿಗೆಲ್ಲಾ ಏನು ಶಿಕ್ಷೆ!



ಮುಡಾ ಕಚೇರಿ




ಎಸ್.ಟಿ.ರವಿಕುಮಾರ್

ಮೈಸೂರು, ಡಿ. 2–ಶೇ.50:50ರ ಅನುಪಾತ, ಪ್ರೋತ್ಸಾಹದಾಯಕ ಹಾಗೂ ಬದಲಿ ಹೆಸರಿನಲ್ಲಿ ಸುಮಾರು ಐದು ಸಾವಿರ ಕೋಟಿಗೂ ಹೆಚ್ಚು ಬೆಲೆಬಾಳುವ ಸಾವಿರಾರು ನಿವೇಶನಗಳನ್ನು ಮನಸ್ಸೋ ಇಚ್ಛೆ ಮಂಜೂರು ಮಾಡಿ ಬ್ರಹ್ಮಾಂಡ ಭ್ರಷ್ಟಾಚಾರ ಮಾಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಹಗರಣ ಕುರಿತಂತೆ ನಡೆಯುತ್ತಿರುವ ನಾನಾ ತನಿಖಾ ವರದಿಗಳು ಹೊರ ಬೀಳುವ ಮುನ್ನವೇ ತೀವ್ರ ವಿವಾದಕ್ಕೆ ಎಡೆಮಾಡಿಕೊಟ್ಟಿದ್ದ ಮೈಸೂರಿನ ದಟ್ಟಗಳ್ಳಿ ಬಡಾವಣೆಯಲ್ಲಿ 48 ಮಂದಿಗೆ ನಿವೇಶನ ನೀಡಲು 2023ರ ಮಾರ್ಚ್ 21 ರಂದು ಮುಡಾ ಸಭೆಯಲ್ಲಿ ಕೈಗೊಂಡಿದ್ದ ನಿರ್ಣಯವನ್ನು (ಸಭಾ ವಿಷಯ ಸಂಖ್ಯೆ 13(4)) ಸರ್ಕಾರ ನವೆಂಬರ್ 30ರಂದು ರದ್ದುಗೊಳಿಸಿದೆ. ಈ ಸಂಬಂಧ ಆದೇಶ ಹೊರಡಿಸಿರುವ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಕೆ. ಲತಾ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2023ರ ಮಾರ್ಚ್ 21ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 13(4)ರಲ್ಲಿ ಕೈಗೊಂಡಿರುವ ನಿರ್ಣಯವನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರ ಕಲಂ 67(3)ರಡಿ ರದ್ದುಪಡಿಸಿದ್ದಾರೆ. ಅದರಂತೆ ಮೈಸೂರಿನ ದಟ್ಟಗಳ್ಳಿ ಸರ್ವೆ ನಂಬರ್‌ಗಳಾದ 15, 27, 32, 38, 39, 40 ಹಾಗೂ 41ರಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ಈ ಹಿಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ 2023ರ ಏಪ್ರಿಲ್ 29ರಂದು ಒಂದೇ ದಿನ ಹೊರಡಿಸಿದ ಅಧಿಕೃತ ಜ್ಞಾಪನದಂತೆ 2023ರ ಸೆಪ್ಟೆಂಬರ್ 27ರಂದು ■6ನೇ ಪುಟಕ್ಕೆ

ಮೈಸೂರು ಮಿತ್ರ

ಮಂಗಳವಾರ 3 ಡಿಸೆಂಬರ್ 2024

ನಾಳೆ ವಿಷ್ಣುವರ್ಧನ್ ಚಿತ್ರಗಳ ಜನಪ್ರಿಯ ಗೀತೆಗಳ ಗಾಯನ 'ಸಿಂಹದ ನೆನಪು'



ಮೈಸೂರು,ಡಿ.2(ಎಂಟಿವೈ)– ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಪುಣ್ಯಸ್ಮರಣೆ ಅಂಗವಾಗಿ ಡಿ.4ರಂದು ಸಂಜೆ 5 ಗಂಟೆಗೆ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ 'ಸಿಂಹದ ನೆನಪು' ವಿಷ್ಣುವರ್ಧನ್ ಅವರ ಚಲನಚಿತ್ರಗಳ ಗೀತೆ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಪಾತಿ ಫೌಂಡೇಷನ್ ಅಧ್ಯಕ್ಷ ಎಂ.ಡಿ.ಪಾರ್ಥಸಾರಥಿ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಾತಿ ಫೌಂಡೇಷನ್ ವತಿಯಿಂದ ಸಿಂಹದ ನೆನಪಿನ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದ್ದು, ಡಾ.ವಿಷ್ಣುವರ್ಧನ ಅಭಿನಯದ ಸೂಪರ್ ಹಿಟ್ ಚಲನಚಿತ್ರಗಳ ಗೀತೆಗಳನ್ನು ಈ ವೇಳೆ ಪ್ರಸ್ತುತಪಡಿಸಲಾಗುತ್ತದೆ. ಹಿರಿಯ ಸಂಗೀತ ಕಲಾವಿದ ಡಾ.ಎ.ಡಿ. ಶ್ರೀನಿವಾಸ್ ಮತ್ತು ತಂಡ ಕಾರ್ಯಕ್ರಮ ನಡೆಸಿಕೊಡಲಿದೆ. ಸುಮಾರು 30ಕ್ಕೂ ಹೆಚ್ಚು ಗೀತೆಗಳನ್ನು ಹಾಡಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಡಾ.ವಿಷ್ಣುವರ್ಧನ್ ಅಭಿಮಾನಿ ಬಳಗದ ಪದಾಧಿಕಾರಿಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಗೀತ ಗಾಯನ ಕಾರ್ಯಕ್ರಮ ಕರೋಕೆ ಕಾರ್ಯಕ್ರಮವಾಗಿದ್ದು, ಸಾರ್ವಜನಿಕರಿಗೆ ಉಚಿತ ಪ್ರವೇಶಾವಕಾಶವಿದೆ. ಸಭಾಂಗಣದ ಹೊರಗೆ ಗಾಯನ ಕಾರ್ಯಕ್ರಮವನ್ನು ದೊಡ್ಡ ಎಲ್‌ಇಡಿ ಪರದೆ ಮೂಲಕವೂ ಬಿತ್ತರಿಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಮುಖಂಡರಾದ ವಿಕ್ರಂ ಅಯ್ಯಂಗಾರ್, ಡಾ.ಎ.ಡಿ.ಶ್ರೀನಿವಾಸ ಹಾಗೂ ಕೃಷ್ಣಮೂರ್ತಿ ಇದ್ದರು.

'ಲಾ ಗೈಡ್' ಕ್ಯಾಲೆಂಡರ್, ಡೈರಿ ಬಿಡುಗಡೆ



ಮೈಸೂರಿನ ಮೆಟ್ರೋಪೋಲ್ ಹೋಟೆಲ್ ಸಭಾಂಗಣದಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ 'ಲಾ ಗೈಡ್' ಕನ್ನಡ ಕಾನೂನು ಮಾಸಿಕ ಪತ್ರಿಕೆ ವತಿಯಿಂದ ಹೊರತಂದಿರುವ 2025ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿಯನ್ನು ಬಿಡುಗಡೆ ಮಾಡಲಾಯಿತು. ಚಿತ್ರದಲ್ಲಿ ರಾಜ್ಯ ಚುನಾವಣಾ ಆಯುಕ್ತ ಸಂಗ್ರೇಶಿ, ಹೆಚ್ಚುವರಿ ಜಿಲ್ಲಾಧಿಕಾರಿ ಶಿವರಾಜ್, ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಡೈರಿ, ಕ್ಯಾಲೆಂಡರ್‌ಗಳನ್ನು ಬಿಡುಗಡೆ ಮಾಡಿದರು. ಮಾಜಿ ಸಚಿವ ಹಾಗೂ ಶಾಸಕ ಎ.ಮಂಜು, ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್, ಹಿರಿಯ ವಕೀಲ ಹರೀಶ್‌ಕುಮಾರ್ ಹೆಗಡೆ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ವಿಧಾನ ಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, 'ಲಾ ಗೈಡ್' ಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ವಕೀಲ ರಾಜೇಶ್ ಇದ್ದಾರೆ.

ಮೈಸೂರು,ಡಿ.2(ಆರ್‌ಕೆ)–ಮೆಟ್ರೋಪೋಲ್ ಹೋಟೆಲ್ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ 'ಲಾ ಗೈಡ್' ಕಾನೂನು ಮಾಸಿಕ ಪತ್ರಿಕೆ ವತಿಯಿಂದ ಹೊರತಂದಿರುವ 2025–26ನೇ ಸಾಲಿನ ಕ್ಯಾಲೆಂಡರ್ ಹಾಗೂ ಡೈರಿಯನ್ನು ಬಿಡುಗಡೆ ಮಾಡಲಾಯಿತು.

ರಾಜ್ಯ ಚುನಾವಣಾ ಆಯುಕ್ತ ಸಂಗ್ರೇಶಿ, ಹೆಚ್ಚುವರಿ ಜಿಲ್ಲಾಧಿಕಾರಿ ಶಿವರಾಜ್, ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಡೈರಿ, ಕ್ಯಾಲೆಂಡರ್‌ಗಳನ್ನು ಬಿಡುಗಡೆ ಮಾಡಿದರು. ಶಾಸಕ ಎ.ಮಂಜು, ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್, ಹಿರಿಯ ವಕೀಲ ಹರೀಶ್‌ಕುಮಾರ್ ಹೆಗಡೆ, ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಸ್.ಲೋಕೇಶ್, ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡ, 'ಲಾ ಗೈಡ್' ಮಾಸ ಪತ್ರಿಕೆ ಸಂಪಾದಕರಾದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಇತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಈ ಸಂದರ್ಭ ಸೀಮಾ ಲಾಟ್ಕರ್ ಮತ್ತು ಹೆಚ್ಚುವರಿ ಜಿಲ್ಲಾಧಿಕಾರಿ ಶಿವರಾಜ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಇದೇ ವೇಳೆ ಮಾತನಾಡಿದ ಸೀಮಾ ಲಾಟ್ಕರ್, ನನಗೆ ಮಾತಿಗಿಂತ ಕೆಲಸದ ಮೇಲೆ ಹೆಚ್ಚು ನಂಬಿಕೆ, ವಿಶ್ವಾಸವಿದೆ. ಮಹಿಳಾ ಪೊಲೀಸ್ ಆಯುಕ್ತರಾಗಿ ಮೈಸೂರು ನಗರಕ್ಕೆ ನಿಯೋಜನೆಗೊಂಡಿರುವ ಬಗ್ಗೆ ನನಗೆ ಹೆಮ್ಮೆಯೂ ಇದೆ. ಸಂಕಷ್ಟದಲ್ಲಿರುವ ಅಬಲರು, ಅಸಹಾಯಕರು, ಸಹಾಯ ಕೋರಿದಾಗ ತಕ್ಷಣ ಸ್ಪಂದಿಸುತ್ತೇವೆ. ಈ ವಿಚಾರದಲ್ಲಿ ನನ್ನ ಕಚೇರಿ ಸದಾ ಮುಕ್ತವಾಗಿರುತ್ತದೆ ಎಂದರು.

ಎಡಿಸಿ ಶಿವರಾಜ್ ಮಾತನಾಡಿ, ನ್ಯಾಯ ದೇವತೆಯ ವಿಗ್ರಹ ಕೇವಲ ಸಾಂಕೇತಿಕವಷ್ಟೆ, ನಿಜವಾದ ದೇವರು ಎಂದರೆ, ಕಷ್ಟದಲ್ಲಿರುವ ಕಕ್ಷಿದಾರರಿಗೆ ನ್ಯಾಯಕೊಡಿಸುವುದು ವಕೀಲರ ಧರ್ಮ. ಹಾಗಾಗಿ ಈ ವೃತ್ತಿ ಅತ್ಯಂತ ಪವಿತ್ರವಾದುದು. ಈ ನಿಟ್ಟಿನಲ್ಲಿ ಲಾ ಗೈಡ್ ಪತ್ರಿಕೆ ಮೂಲಕ ವೆಂಕಟೇಶ್ ಅವರು ಮಾಡುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಹಿರಿಯ ಪತ್ರಕರ್ತ ಕೃಷ್ಣಪ್ರಸಾದ್ ಮಾತನಾಡಿ, 'ಲಾ ಗೈಡ್' ಕ್ಯಾಲೆಂಡರ್‌ನ ವಿನ್ಯಾಸ ಹಾಗೂ ವೈವಿಧ್ಯತೆ ಮೆಚ್ಚುವಂತಹುದು. 2025ರ ವರ್ಷದಲ್ಲಿ ಬರುವ ಒಟ್ಟು ರಜಾ ದಿನಗಳಲ್ಲಿ ಬಹುತೇಕ ರಜಾದಿನಗಳು ಭಾನುವಾರವೇ ಆಗಿರುವುದು ವಿಶೇಷ. ಕ್ಯಾಲೆಂಡರ್‌ನಲ್ಲಿ ವಿವಿಧ ದೇಶಗಳಲ್ಲಿ ನ್ಯಾಯದೇವತೆ ಚಿತ್ರಗಳು ಇವೆ ಎಂದು ಹೇಳಿ, ಕ್ಯಾಲೆಂಡರ್ ಬೆಳೆದು ಬಂದ ಹಿನ್ನೆಲೆಯನ್ನೂ ಪ್ರಸ್ತಾಪಿಸಿದರು.

ಡಿ.14ರಂದು 'ಸ್ವರ ಸಂಭ್ರಮ' ಕರೋಕೆ ಗಾಯನ ಕಾರ್ಯಕ್ರಮ

ಮೈಸೂರು,ಡಿ.2(ಎಂಟಿವೈ)– ಮೈಸೂರಿನ ಪುರಭವನದಲ್ಲಿ ಡಿ.14ರಂದು ಬೆಳಗ್ಗೆ 11 ಗಂಟೆಯಿಂದ ರಾತ್ರಿ 8 ಗಂಟೆವರೆಗೆ 'ಸ್ವರ ಸಂಭ್ರಮ' ಕರೋಕೆ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ಸಂಸ್ಥೆಯ ಖಜಾಂಚಿ ತೇಜಸ್ ಪೃಥ್ವಿರಾಜ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದಯೋನ್ಮುಖ ಗಾಯಕರಿಗೆ ವೇದಿಕೆ ಕಲ್ಪಿಸುವುದಕ್ಕಾಗಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಇದುವರೆಗೆ ಯಾವುದೇ ವೇದಿಕೆ ಸಿಗದೇ ಇರುವ ಪ್ರತಿಭೆಗೆ ಇದೊಂದು ಸದವಕಾಶ. ಬೆಳಗ್ಗೆಯಿಂದ ರಾತ್ರಿವರೆಗೂ ಹಲವು ಗಾಯಕರು ಪ್ರಸಿದ್ಧ ಗೀತೆಗಳ ಗಾಯನ ನಡೆಸಿಕೊಡಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 8867688676 ಅನ್ನು ಸಂಪರ್ಕಿಸುವಂತೆ ಕೋರಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ಸಂಸ್ಥೆಯ ಡಾ.ಮೌಲ್ಯ ಜಯಕುಮಾರ್, ಅಮೀನಾ ಬೇಗಂ, ಹೇಮಲತಾ ಇದ್ದರು.

ಇಂಡಿಯಾ ಬುಕ್ ಆಫ್ ರೆಕಾರ್ಡ್‌ಗೆ ಸೇರ್ಪಡೆಗೊಂಡ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ವಿದ್ಯಾರ್ಥಿಗಳ ಸಾಧನೆ





ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಪ್ರವೇಶ ಪಡೆದ ಭವಿಶ್‌ಗೌಡ ಹಾಗೂ ಸಮೃದ್ಧ ಅವರನ್ನು ಅಭಿನಂದಿಸಲಾಯಿತು.

ಮೈಸೂರು,ಡಿ.2–ಮೈಸೂರಿನ ವಿದ್ಯಾರ್ಥಿಗಳ ವಿಶಿಷ್ಟ ಸಾಧನೆಗೆ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ಮನ್ನಣೆ ನೀಡಿದೆ.

ವಿಜಯನಗರದ ರಾಷ್ಟ್ರೋತ್ಥಾನ ವಿದ್ಯಾ ಕೇಂದ್ರದ ಈ ಇಬ್ಬರು ವಿದ್ಯಾರ್ಥಿಗಳು ತಮ್ಮ ವಿಶಿಷ್ಟ ಸಾಧನೆ ಮೂಲಕ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಸ್ಥಾನ ಪಡೆಯುವ ಮೂಲಕ ನಗರಕ್ಕೆ ಹೆಮ್ಮೆ ತಂದಿದ್ದಾರೆ. ಭಗವದ್ಗೀತೆಯ 12ನೇ ಅಧ್ಯಾಯದ 20 ಶ್ಲೋಕಗಳನ್ನು ಕೇವಲ 1 ನಿಮಿಷ ಮತ್ತು 24 ಸೆಕೆಂಡುಗಳಲ್ಲಿ ಪಠಿಸುವ ಮೂಲಕ ಏಳನೇ ತರಗತಿಯ ವಿದ್ಯಾರ್ಥಿ (ದ್ರೋಣ) ಭವಿಶ್‌ಗೌಡ ಜೆ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ಗೆ ಪ್ರವೇಶ ಪಡೆದಿದ್ದಾರೆ.

ಶಾಲೆಯ ಇನ್ನೋರ್ವ ವಿದ್ಯಾರ್ಥಿ, 7ನೇ ತರಗತಿಯ ಸಮೃದ್ಧ್ ಎಂ.ಕೆ., (ದ್ರೋಣ) ವಿಷ್ಣು ಸಹಸ್ರನಾಮದ 108 ಶ್ಲೋಕಗಳನ್ನು 5 ನಿಮಿಷ, 2 ಸೆಕೆಂಡುಗಳು ಮತ್ತು 19 ಮಿಲಿ ಸೆಕೆಂಡ್‌ಗಳಲ್ಲಿ ಪಠಿಸುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ಇಬ್ಬರು ವಿದ್ಯಾರ್ಥಿಗಳ ಸಾಧನೆ–ದಾಖಲೆ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಸೃಷ್ಟಿಸಲಾಗುತ್ತಿರುವ ಅವಕಾಶ ಹಾಗೂ ನೀಡಲಾಗುತ್ತಿರುವ ಅತ್ಯುತ್ತಮ ಶಿಕ್ಷಣಕ್ಕೆ ಉದಾಹರಣೆ ಎಂದು ಪ್ರಾಂಶುಪಾಲ ಶಿವರಾಜ್ ತಿಳಿಸಿದ್ದಾರೆ.

ನಗರ ಪೊಲೀಸ್ ಆಯುಕ್ತರು, ಅಪರ ಜಿಲ್ಲಾಧಿಕಾರಿಗೆ ಸನ್ಮಾನ...





ಲಾ ಗೈಡ್ ಕನ್ನಡ ಕಾನೂನು ಪತ್ರಿಕೆಯ 2025ರ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆ ಸಮಾರಂಭದಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಹಾಗೂ ಅಪರ ಜಿಲ್ಲಾಧಿಕಾರಿ ಶಿವರಾಜು ಅವರನ್ನು ಸನ್ಮಾನಿಸಲಾಯಿತು.

ರಾಷ್ಟ್ರೀಯ ಈಜು ಸ್ಪರ್ಧೆ: 3 ಕಂಚು ಗೆದ್ದ ಜೀವಾಂಶ್



ಮೈಸೂರು, ಡಿ.2–ಗುಜರಾತಿನ ರಾಜ್‌ಕೋಟ್‌ನ ಸರ್ದಾರ್ ವಲ್ಲಭ ಬಾಯ್ ಪಟೇಲ್ ಈಜು ಕೊಳದಲ್ಲಿ ನ.24ರಿಂದ ನ.30 ರವರೆಗೆ ನಡೆದ 'ಸ್ಕೂಲ್ ಗೇಮ್ಸ್ ಫೆಡರೇಶನ್ ಆಫ್ ಇಂಡಿಯಾ' ಆಯೋಜಿಸಿದ್ದ 68ನೇ ರಾಷ್ಟ್ರ ಮಟ್ಟದ ಈಜು ಕ್ರೀಡಾಕೂಟದಲ್ಲಿ ಮೈಸೂರಿನ ಸುಬ್ರಹ್ಮಣ್ಯ ಜೀವಾಂಶ್ ಮೂರು ಕಂಚಿನ ಪದಕ ಪಡೆದು, ಉತ್ತಮ ಪ್ರದರ್ಶನ ನೀಡಿದ್ದಾರೆ. ಮೈಸೂರಿನ ಜೆ.ಪಿ. ನಗರದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಈಜುಕೊಳದ ಗ್ಲೋಬಲ್ ಸ್ಪೋರ್ಟ್ಸ್ ಅಸೋಸಿಯೇಷನ್‌ನಲ್ಲಿ ಪವನ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ತರಬೇತಿ ಪಡೆಯುತ್ತಿರುವ ಜೀವಾಂಶ್, ಸ್ಕೂಲ್ ಗೇಮ್ಸ್ ಫೆಡರೇಷನ್ ಆಫ್ ಇಂಡಿಯಾಗೆ ಮೈಸೂರಿನಿಂದ ಆಯ್ಕೆಯಾಗಿದ್ದ ಏಕೈಕ ಈಜುಪಟು. ಸಿಬಿಎಸ್ಸಿ ಬೋರ್ಡ್, ಸ್ಟೇಟ್ ಬೋರ್ಡ್ ಮತ್ತು ಸ್ಕೂಲ್ ಗೇಮ್ಸ್ ಸೆಂಟ್ರಲ್ ವಿಭಾಗದ ವಿದ್ಯಾರ್ಥಿಗಳಿಗೆ ನಡೆದ ಈ ಕ್ರೀಡಾಕೂಟದಲ್ಲಿ 3500 ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದರು. 14 ವರ್ಷದೊಳಗಿನ ಗುಂಪಿನಲ್ಲಿ ಜೀವಾಂಶ್, * 100 ಮೀ. ಬಟರ್ ಫ್ಲೈ (1.04.88)ನಲ್ಲಿ ಕಂಚು.

* 200ಮೀ. ಬಟರ್ ಫ್ಲೈ (2.20.01)ನಲ್ಲಿ ಕಂಚು ಹಾಗೂ * 200 ಮೀ. ವೈಯಕ್ತಿಕ ಮೆಡ್ಲಿ (2.28.64) ಯಲ್ಲಿ ಕಂಚಿನ ಪದಕ ಪಡೆದು ಸಾಧನೆಗೈದಿದ್ದಾರೆ. ಮೈಸೂರಿನ ಜೆ.ಪಿ.ನಗರದ ನಿವಾಸಿಗಳಾದ ಎಂ.ಎಸ್. ಮಂಜುನಾಥ್ ಮತ್ತು ಲಕ್ಷ್ಮಿ ದಂಪತಿ ಪುತ್ರ ಜೀವಾಂಶ್ ಡಿಎವಿ ಶಾಲೆಯಲ್ಲಿ 8ನೇ ತರಗತಿಯಲ್ಲಿ ಓದುತ್ತಿದ್ದಾರೆ.

ಕೆಎಂಪಿಕೆ ಟ್ರಸ್ಟ್‌ನಿಂದ ಹಾಡಿ ಜನರಿಗೆ ಹೊದಿಕೆ ವಿತರಣೆ



ಹೆಚ್.ಡಿ.ಕೋಟೆಯ ಹಾಡಿ ಜನರಿಗೆ ಹೊದಿಕೆ ವಿತರಿಸಲಾಯಿತು.

ಮೈಸೂರು,ಡಿ.2–ಚಳಿಗಾಲದ ಕಾರಣ ಎಚ್.ಡಿ.ಕೋಟೆಯ ಕಾಡಿನಲ್ಲಿ ವಾಸಿಸುತ್ತಿರುವ ಹಾಡಿ ಜನರಿಗೆ ಕೆಎಂ ಪಿಕೆ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಹೊದಿಕೆ ವಿತರಿಸಿ ಆರೋಗ್ಯದ ಬಗ್ಗೆ ಅವರಲ್ಲಿ ಜಾಗೃತಿ ಮೂಡಿಸಲಾಯಿತು.

ಈ ವೇಳೆ ಹಿರಿಯ ಪತ್ರಕರ್ತ ಅನಿಲ್ ಕುಮಾರ್ ಮಾತನಾಡಿ, ಇತ್ತೀಚೆಗೆ ವ್ಯಾಪಕವಾದ ಚಳಿ ಪ್ರಾರಂಭವಾಗಿದ್ದು, ಈ ಸಂದರ್ಭದಲ್ಲಿ ದೇಹಕ್ಕೆ ವಿವಿಧ ರೀತಿಯ ತೊಂದರೆಗಳಾಗುತ್ತವೆ. ಆದ್ದರಿಂದ ಮುಂಜಾಗ್ರತೆ ತೆಗೆದುಕೊಳ್ಳುವುದು ಅಗತ್ಯವಾಗಿದೆ ಎಂದು ಹೇಳಿದರು.

ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಚಕ್ರಪಾಣಿ, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಮೋಹನ್ ಕುಮಾರ್ ಗೌಡ ಹಾಗೂ ಇನ್ನಿತರರು ಹಾಜರಿದ್ದರು.

ವಿನಾಯಕ ಗೆಳೆಯರ ಬಳಗದಿಂದ ಕನ್ನಡ ರಾಜ್ಯೋತ್ಸವ: ಆರೋಗ್ಯ ತಪಾಸಣಾ ಶಿಬಿರ




ಮೈಸೂರಿನ ವಿದ್ಯಾರಣ್ಯಪುರಂನ ಎರಡನೇ ಮುಖ್ಯರಸ್ತೆಯ ಶ್ರೀ ವಿನಾಯಕ ಗೆಳೆಯರ ಬಳಗದ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಮೈಸೂರು,ಡಿ.2–ಮೈಸೂರಿನ ವಿದ್ಯಾರಣ್ಯಪುರಂನ ಎರಡನೇ ಮುಖ್ಯರಸ್ತೆಯ ಶ್ರೀ ವಿನಾಯಕ ಗೆಳೆಯರ ಬಳಗದ ವತಿಯಿಂದ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಉಚಿತ ಆರೋಗ್ಯ ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿತ್ತು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಧ್ವಜಾರೋಹಣ ನೆರವೇರಿಸಿ, ಉಚಿತ ಆರೋಗ್ಯ ತಪಾಸಣೆಗೆ ಚಾಲನೆ ನೀಡಿದರು. ಮೈಸೂರಿನ ಸ್ಪಂದನ ಆಸ್ಪತ್ರೆ ಮತ್ತು ಅಗರವಾಲ್ ಕಣ್ಣಿನ ಆಸ್ಪತ್ರೆಗಳ ಸಹಭಾಗಿತ್ವದಲ್ಲಿ ನೂರಾರು ಜನರಿಗೆ ಉಚಿತವಾಗಿ ಆರೋಗ್ಯ ತಪಾಸಣೆ ಕೈಗೊಳ್ಳಲಾಯಿತು. ಈ ವೇಳೆ ಸ್ಪಂದನ ಆಸ್ಪತ್ರೆಯ ಡಾ.ಕಾವ್ಯ, ಭಾಗ್ಯ, ನೀಲಾ ಮತ್ತು ಅಗರ್ವಾಲ್ ಕಣ್ಣಿನ ಆಸ್ಪತ್ರೆಯ ವೈದ್ಯೆ ಡಾ.ಗೋಕುಲ ಲಕ್ಷ್ಮಿ, ಸಂಘದ ಕುಮಾರ್, ನಾಗರಾಜು, ಗೌತಮ್ (ಬುಜ್ಜಿ), ಮಹೇಶ್, ಚೆಲುವ, ಸುನೀಲ್, ವಿನೋದ್, ಪವನ್, ಗಣೇಶ್, ಹರೀಶ್, ಕಿಶೋರ್, ರಾಜೇಶ್, ಹೇಮಂತ್ ಇನ್ನಿತರರು ಉಪಸ್ಥಿತರಿದ್ದರು.

ದಂತ ಆರೋಗ್ಯ ಕಾಪಾಡಿಕೊಳ್ಳುವುದು ಅವಶ್ಯ



ಡಾ.ಕಿಶೋರ್, ದಂತ ಆರೋಗ್ಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಮೈಸೂರು, ಡಿ. 2– ದಂತ ಆರೋಗ್ಯ ಪ್ರತಿಯೊಬ್ಬರಿಗೂ ಮಹತ್ವವಾದದ್ದು. ಯಾವುದೇ ಕಾರಣಕ್ಕೂ ಇದರ ಬಗ್ಗೆ ನಿರ್ಲಕ್ಷ್ಯ ಮಾಡಬಾರದು. ಒಂದು ವೇಳೆ ದಂತ ಆರೋಗ್ಯವನ್ನು ನಿರ್ಲಕ್ಷ್ಯ ಮಾಡಿದರೆ ಇದರ ಪರಿಣಾಮವಾಗಿ ಮನುಷ್ಯನ ದೇಹದ ಇತರ ಅಂಗಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಆ ಕಾರಣಕ್ಕಾಗಿ ಪ್ರತಿಯೊಬ್ಬರೂ ತಮ್ಮ ಹಲ್ಲುಗಳ ಶುಚಿತ್ವದ ಬಗ್ಗೆ, ಬಾಯಿ ಸ್ವಚ್ಛತೆಯ ಬಗ್ಗೆ ಹೆಚ್ಚು ಗಮನ ಕೊಡಬೇಕು ಎಂದು ಡಾ. ಕಿಶೋರ್ ಸಲಹೆ ನೀಡಿದರು.


ಮೈಸೂರಿನ ಲಯನ್ಸ್ ಅಂಬಾಸಿಡರಸ್ ಸಂಸ್ಥೆಯ ಮಾಸಿಕ ಆರೋಗ್ಯ ಕಾರ್ಯಕ್ರಮದ ಅಡಿಯಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಲಯನ್ ವಿ.ಶ್ರೀಧರ್, ಕಾರ್ಯದರ್ಶಿ ಲಯನ್ ಬಿ.ಮಲ್ಲಿಕಾರ್ಜುನಪ್ಪ, ಖಜಾಂಚಿ ಲಯನ್ ಎಚ್.ಆರ್. ರವಿಚಂದ್ರ, ಸಂಸ್ಥೆಯ ಸ್ಥಾಪಕ ಅಧ್ಯಕ್ಷ ಲಯನ್ ಟಿ.ಹೆಚ್.ವೆಂಕಟೇಶ್, ಜಿಲ್ಲಾ ಅಧ್ಯಕ್ಷ ಲಯನ್ ಸಿ.ಆರ್.ದಿನೇಶ್, ವಲಯ ಅಧ್ಯಕ್ಷ ಎಚ್.ಸಿ.ಕಾಂತರಾಜು, ಸದಸ್ಯರಾದ ಎಚ್.ಕೆ.ಪ್ರಸನ್ನ, ಅರುಣ್ ಸಾಗರ್ ಇತರರು ಉಪಸ್ಥಿತರಿದ್ದರು.

ಗೌತಮಿಗೆ ಪಿಹೆಚ್.ಡಿ ಪದವಿ



ಮೈಸೂರು, ಡಿ.2 –ಬೆಂಗಳೂರಿನ ರೇವಾ ವಿಶ್ವವಿದ್ಯಾನಿಲಯದ ಡಾ.ವೆಂಕಟಶಿವ ರೆಡ್ಡಿ ಮಾರ್ಗದರ್ಶನದಲ್ಲಿ ಸಿನರ್ಜಿಂಗ್ ಮೆಷಿನ್ ಲರ್ನಿಂಗ್ ಇನ್ ಡಯಾಬಿಟ್ಸ್ ಕೇರ್; ಅರ್ಲಿ ಡಿಟೆಕ್ಷನ್, ಪರ್ಸನಲೈಸ್ಡ್ ಡಯಾಗ್ನಿಸಿಸ್ ಅಂಡ್ ರಿಯಲ್ ಟೈಮ್ ಮ್ಯಾನೇಜ್‌ಮೆಂಟ್ ಸ್ಟ್ರಾಟಜಿಸ್ ಎಂಬ ವಿಷಯ ಕುರಿತು ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿಕೇಷನ್ ವಿಭಾಗದಲ್ಲಿ ಎಸ್.ಗೌತಮಿ ಅವರು ಸಾದರಪಡಿಸಿದ ಮಹಾ ಪ್ರಬಂಧಕ್ಕೆ ಪಿಹೆಚ್.ಡಿ ನೀಡಲಾಗಿದೆ. ಅವರು ಮೈಸೂರಿನ ವಿಜಯನಗರ ಮೂರನೇ ಹಂತದ ಬಿಎಸ್‌ಎನ್‌ಎಲ್ ನಿವೃತ್ತ ಡಿಜಿಎಂ ಎಂ.ಎಸ್.ಶ್ರೀನಿವಾಸ್ ಅವರ ಪುತ್ರಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.12.2024 ಮಂಗಳವಾರ, ಮಳೆ ನಕ್ಷತ್ರ: ಜ್ಯೇಷ್ಠ, 02.12.2024 ರಿಂದ 15.12.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಮೂಲ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಅಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಬೆನ್ನು ನೋವಿನ ಕಾರಣಗಳು, ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ತಜ್ಞ ವೈದ್ಯರಿಂದ ಸಲಹೆ ಹಾಗೂ ಯೋಗದಿಂದ ರೋಗ ತಡೆಯುವ ಕುರಿತು ಯೋಗಾಭ್ಯಾಸ ತರಗತಿ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರ ಮತ್ತು ಸಸ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ :** 9ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಪ್ರಯುಕ್ತ ರಾಷ್ಟ್ರೀಯ ಔಷಧಿ ಸಸ್ಯಗಳ ಮೊನೊಗ್ರಾಫ್ ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಡಾ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಸರ್ಕಾರಿ ಆಯುರ್ವೇದ ಮಹಾವಿದ್ಯಾಲಯ ನಿವೃತ್ತ ಪ್ರಾಂಶುಪಾಲ ಡಾ. ಸತ್ಯನಾರಾಯಣ ಭಟ್, ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕಾಲೇಜು ಪ್ರಾಂಶುಪಾಲ ಡಾ. ರಾಧಾಕೃಷ್ಣ ರಾಮರಾವ್, ಡಾ. ರಾಜ್‌ಕುಮಾರ್ ಹೆಚ್. ಗಾರಂಪಳ್ಳಿ, ಡಾ. ಎಲ್.ಎನ್. ಶೆಣೈ, ಸ್ಥಳ: ವಿಜ್ಞಾನ ಭವನ, ಮೈಸೂರು ವಿವಿ, ಬೆಳಗ್ಗೆ 9.30ಕ್ಕೆ.


■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ :** ನೈಪುಣ್ಯ ಸ್ಪೇಸ್ ಲ್ಯಾಬ್ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಬಾಹ್ಯಾಕಾಶ ವಿಜ್ಞಾನಿ ಡಾ. ಕಿರಣ್ ಕುಮಾರ್, ಅಧ್ಯಕ್ಷತೆ : ಶಾಲೆ ಅಧ್ಯಕ್ಷ ಆರ್. ರಘು, ಸ್ಥಳ: ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್, ದಟ್ಟಗಳ್ಳಿ ಕ್ಯಾಂಪಸ್, ಮಧ್ಯಾಹ್ನ 3ಕ್ಕೆ.

■ **ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ :** ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸಂಸ್ಮರಣಾ 21ನೇ ಸಂಗೀತ ಸಮ್ಮೇಳನ–2024, ಬೆಳಗ್ಗೆ 10ಕ್ಕೆ ವಿದ್ವತ್ ಗೋಷ್ಠಿ, ಪ್ರಾತ್ಯಕ್ಷಿಕೆ, ವಿದ್ವಾನ್ ಡಾ.ಕೆ. ವರದರಂಗನ್, ಪ್ರಾತ್ಯಕ್ಷಿಕೆ ರಾಗಮಾಲಿಕೆ, ವಿದ್ವಾನ್ ಡಾ.ರಾ.ವಿಶ್ವೇಶ್ವರನ್, ಸಂಜೆ 5.30 ರಿಂದ ವಿದುಷಿ ಅಕ್ಷತಾ ರುದ್ರಪಟ್ಟಣ ಅವರಿಂದ ಗಾಯನ, ವಿದ್ವಾನ್ ಕಾರ್ತಿಕೇಯ ರಾಮಚಂದ್ರ–ವಯೋಲಿನ್, ವಿದ್ವಾನ್ ನಂದನ್ ಕಶ್ಯಪ್–ಮೃದಂಗ; ಸಂಜೆ 6.30 ರಿಂದ ವಿದ್ವಾನ್ ಎಸ್. ಸಾಕೇತರಾಮನ್ ಅವರಿಂದ ಗಾಯನ, ವಿದ್ವಾನ್ ಮತ್ತೂರು ಆರ್. ಶ್ರೀನಿಧಿ–ವಯೋಲಿನ್, ವಿದ್ವಾನ್ ಅರ್ಜುನ್‌ಕುಮಾರ್–ಮೃದಂಗ, ವಿದ್ವಾನ್ ಶಮಿತ್ ಎಸ್.ಗೌಡ–ಘಟಂ, ಸ್ಥಳ: ನವಜ್ಯೋತಿ ಸಭಾಂಗಣ, ಜೆಎಸ್‌ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ.

■ **ಸಂಚಲನ ಮೈಸೂರು ರಂಗ ಸಂಸ್ಥೆ:** ಮಹಿಳಾ ನಾಟಕೋತ್ಸವ, ಸಂಜೆ 6 ಗಂಟೆಗೆ ಶಶಿ ಥಿಯೇಟರ್‌ನಿಂದ 'ಉರಿಯ ಉಯ್ಯಾಲೆ' ನಾಟಕ ಪ್ರದರ್ಶನ, ಉಪಸ್ಥಿತರು : ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ತಲಕಾಡು, ರಂಗ ಸಮಾಜ ಸುರೇಶ್‌ಬಾಬು, ಹೆಚ್.ಡಿ.ಕೋಟೆ ವೈದ್ಯಾಧಿಕಾರಿ ಡಾ.ಪೂರ್ಣಿಮಾ, ನಾಟಕ ಅಕಾಡೆಮಿ ಸದಸ್ಯ ಡಾ.ಎಂ.ಜಾಹಿದಾ, ಶಶಿಕಲಾ ಅವರಿಗೆ ರಂಗ ಗೌರವ ಪ್ರಶಸ್ತಿ ಪ್ರದಾನ, ಸ್ಥಳ: ಕಿರು ರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ– ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ.ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ. ಆರ್. ಶ್ರೀನಿವಾಸಮೂರ್ತಿಯವರ 'ರಂಗಣ್ಣನ ಕನಸಿನ ದಿನಗಳು' ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 8.30 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್.,8.40 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.05 ಅಂತಾರಾಷ್ಟ್ರೀಯ ವಿಶೇಷ ಚೇತನರ ದಿನಾಚರಣೆ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಶಂಕರಗೌಡ ಪಾಟೀಲ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಜಿ. ಶಾಂತಕುಮಾರ್, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ 'ನಾನು ನನ್ನ ಕಂಪನಿ' ಸಾವಯವ ಆಹಾರ ಪದಾರ್ಥಗಳನ್ನು ತಯಾರಿಸುವ ಉದ್ಯಮಿ ಆಶಾಕುಮಾರಿ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಸಹನಾ, 12.35 ದೇವರನಾಮ–ಆರ್. ಗಿರೀಶ್, 12.45 'ಪತ್ರದಲ್ಲಿ ಕನ್ನಡ', ಮಾತನಾಡುತ್ತಾರೆ–ಪ್ರೊ. ಮೈಸೂರು ಕೃಷ್ಣಮೂರ್ತಿ, 1.00 ಪ್ರಗತಿ ಪಥ, 1.20 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ: ಸದಾನಂದ. ಆರ್., 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಪಲ್ಲಡಂ ಎಸ್. ವೆಂಕಟರಮಣರಾವ್–ಹಾರ್ಮೋನಿಯಂ, 4.00 ಕಥಾ ಕಾಲಕ್ಷೇಪ–ಶ್ರೀ ರಾಘವೇಂದ್ರ ವಿಜಯ, ಪ್ರಸ್ತುತಿ: ಬೇಲೂರು ಹೆಚ್.ಎ. ವಸಂತಲಕ್ಷ್ಮೀ, 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಐಸಿರಿ– ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಹಿಪ್ಪುನೇರಳೆ ರೋಗಗಳ ನಿಯಂತ್ರಣ. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ.ಜಿ.ಎಸ್.ಅರುಣ್‌ಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್. ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ :ಜಾಂಪಣ್ಣ ಆಶೀಹಾಳ್, 8.00 ನಾಟಕ 'ರಂಗಜಂಗಮರು', ರಚನೆ–ಎಸ್. ರಾಮನಾಥ, ನಿರ್ಮಾಣ–ಪ್ರಭುಸ್ವಾಮಿ ಮಳೀಮಠ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಎ.ಕೆ.ಸಿ. ನಟರಾಜನ್–ಕ್ಲಾರಿಯೋನೆಟ್ ವಾದನ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ. ಪ್ರಸ್ತುತಿ: ಡಾ. ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

ಸುತ್ತೂರಿನಲ್ಲಿಂದು

■ **ರಂಗಾಂತರಂಗ ಮೈಸೂರು :** ರಂಗ ನಡಿಗೆ ಹಳ್ಳಿ ಮಕ್ಕಳ ಕಡೆಗೆ, ರಂಗ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು: ಜೆಎಸ್‌ಎಸ್ ಸಂಸ್ಥೆ ಆಡಳಿತಾಧಿಕಾರಿ ಎಸ್.ಪಿ. ಉದಯಶಂಕರ್, ಭಾರತ್ ಕ್ಯಾನ್ಸರ್ ಆಸ್ಪತ್ರೆ ಸಂಸ್ಥಾಪಕ ಡಾ.ಅಜಯ್‌ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಆಗಮಿಕ ವಿದ್ವಾನ್ ಶಂಕರಾನಂದ ಜೋಯ್ಸ್, ಸಮಾಜ ಸೇವಕರಾದ ಶ್ರೀಮತಿ ಸುಧಾ ಮೃತ್ಯುಂಜಯಪ್ಪ, ರಂಗಾಂತರಂಗ ಸಂಸ್ಥಾಪಕ ಕೆ.ಎಂ. ಕೀರ್ತಿರಾಜ್, ಸ್ಥಳ: ಅಲ್ಲಮ ಪ್ರಭು ಸಭಾಂಗಣ, ಸುತ್ತೂರು, ಸಂಜೆ 4ಕ್ಕೆ.

ಮೈಸೂರು ಮಿತ್ರ ಮಂಗಳವಾರ 3 ಡಿಸೆಂಬರ್ 2024

ಮೈಸೂರಲ್ಲಿ ಕೊಡಗು ಗಾಲ್ಫ್ ಓಪನ್ ಚಾಂಪಿಯನ್‌ಶಿಪ್



23ನೇ ಆವೃತ್ತಿಯ ಕೊಡಗು ಗಾಲ್ಫ್ ಓಪನ್ ಚಾಂಪಿಯನ್‌ಶಿಪ್‌ನ ಪಂದ್ಯವೊಂದರಲ್ಲಿ ವಿಜೇತರಾದ ಕೆ.ಸಿ.ವಿಶ್ವಾನಂದ ಭಟ್ ಅವರಿಗೆ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರು ಟ್ರೋಫಿ ವಿತರಿಸಿದರು.



23ನೇ ಆವೃತ್ತಿ ಕೊಡಗು ಗಾಲ್ಫ್ ಕ್ಲಬ್ ಓಪನ್ ಚಾಂಪಿಯನ್‌ಶಿಪ್ ವಿಜೇತರೊಂದಿಗೆ ಅಸೋಸಿಯೇಷನ್ ಆಫ್ ಕೊಡಗು ಗಾಲ್ಫ್ ಆಫ್ ಜೆಡಬ್ಲ್ಯೂಜಿಸಿ ಪದಾಧಿಕಾರಿಗಳನ್ನು ಕಾಣಬಹುದು.

ಮೈಸೂರು, ಡಿ. 2- ಮೈಸೂರಿನ ಜಯಚಾಮರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್‌ನಲ್ಲಿ 23ನೇ ಆವೃತ್ತಿಯ ಕೊಡಗು ಗಾಲ್ಫ್ ಓಪನ್ ಚಾಂಪಿಯನ್‌ಶಿಪ್ ಪಂದ್ಯಾವಳಿಗಳು ನವೆಂಬರ್ 30ರಿಂದ ಡಿ.1ರವರೆಗೆ ನಡೆಯಿತು. ಪಂದ್ಯಾವಳಿಯನ್ನು ಅಸೋಸಿಯೇಷನ್ ಆಫ್ ಕೊಡಗು ಗಾಲ್ಫರ್ ಹಿರಿಯ ಸದಸ್ಯ ಪಿ.ಎಂ.ಗಣಪತಿ ಉದ್ಘಾಟಿಸಿದ್ದರು. ಈ ವೇಳೆ ಜಯಚಾಮ ರಾಜೇಂದ್ರ ಒಡೆಯರ್ ಗಾಲ್ಫ್ ಕ್ಲಬ್ (ಜೆಡಬ್ಲ್ಯೂಜಿಸಿ) ಅಧ್ಯಕ್ಷ ಡಾ. ಅಬ್ರಹಾಂ ಥಾಮಸ್, ಕ್ಯಾಪ್ಟನ್ ಎಂ.ಎಸ್. ಯಶ್ವಂತ್, ಕಾರ್ಯದರ್ಶಿ ವಿ.ಜಿ.ಆಚಾರ್, ಖಜಾಂಚಿ ಎಸ್.ಆರ್. ನಿತೀಶ್, ಟೂರ್ನಮೆಂಟ್ ಸಬ್ ಕಮಿಟಿ ಅಧ್ಯಕ್ಷ ಸೋನಮ್ ಚುಂಗ್, ಸದಸ್ಯರಾದ ವಿನಯ್ ನಟರಾಜನ್, ಹೆಚ್.ಸಿ.ಸುಬ್ರಮಣ್ಯ, ಡಿ.ಸಿ. ಶ್ರೀಧರ್, ಅಸೋಸಿಯೇಷನ್ ಆಫ್ ಕೊಡಗು ಗಾಲ್ಫರ್ ಆಫ್ ಜೆಡಬ್ಲ್ಯೂಜಿಸಿ ಅಧ್ಯಕ್ಷ ಪಿ.ಎ. ಕುಶಾಲಪ್ಪ, ಖಜಾಂಚಿ ಎಂಬಿ ನಾಣಯ್ಯ, ಕಾರ್ಯದರ್ಶಿ ಸಿ.ಬಿ.ಚಂಗಪ್ಪ ಮತ್ತಿತರರಿದ್ದರು.

ಫೀಲ್ಡ್ ಮಾರ್ಷಲ್ ಕಾರ್ಯಪ್ಪ, ಮೆಮೋರಿಯಲ್ ಟ್ರೋಫಿಯನ್ನು ಶ್ರೀಧರ್ ಸಿಂಗ್ ಪಡೆದರೆ, ಕೆ.ಎ. ಅನಿಲ್‌ಕುಮಾರ್ ಎರಡನೇ ಸ್ಥಾನ ಗಳಿಸಿದರು. ಜನರಲ್ ಕೆ.ಎಸ್. ತಿಮ್ಮಯ್ಯ ಮೆಮೋರಿಯಲ್ ಟ್ರೋಫಿಯಲ್ಲಿ ಐ.ಕೆ. ಅನಿಲ್ ಪ್ರಥಮ ಸ್ಥಾನ ಪಡೆದರೆ, ಸೋನಮ್ ಚುಂಗ್ ದ್ವಿತೀಯ ಸ್ಥಾನ ಗಳಿಸಿದರು. ಸ್ಕ್ವಾಡ್ರನ್ ಲೀಡರ್ ಎಂ.ಬಿ. ಚಿಟ್ಟಿಯಪ್ಪ ಮೆಮೋರಿಯಲ್ ಟ್ರೋಫಿಯಲ್ಲಿ ಜೆ.ಎನ್.ಅರ್ಜುನ್ ಪ್ರಥಮ ಸ್ಥಾನ ಪಡೆದರೆ, ರಾಮ್ ಕೇವಲೂರು, ದ್ವಿತೀಯ ಸ್ಥಾನ ಗಳಿಸಿದರು. ಬೆಟರ್ ಬ್ಯಾಕ್ 9 ಓವರ್‌ನಲ್ಲಿ ಕೆ.ಸಿ.ವಿಶ್ವಾನಂದ ಭಟ್ ಮತ್ತು ಜನಾರ್ಧನ್ ಬಾಬು ರನ್ನರ್ ಆದರು. ಕೊಡಗು ವಾರಿಯರ್ಸ್ ಟ್ರೋಫಿಯಲ್ಲಿ ಡಾ. ಪಿ.ಎನ್. ಪ್ರಶಾಂತ್ ವಿನ್ನರ್ ಆದರೆ, ಕೆ.ಸಿ. ವಿಶ್ವಾನಂದ ಭಟ್, ಬೆಟರ್ ಬ್ಯಾಕ್ 9 ಓವರ್‌ನಲ್ಲಿ ಜನಾರ್ಧನ ಬಾಬು ರನ್ನರ್ ಆದರು. ಕೊಡಗು ಚಾಲೆಂಜ್ ಟ್ರೋಫಿಯಲ್ಲಿ ಬಿ.ಎಸ್. ಸತ್ಯನಾರಾಯಣ ವಿನ್ನರ್ ಆದರೆ, ಮಧುಶ್ರೀ ಶ್ರೀನಿವಾಸನ್, ಬೆಟರ್ ಬ್ಯಾಕ್ 9 ಓವರ್‌ನಲ್ಲಿ ಎ.ಎಸ್. ಸೋಮೇಶ್, ಕೆ.ಎನ್. ತೀರ್ಥಾನಂದ, ಎಂ.ಬಿ. ನಾಣಯ್ಯ ರನ್ನರ್ ಆದರು.

65 ವರ್ಷ ಮೇಲ್ಪಟ್ಟವರ ಸೀನಿಯರ್ ಸಿಟಿಜನ್ ಟ್ರೋಫಿಯಲ್ಲಿ ಎಂ.ಬಿ.ನಾಣಯ್ಯ ವಿನ್ನರ್ ಆದರೆ, ಬಿ.ಸಿ.ನಂಜಪ್ಪ ರನ್ನರ್ ಆದರು. 75 ವರ್ಷ ಮೇಲ್ಪಟ್ಟವರ ಸೂಪರ್ ಸೀನಿಯರ್ ಚಾಲೆಂಜಿಂಗ್ ಟ್ರೋಫಿಯನ್ನು ನಿವೃತ್ತ ಲೆಫ್ಟಿನೆಂಟ್ ಕರ್ನಲ್ ಕೆ.ಪಿ.ವಿಜಯ ಕುಮಾರ್ ಗಳಿಸಿದರು. ಬಿ.ಜಿ.ಉತ್ತಯ್ಯ ಬೆಸ್ಟ್ ಕೊಡಗು ಗಾಲ್ಫರ್, ಶ್ರೀಮತಿ ಪ್ರಿಯಾ ಕುಶಾಲಪ್ಪ ಬೆಸ್ಟ್ ಲೇಡಿ ಗಾಲ್ಫರ್, ಎಂ.ರಮೇಶ್ ಫಾರ್ಚುನೇಟ್ ಗಾಲ್ಫರ್, ಎ.ಎಸ್. ಸೋಮೇಶ್, ನಿಯರೆಸ್ಟ್ ಟು ದಿ ಪಿನ್ ಸೆಕೆಂಡ್ ಹೋಲ್, ಡಾ.ಆಂಟನಿ ಫರ್ನಾಂಡಿಸ್, ನಿಯರೆಸ್ಟ್ ಟು ಪಿನ್ ಸಿಕ್ಸ್ಥ್ ಹೋಲ್, ರಾಮ್ ಕೇವಲೂರು ನಿಯರೆಸ್ಟ್ ಟೊ ಪಿನ್ 12 ಹೋಲ್, ರಿಕ್ ವ್ಯಾನ್ ವ್ಯಾಲೆಟ್, ಕ್ರುಕ್ಡ್‌ಲೈನ್ ಸಿಕ್ಸ್ಟೀನ್ತ್ ಹೋಲ್ ವಿಜೇತರಾದರು. ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಗಣ್ಯರು ವಿಜೇತರಿಗೆ ಟ್ರೋಫಿ ವಿತರಿಸಿದರು.

ಬೈಕ್‌ನಿಂದ ಬಿದ್ದು ಮಂಡ್ಯ ಯುವಕ ದುರ್ಮರಣ

ಮೈಸೂರು, ಡಿ.2(ಎಸ್‌ಬಿಡಿ)- ಸ್ನೇಹಿತರೊಂದಿಗೆ ಮೈಸೂರಿಗೆ ಬಂದಿದ್ದ ಮಂಡ್ಯದ ಯುವಕ ಬೈಕ್ ಅಪಘಾತದಲ್ಲಿ ಮೃತಪಟ್ಟಿರುವ ಘಟನೆ ಶನಿವಾರ ಮಧ್ಯರಾತ್ರಿ ನಡೆದಿದೆ.

ಮಂಡ್ಯದ ಅನ್ನಪೂರ್ಣೇಶ್ವರಿನಗರ ನಿವಾಸಿ ಮಹದೇವು ಅವರ ಪುತ್ರ ಎಂ. ಮನೋಜ್(24) ಮೈಸೂರಿನ ರಿಂಗ್ ರಸ್ತೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟ ಯುವಕ. ಮಂಡ್ಯದ ಕಲ್ಲಹಳ್ಳಿಯಲ್ಲಿನ ರಿಲಾಯನ್ಸ್ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದ ಈತ, ನ.30ರಂದು ಸಂಜೆ ಸಿಟಿಗೆ ಹೋಗಿ ಬರುವುದಾಗಿ ಮನೆಯಲ್ಲಿ ತಿಳಿಸಿ, ಸ್ನೇಹಿತರಾದ ದೀಪು, ದರ್ಶನ್ ಹಾಗೂ ಅಭಿಷೇಕ್ ಜೊತೆ ಮೈಸೂರಿಗೆ ಬಂದಿದ್ದ.

ಎರಡು ಬೈಕ್‌ಗಳಲ್ಲಿ ಬಂದಿದ್ದ ನಾಲ್ವರು, ಮೈಸೂರಿನಲ್ಲಿ ಊಟ ಮುಗಿಸಿಕೊಂಡು ವಾಪಸ್ಸಾಗುವ ವೇಳೆ ಮನೋಜ್ ತನ್ನ ಟಿವಿಎಸ್ ಅಪಾಚಿ ಆರ್‌ಟಿಆ-160 ಬೈಕ್ ಅನ್ನು ಸ್ನೇಹಿತ ದರ್ಶನ್‌ಗೆ ಕೊಟ್ಟು, ಅಭಿಷೇಕ್‌ನ ಟಿವಿಎಸ್ ಅಪಾಚೆ ಆರ್‌ಆರ್-310 ಬೈಕ್ ಓಡಿಸುತ್ತಿದ್ದ ದೀಪು ಜೊತೆ ಕುಳಿತಿದ್ದ. ರಿಂಗ್‌ರಸ್ತೆ, ಆರ್‌ಬಿಐ ಬಳಿಯ ರೈಲ್ವೆ ಅಂಡರ್‌ಬ್ರಿಡ್ಜ್ ಬಳಿ ದೀಪು ಓಡಿಸುತ್ತಿದ್ದ ಬೈಕ್ ನಿಯಂತ್ರಣ ಕಳೆದುಕೊಂಡು ನೆಲಕ್ಕುರುಳಿದೆ. ಘಟನೆಯಲ್ಲಿ ಹಿಂಬದಿ ಕುಳಿತಿದ್ದ ಮನೋಜ್ ತಲೆಗೆ ತೀವ್ರ ಪೆಟ್ಟು ಬಿದ್ದು, ಸಾವನ್ನಪ್ಪಿದ್ದಾನೆ. ಈ ಸಂಬಂಧ ವಿವಿ ಪುರಂ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಯತ್ನಾಳ್‌ಗೆ ಬಿಜೆಪಿ ವರಿಷ್ಠರ ನೋಟಿಸ್

- 10 ದಿನದಲ್ಲಿ ವಿವರಣೆ ನೀಡುವಂತೆ ಸೂಚನೆ
- ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ನಕಲಿ ನೋಟಿಸ್ ಸೃಷ್ಟಿಸಿರುವ ಅನುಮಾನ



ಬೆಂಗಳೂರು, ಡಿ.2(ಕೆಎಂಶಿ)- ಪಕ್ಷ ಮತ್ತು ರಾಜ್ಯ ನಾಯಕರ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡುತ್ತಾ, ಬಂಡಾಯ ಎದ್ದಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಕೇಂದ್ರ ಬಿಜೆಪಿ ಶೋಕಾಸ್ ನೋಟಿಸ್ ಜಾರಿ ಮಾಡಿದೆ. ನೋಟಿಸ್ ತಲುಪಿದ 10 ದಿನಗಳೊಳಗಾಗಿ ಉತ್ತರ ನೀಡುವಂತೆ ಗಡುವು ನೀಡಲಾಗಿದ್ದು, ಹಿಂದಿನ ಎಚ್ಚರಿಕೆಗಳಿಂದ ಸರಿಪಡಿಸಿಕೊಳ್ಳದೆ, ಪಕ್ಷದ ರಾಜ್ಯ ನಾಯಕರ ವಿರುದ್ಧ ಮಾತು ಮುಂದುವರೆಸಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ವರಿಷ್ಠರ ನೋಟಿಸ್ ಸಂಬಂಧ ಎರಡು ಪ್ರತ್ಯೇಕ ಟ್ವೀಟ್ ಮಾಡಿರುವ ಬಸನಗೌಡ ಪಾಟೀಲ್ ಯತ್ನಾಳ್, ನನಗೆ ಇದುವರೆಗೂ ಯಾವುದೇ ಅಧಿಕೃತ ನೋಟಿಸ್ ಬಂದಿಲ್ಲ, ವಾಟ್ಸ್‌ಆ್ಯಪ್‌ನಲ್ಲಿ ಬಂದಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಕಲಿ ನೋಟಿಸ್ ಸೃಷ್ಟಿಸಿದ್ದಾರೆ ಎಂದು ಖಾರವಾಗಿ ಹೇಳಿರುವ ಅವರು, ನನಗೆ ಅಧಿಕೃತವಾಗಿ ಬಂದರೆ ಉತ್ತರ ಕೊಡುತ್ತೇನೆ ಎಂದಿದ್ದಾರೆ. ಪಕ್ಷದ ವರಿಷ್ಠರು ಯತ್ನಾಳ್‌ಗೆ ನೀಡಿರುವ ನೋಟಿಸ್‌ನಲ್ಲಿ, ರಾಜ್ಯ ಮಟ್ಟದ ಪಕ್ಷದ ನಾಯಕತ್ವದ ವಿರುದ್ಧ ನೀವು ಮಾಡುತ್ತಿರುವ ನಿರಂತರ ವಾಗ್ದಾಳಿ ಮತ್ತು ಪಕ್ಷದ ನಿರ್ದೇಶನಗಳನ್ನು ಧಿಕ್ಕರಿಸುತ್ತಿರುವ ಬಗ್ಗೆ ಪಕ್ಷದ ವಿವಿಧ ವಲಯಗಳಿಂದ ಆರೋಪಗಳು ಕೇಳಿಬಂದಿವೆ. ಪಕ್ಷದ ಅಧಿಕೃತ ನಿಲುವಿಗೆ ವಿರುದ್ಧವಾಗಿ ನೀವು ಹೇಳಿಕೆಗಳನ್ನು ನೀಡುತ್ತಿರುವುದು ಮಾಧ್ಯಮ ಮತ್ತು ಪಕ್ಷದ ವಿವಿಧ ವೇದಿಕೆಗಳಲ್ಲಿ ವರದಿಯಾಗಿದೆ.

ನಿಮಗೆ ಈ ಹಿಂದೆಯೂ ಹಲವು ಬಾರಿ ಶೋಕಾಸ್ ನೋಟಿಸ್ ನೀಡಲಾಗಿತ್ತು, ಆಗ, ಇನ್ನು ಮುಂದೆ, ಪಕ್ಷ ವಿರೋಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಿಲ್ಲ ಎಂದು ಹೇಳಿದ್ದೀರಿ.

ಮಾತು ಕೊಟ್ಟ ನಂತರವೂ ನಿರಂತರವಾಗಿ ಮುಖಂಡರು ಮತ್ತು ಪಕ್ಷದ ವಿರುದ್ಧ ಹೇಳಿಕೆಗಳನ್ನು ನೀಡುತ್ತಿರುವುದು ಪಕ್ಷದ ನಿಯಮಗಳ ಗಂಭೀರ ಉಲ್ಲಂಘನೆಯಾಗಿದೆ. ನಿಮ್ಮ ಹಿರಿತನ ಮತ್ತು ಪಕ್ಷದಲ್ಲಿನ ದೀರ್ಘ ಸೇವೆಯನ್ನು ಗಮನದಲ್ಲಿಟ್ಟುಕೊಂಡು ಈ ಹಿಂದೆ ನೀವು ಸಲ್ಲಿಸಿದ್ದ ವಿವರಣೆಗಳಿಗೆ ಒಪ್ಪಿ, ಕೇಂದ್ರ ಶಿಸ್ತು ಸಮಿತಿ ಮೃದು ಧೋರಣೆ ತಳೆದಿತ್ತು.

ಈಗ ನೀಡಿರುವ ನೋಟಿಸ್‌ಗೆ ನಿರ್ದಿಷ್ಟ ಸಮಯದೊಳಗೆ ನಿಮ್ಮ ವಿವರಣೆಯನ್ನು ಸಲ್ಲಿಸದಿದ್ದಲ್ಲಿ, ನಾವು ಅಂತಿಮ ತೀರ್ಮಾನ ಕೈಗೊಳ್ಳಬೇಕಾಗುತ್ತದೆ ಎಂದು ಬಿಜೆಪಿ ಶಿಸ್ತು ಸಮಿತಿ ಅಧ್ಯಕ್ಷರು ಎಚ್ಚರಿಕೆ ನೀಡಿದ್ದಾರೆ.

ನಾನಾ ಅಲೆಮಾರಿ ಸಮುದಾಯದ ಸಮಸ್ಯೆ ನಿವಾರಣೆಗೆ ಹತ್ತಾರು ಯೋಜನೆ ಜಾರಿ

- ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ ಭರವಸೆ
- ಹುಣಸೂರು, ಕೆ.ಆರ್.ನಗರ, ಪಿರಿಯಾಪಟ್ಟಣ ತಾಲೂಕಿನ ಅಲೆಮಾರಿ ಸಮುದಾಯದ ಸ್ಥಿತಿಗತಿ ಪರಿಶೀಲನೆ



ಹುಣಸೂರು ತಾಲೂಕಿನ ಕೆಬ್ಬೆಕೊಪ್ಪಲು ಗ್ರಾಮದ ದೊಂಬರ ಕಾಲೋನಿ ನಿವಾಸಿಗಳಿಂದ ಮನವಿ ಸ್ವೀಕರಿಸುತ್ತಿರುವುದು.

ಮೈಸೂರು, ಡಿ.2(ಎಂಕೆ)- ಮೈಸೂರು ಜಿಲ್ಲೆಯಲ್ಲಿ ಮೂರು ದಿನಗಳ ಪ್ರವಾಸ ಕೈಗೊಂಡಿರುವ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪಲ್ಲವಿ, ಸೋಮವಾರ ಹುಣಸೂರು, ಕೆ.ಆರ್.ನಗರ ಹಾಗೂ ಪಿರಿಯಾಪಟ್ಟಣ ತಾಲೂಕಿನಲ್ಲಿ ವಾಸಿಸುತ್ತಿರುವ ಅಲೆಮಾರಿ ದೊಂಬರ ಸಮುದಾಯ, ಹಂದಿಜೋಗಿ, ಡೊಂಗ್ರಿ ಗರಾಸಿಯಾ, ಜೇನು ಕುರುಬ, ಸೋಲಿಗ ಹಾಗೂ ಕೊರಮ ಸಮುದಾಯದವರ ಸ್ಥಿತಿ-ಗತಿ ಪರಿಶೀಲಿಸಿ, ಕುಂದು-ಕೊರತೆಗಳನ್ನು ಆಲಿಸಿ ಸಮಸ್ಯೆಗಳನ್ನು ಬಗೆಹರಿಸುವ ಭರವಸೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಎಸ್‌ಸಿ-ಎಸ್‌ಟಿ ಅಲೆಮಾರಿ ಅಲೆಮಾರಿ ಸಮುದಾಯಗಳ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಹತ್ತಾರು ಯೋಜನೆಗಳನ್ನು ನೀಡಿದೆ. ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ತಿಳಿದುಕೊಳ್ಳುವುದಕ್ಕಾಗಿ ಶಿಕ್ಷಣ ಪಡೆದುಕೊಳ್ಳಬೇಕು. ವಸತಿ ಶಾಲೆಗಳಲ್ಲಿ ಯಾವುದೇ ಪ್ರವೇಶ ಪರೀಕ್ಷೆ ಇಲ್ಲದೆ ಅಲೆಮಾರಿ ಸಮುದಾಯದ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳುವ ಅವಕಾಶ ನೀಡಿದ್ದು, ಸದ್ಬಳಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಮೊದಲ ಬಾರಿ ಸಿಎಂ ಆಗಿದ್ದಾಗಲೇ ಅಲೆಮಾರಿ ಸಮುದಾಯಗಳನ್ನು ಆರ್ಥಿಕವಾಗಿ ಮೇಲೆತ್ತುವ ಸಲುವಾಗಿ ಅಲೆಮಾರಿ ಕೋಶ ರಚನೆ ಮಾಡಿ, ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ನಿಟ್ಟಿನಲ್ಲಿ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದ್ದಾರೆ. ರಾಜ್ಯ ಕಾಂಗ್ರೆಸ್ ಸರ್ಕಾರ ಬಡವರ ಪರವಾಗಿದ್ದು, ನಿಮ್ಮ ರಕ್ಷಣೆಗಾಗಿ ನಾವಿದ್ದೇವೆ. ನಿಮ್ಮ ಮೇಲೆ ದೌರ್ಜನ್ಯಗಳು ನಡೆದರೆ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ, ಪೊಲೀಸರಿಗೆ ಅಥವಾ ನಿಗಮಕ್ಕೆ ಮಾಹಿತಿ ನೀಡುವಂತೆ ಹೇಳಿದರು.

ಸಮಸ್ಯೆಗಳ ಸುರಿಮಳೆ: ಮೈಸೂರು ಪ್ರವಾಸ ವೇಳೆ ಅಲೆಮಾರಿ ಸಮುದಾಯಗಳಿಂದ ಸಮಸ್ಯೆಗಳ ಸುರಿಮಳೆ ಎದುರಾಯಿತು. ಹುಣಸೂರು ತಾಲೂಕಿನ ಕೆಬ್ಬೆಕೊಪ್ಪಲು ಗ್ರಾಮದ ದೊಂಬರ ಕಾಲೋನಿಯಲ್ಲಿ 22 ಕುಟುಂಬಗಳಿದ್ದು, 50 ವರ್ಷಗಳ ನಂತರ ಮನೆ ಹಕ್ಕುಪತ್ರ ನೀಡಲಾಗಿದೆ. ಸ್ಮಶಾನವಿಲ್ಲದೆ ಅಂತ್ಯಕ್ರಿಯೆ ನಡೆಸಲು ಪರದಾಡುತ್ತಿದ್ದೇವೆ. ರಸ್ತೆ-ಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲ. ಚಿರತೆಗಳ ಹಾವಳಿ ಹೆಚ್ಚಾಗಿದ್ದು, ಕೂಡಲೇ ಬೀದಿದೀಪಗಳ ವ್ಯವಸ್ಥೆ ಕಲ್ಪಿಸುವಂತೆ ಮನವಿ ಮಾಡಲಾಯಿತು.

ಕೆ.ಆರ್.ನಗರ ತಾಲೂಕಿನ ರಾಂಪುರ ಬಡಾವಣೆಯಲ್ಲಿ ಜೇನುಕುರುಬ 15, ಹಂದಿಜೋಗಿ ಸಮುದಾಯದ 48 ಕುಟುಂಬ ಹಾಗೂ ಕೊರಮ ಸಮುದಾಯದ 2 ಕುಟುಂಬಗಳಿದ್ದು, ಕನಿಷ್ಠ ಮೂಲಸೌಕರ್ಯಗಳಿಲ್ಲ. ಮಳೆಗಾಲದಲ್ಲಿ ಮನೆ ಕುಸಿದಿದ್ದರೂ ಪರಿಹಾರದ ಹಣ ಕೈಸೇರಿಲ್ಲ. ಸ್ವಂತ ಮನೆ ಇಲ್ಲ. ಕೂಡಲೇ ಸರ್ಕಾರಿ ಗೋಮಾಳ ಗುರ್ತಿಸಿ ವಸತಿ ಸೌಲಭ್ಯ ಕಲ್ಪಿಸುವಂತೆ ಮನವಿ ಮಾಡಲಾಯಿತು. ಹುಣಸೂರಿನ ಅಂಬೇಡ್ಕರ್ ಕಾಲೋನಿಯಲ್ಲಿ ದೊಂಬರ ಸಮುದಾಯದ 33, ಜೇನು ಕುರುಬ 31 ಕುಟುಂಬಗಳು ವಾಸವಿದ್ದು, ಜೇನು ಕುರುಬ ಸಮುದಾಯಕ್ಕೆ ಹಕ್ಕು ಪತ್ರ ನೀಡಿಲ್ಲ. ಸ್ಮಶಾನವಿಲ್ಲ. ಕಾಲೋನಿಯಲ್ಲಿ ರಸ್ತೆ ವ್ಯವಸ್ಥೆ ಸರಿಯಾಗಿಲ್ಲ. ಹಂದಿ ಸಾಕಾಣಿಕೆಗೆ ಪರ್ಯಾಯ ಸ್ಥಳ ಗುರ್ತಿಸಿ ನೀಡುವುದಾಗಿ ಹೇಳಿ ಹಲವು ವರ್ಷಗಳೇ ಕಳೆದಿದ್ದು, ಕೂಡಲೇ ಸ್ಥಳ ಗುರ್ತಿಸಿ ಆರ್ಥಿಕ ಸ್ವಾವಲಂಬನೆಗೆ ಸರ್ಕಾರ ನೆರವಾಗಬೇಕು ಎಂದು ಮನವಿ ನೀಡಲಾಯಿತು.

ಕಲ್ಲಹಳ್ಳಿ ಗ್ರಾಪಂ ವ್ಯಾಪ್ತಿಯ ಮಂಗಳೂರು ಮಾಳ ಗ್ರಾಮದಲ್ಲಿ ವಾಸವಿರುವ ಡೊಂಗ್ರಿ ಗೆರಾಸಿಯಾ 400 ಕುಟುಂಬಗಳು ವಾಸವಿದ್ದು, ಅರ್ಧದಷ್ಟು ಕುಟುಂಬಗಳಿಗೆ ಇನ್ನೂ ಹಕ್ಕು ಪತ್ರ ನೀಡಿಲ್ಲ. ಕೂಡಲೇ ಹಕ್ಕುಪತ್ರ ನೀಡುವಂತೆ ಮನವಿ ಮಾಡಿದರು. ನಂತರ ಪಿರಿಯಾಪಟ್ಟಣ ತಾಲೂಕಿನ ರಾಣಿಗೇಟ್(ಕೊಪ್ಪ ಸಮೀಪ) ಬಳಿ ವಾಸವಿರುವ ಜೇನುಕುರುಬ ಮತ್ತು ಸೋಲಿಗ ಸಮುದಾಯದವರಿಂದಲೂ ಸಮಸ್ಯೆಗಳ ಮನವಿಯನ್ನು ಸ್ವೀಕರಿಸಲಾಯಿತು.

ಈ ವೇಳೆ ಅಖಿಲ ಕರ್ನಾಟಕ ಕುಳುವ ಮಹಾಸಂಘ(ಎಕೆಎಂಎಸ್)ದ ರಾಜ್ಯಾಧ್ಯಕ್ಷ ಶಿವಾನಂದ ಎಂ.ಭಜಂತ್ರಿ, ಅಧ್ಯಕ್ಷರ ವಿಶೇಷ ಕರ್ತವ್ಯಾಧಿಕಾರಿ ಬಿ.ಎಸ್. ಆನಂದ್‌ಕುಮಾರ್, ಎಕೆಎಂಎಸ್ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ರಂಗಸ್ವಾಮಿ, ನೌಕರರ ಘಟಕದ ಎನ್.ರವಿಕುಮಾರ್, ದಸಂಸ ಮುಖಂಡ ನಿಂಗರಾಜ್ ಮಲ್ಲಾಡಿ, ಮೈಸೂರು ಜಿಲ್ಲಾ ಕುಳುವ ಮಹಾಸಂಘದ ಅಧ್ಯಕ್ಷ ಮುತ್ತುರಾಜ್, ಪ್ರಧಾನ ಕಾರ್ಯದರ್ಶಿ ಮೋಹನ್ ಕಾಯಕ, ಎಸ್‌ಸಿ-ಎಸ್‌ಟಿ ಜಿಲ್ಲಾ ಅನುಷ್ಠಾನ ಸಮಿತಿ ಸದಸ್ಯ ರವಿಕುಮಾರ್ ಎನ್.ಕೊಡಗಳ್ಳಿ, ಪಿರಿಯಾಪಟ್ಟಣ ತಾಲೂಕು ಕುಳುವ ಮಹಾಸಂಘದ ಅಧ್ಯಕ್ಷ ಸತ್ಯನಾರಾಯಣ, ಕಾರ್ಯದರ್ಶಿ ಸತೀಶ್ ಸೇರಿದಂತೆ ಸಮಾಜ ಕಲ್ಯಾಣ ಇಲಾಖೆ, ಆಯಾ ತಾಲೂಕು ಆಡಳಿತ ಮತ್ತು ಗ್ರಾಪಂ ಅಧಿಕಾರಿ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್‌ನ ಐದು ದಿನಗಳ ಸಂಗೀತ ಸಮ್ಮೇಳನಕ್ಕೆ ಚಾಲನೆ

ಸಂಗೀತವೆಂಬ ಸಾಧನ ಮನುಷ್ಯನಲ್ಲಿ ನವಚೈತನ್ಯ ತುಂಬಲಿದೆ

- ಇಸ್ರೋ ಮಾಜಿ ಅಧ್ಯಕ್ಷ ಡಾ.ಎ.ಎಸ್.ಕಿರಣ್‌ಕುಮಾರ್
- ವಿಜ್ಞಾನ-ತಂತ್ರಜ್ಞಾನದ ಸದ್ಬಳಕೆ ಮೂಲಕ ಪ್ರಸ್ತುತದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು



ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಸಂಗೀತ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಕಲಾಪೋಷಕ ಪಿ.ನಿತ್ಯಾನಂದರಾವ್ ಅವರಿಗೆ 'ಸಂಗೀತ ಸೇವಾನಿಧಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

> ಭಾರತೀಯ ಸಂಗೀತ ಮತ್ತು ಕರ್ನಾಟಕ ಸಂಗೀತದಲ್ಲಿ ಅವುಗಳ ಸಂಪ್ರದಾಯ ಮತ್ತು ಮಾರ್ಗದರ್ಶನವನ್ನು ಗೌರವಿಸಿ, ಅನುಸರಿಸುವುದು ಅತ್ಯಂತ ಮುಖ್ಯ. ಇಂತಹ ಸಂಗೀತ ಕಲೆಗೆ ಶ್ರೀಮಠವು ನೀಡುತ್ತಿರುವ ಪ್ರೋತ್ಸಾಹ ಎಲ್ಲರ ಗೌರವಕ್ಕೆ ಪಾತ್ರವಾಗಿದೆ. ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್‌ನ ಧ್ಯೇಯಾದರ್ಶಗಳು ಸಫಲವಾಗುತ್ತಲೇ ಇರಲಿ, ಈ ಟ್ರಸ್ಟ್ ಶತಮಾನೋತ್ಸವವನ್ನು ಯಶಸ್ವಿಯಾಗಿ ಆಚರಿಸುವಂತಾಗಲಿ ಎಂದು ಅರಸುತ್ತೇನೆ. ನನ್ನನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದಕ್ಕಾಗಿ ಸುತ್ತೂರು ಶ್ರೀಗಳಿಗೆ ಹಾಗೂ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಪದಾಧಿಕಾರಿಗಳಿಗೆ ಕೃತಜ್ಞತಾಪೂರ್ವಕ ಧನ್ಯವಾದ ಹೇಳುತ್ತೇನೆ.
>
> -ವೈಣಿಕ ವಿದ್ವಾನ್ ಡಾ.ರಾ.ವಿಶ್ವೇಶ್ವರನ್, ಸಮ್ಮೇಳನಾಧ್ಯಕ್ಷರು.



ವೈಣಿಕ ವಿದ್ವಾನ್ ಡಾ.ರಾ.ವಿಶ್ವೇಶ್ವರನ್ ವೀಣಾವಾದನ ಸಾದರಪಡಿಸುತ್ತಿರುವುದನ್ನು ಕಾಣಬಹುದು.

ಮೈಸೂರು,ಡಿ.2(ಪಿಎಂ)- ಸಂಗೀತವೆಂಬ ಸಾಧನ ಮನುಷ್ಯನಲ್ಲಿ ನವಚೈತನ್ಯ ತುಂಬಲಿದ್ದು, ಮನುಷ್ಯ ತನ್ನನ್ನು ತಾನು ಅರಿತು ಬಾಳಲು ಸಂಗೀತ ಸಹಕಾರಿ ಎಂಬುದನ್ನು ನಮ್ಮ ಆಧ್ಯಾತ್ಮಿಕ ಚಿಂತಕರು, ಋಷಿ ಮುನಿಗಳು ತಿಳಿಸಿಕೊಟ್ಟಿದ್ದಾರೆ ಎಂದು ಇಸ್ರೋ ಮಾಜಿ ಅಧ್ಯಕ್ಷ ಡಾ. ಎ.ಎಸ್.ಕಿರಣ್‌ಕುಮಾರ್ ಹೇಳಿದರು.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ವತಿಯಿಂದ ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ ಸಂಸ್ಮರಣೆಯಲ್ಲಿ ಐದು ದಿನಗಳ ಕಾಲ ಹಮ್ಮಿಕೊಂಡಿರುವ '29ನೇ ಸಂಗೀತ ಸಮ್ಮೇಳನ-2024ಕ್ಕೆ ಸೋಮವಾರ ಚಾಲನೆ ನೀಡಿ ಅವರು ಮಾತನಾಡಿದರು.

> ಭಾರತೀಯ ಶಾಸ್ತ್ರೀಯ ಸಂಗೀತ ಪ್ರಕಾರಗಳು ಮೌಲ್ಯಗಳನ್ನು ಅನಾವರಣಗೊಳಿಸಲಿವೆ. ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಸಂಗೀತ ಸಮ್ಮೇಳನದ ಮೂಲಕ ಭಾರತೀಯ ಸಂಗೀತ ಕಲೆಯನ್ನು ಅನನ್ಯವಾಗಿ ಪ್ರೋತ್ಸಾಹಿಸುತ್ತಾ ಬರುತ್ತಿದೆ. ಸಂಗೀತವು ಭಾರತದ ಸಮೃದ್ಧಿಯ ಸಂಕೇತ ಎಂಬುದರಲ್ಲಿ ಎರಡು ಮಾತಿಲ್ಲ. ಈ ಸಮ್ಮೇಳನದಲ್ಲಿ ಸಂಗೀತ ಕ್ಷೇತ್ರದ ಹಲವು ದಿಗ್ಗಜರು ಭಾಗವಹಿಸಿದ್ದಾರೆ.
>
> -ಪ್ರೊ.ಎನ್.ಕೆ.ಲೋಕನಾಥ್, ಕುಲಪತಿಗಳು, ಮೈಸೂರು ವಿವಿ.

ಸಂಗೀತದಲ್ಲಿರುವ ತರಂಗಗಳು ಮನುಷ್ಯನನ್ನು ಚೈತನ್ಯ ಪ್ರಕ್ರಿಯೆಗೆ ಒಳಪಡಿಸುತ್ತದೆ. ಈ ಸತ್ಯವನ್ನು ಇಂದಿಗೂ ಎಷ್ಟೋ ಜನ ಸಾಮಾನ್ಯರು ಅರಿತುಕೊಂಡಿಲ್ಲ. ಸಂಗೀತ, ವಾದ್ಯ ಅಥವಾ ಶಬ್ದವು ಮನುಷ್ಯನಲ್ಲಿರುವ ಒಂದು ಸಾಧನ. ಇದರ ಮೂಲಕ ಮನುಷ್ಯ ತನ್ನನ್ನು ಅರಿಯುವ ಜೊತೆಗೆ ಪ್ರಪಂಚವನ್ನು ಅರಿಯಬಹುದು. ಬೇಕಿದ್ದರೆ, ವಿಜ್ಞಾನ-ತಂತ್ರಜ್ಞಾನದ ಮೂಲಕ ವಿಶ್ಲೇಷಣೆ ಮಾಡಿ ಈ ಸತ್ಯವನ್ನು ನಾವು ಅರಿಯಬಹುದು. ಆದರೆ ಅಂತಹ ಸತ್ಯ ಅರಿಯುವ ಪ್ರಯತ್ನ ಬಹುತೇಕರು ಮಾಡದೇ ಬಾಹ್ಯ ಆಕರ್ಷಣೆಗೆ ಒಳಗಾಗಿ ಸಮಸ್ಯೆಗಳಿಗೆ ಸಿಲುಕುತ್ತಿದ್ದಾರೆ ಎಂದು ವಿಶ್ಲೇಷಿಸಿದರು.

ಸಂಗೀತದಿಂದ ಮನುಷ್ಯ ತನ್ನ ಜೀವನದ ಉದ್ದೇಶದ ಜೊತೆಗೆ ಪ್ರಪಂಚ ನಡೆಯುತ್ತಿರುವ ಪ್ರಕ್ರಿಯೆ ಅರ್ಥ ಮಾಡಿಕೊಳ್ಳಬಹುದು. ಸಂಗೀತವೆಂಬ ಧ್ಯಾನದ ಪ್ರಕ್ರಿಯೆಯಲ್ಲಿ ಗಾಯಕರು, ವಾದ್ಯ ಸಂಗೀತಗಾರರು ತೊಡಗಿಸಿಕೊಂಡು ಸಾಧನೆ ಮಾಡುವ ಜೊತೆಗೆ ತಮ್ಮ ಜೀವನದಲ್ಲಿ ನವಚೈತನ್ಯ ಪಡೆದು ಸಾರ್ಥಕ ಬದುಕು ಸಾಗಿಸುತ್ತಿದ್ದಾರೆ. ಮನುಷ್ಯನ ಜೀವನದ ಎಲ್ಲಾ ಕ್ಷೇತ್ರಗಳಲ್ಲಿಯೂ ವಿಜ್ಞಾನ ಅಡಕವಾಗಿದ್ದು, ಅದರ ಸದ್ಬಳಕೆಗೆ ಆದ್ಯತೆ ಇರಬೇಕು. ಆ ಮೂಲಕ ಪ್ರಸ್ತುತದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂದರು.

ಅತೀ ವೇಗವಾಗಿ ಬೆಳೆಯುತ್ತಿರುವ ವಿಜ್ಞಾನ-ತಂತ್ರಜ್ಞಾನದ ಪ್ರಪಂಚದಲ್ಲಿ ಮನುಷ್ಯ ತನ್ನನ್ನು ಅರಿತುಕೊಳ್ಳದೇ ತೊಂದರೆಗಳಿಗೆ ಒಳಗಾಗುತ್ತಿದ್ದಾನೆ. ಮನುಷ್ಯನನ್ನು ಬೇರೆ ಬೇರೆ ಗ್ರಹಗಳಿಗೆ ಕಳುಹಿಸುವ ಪ್ರಯತ್ನದಲ್ಲಿದ್ದೇವೆ. ಆದರೆ ಭೂಮಿ ಮೇಲೆ ಮನುಷ್ಯ ಅನೇಕ ಸಮಸ್ಯೆಗಳನ್ನು ತಂದುಕೊಳ್ಳುತ್ತಿದ್ದಾನೆ. ಇದಕ್ಕೆ ಕಾರಣ ವಿಜ್ಞಾನ-ತಂತ್ರಜ್ಞಾನದ ದುರ್ಬಳಕೆಯಾಗಿದೆ. ಹಾಗಾಗಿ ಇವುಗಳ ಸದ್ಬಳಕೆ ಮೂಲಕ ಸಮಸ್ಯೆಗಳನ್ನು ನಿವಾರಿಸಿಕೊಳ್ಳುವತ್ತ ಗಮನ ನೀಡಬೇಕಿದೆ ಎಂದು ಹೇಳಿದರು.

ಅಸಲಿ ಬುದ್ಧಿಮತ್ತೆ ಮರೆಯುತ್ತಿರುವ ಮನುಷ್ಯ: ಮನುಷ್ಯ ಈ ಭೂಮಿ ಮೇಲೆ ಬಂದಾಗಿನಿಂದ ತನ್ನ ಸುತ್ತಮುತ್ತಲ ಸನ್ನಿವೇಶಗಳನ್ನು ಗ್ರಹಿಸಿ ಬೆಳವಣಿಗೆ ಹೊಂದಿದ್ದಾನೆ. ಅಂತೆಯೇ ಒಂದು ಮಗು ಈ ಪ್ರಪಂಚಕ್ಕೆ ಬಂದಾಗ, ತಾನು ಆಲಿಸುವ ಶಬ್ದಗಳನ್ನು ಉಚ್ಚರಿಸಲು ಪ್ರಯತ್ನಿಸುತ್ತಾ ಸಾಗುತ್ತದೆ. ಇದೇ ಪ್ರಕ್ರಿಯೆಯಿಂದಾಗಿ ಕರ್ನಾಟಕದಲ್ಲಿ ಹುಟ್ಟಿದ ಮಗು ಕನ್ನಡ ಕಲಿಯುತ್ತದೆ. ಅದೇ ರೀತಿಯಲ್ಲಿ ಆಯಾಯ ಪ್ರದೇಶದಲ್ಲಿನ ಭಾಷೆಗಳನ್ನು ಅಲ್ಲಿನ ಮಕ್ಕಳು ಕಲಿಯುತ್ತಾರೆ. ಅಂದರೆ ಮನುಷ್ಯನಲ್ಲಿರುವ ಐದು ಜ್ಞಾನೇಂದ್ರಿಯ ಹಾಗೂ ಐದು ಕರ್ಮೇಂದ್ರಿಯಗಳು ಇದನ್ನು ಸಾಧ್ಯ ಮಾಡುತ್ತವೆ. ಜೊತೆಗೆ ಮನುಷ್ಯನಲ್ಲಿ ಒಂದು ಅಸಲಿ ಬುದ್ಧಿಮತ್ತೆ ಇದ್ದು, ನಾವಿಂದು ಈ ಅಸಲಿ ಬುದ್ಧಿಮತ್ತೆಯನ್ನು ಆರ್ಟಿಫಿಷಿಯಲ್ ಇಂಟೆಲಿಜನ್ಸ್ (ಎಐ) ಮೂಲಕ ತರಲು ಪ್ರಯತ್ನ ಮಾಡುತ್ತಿದ್ದೇವೆ. ಆ ಮೂಲಕ ತಾನು ತೊಡಗಿಸಿಕೊಳ್ಳಬೇಕಿರುವ ಪ್ರಕ್ರಿಯೆಗಳಿಂದ ದೂರವಾಗಿ ಎಷ್ಟೋ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾನೆ ಎಂದು ಡಾ.ಎ.ಎಸ್. ಕಿರಣ್‌ಕುಮಾರ್ ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಸುರತ್ಕಲ್‌ನ ಕಲಾಪೋಷಕ ಮತ್ತು ಸಂಘಟಕ ಪಿ.ನಿತ್ಯಾನಂದರಾವ್ ಅವರಿಗೆ 'ಸಂಗೀತ ಸೇವಾನಿಧಿ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಬಳಿಕ ವಿದ್ವಾನ್ ಡಾ.ರಾ.ವಿಶ್ವೇಶ್ವರನ್ ಅವರ ವೀಣಾವಾದನ ನಡೆಯಿತು. ಪಕ್ಕವಾದ್ಯದಲ್ಲಿ ವಿದ್ವಾನ್ ಕೆ.ವಿ.ಪ್ರಸಾದ್ (ಮೃದಂಗ), ವಿದ್ವಾನ್ ಜಿ.ಎಸ್.ರಾಮಾನುಜನ್ (ಘಟಂ) ಸಹಕಾರ ನೀಡಿದರು. ಡಿ.6ರವರೆಗೆ ಇದೇ ಸಭಾಂಗಣದಲ್ಲಿ ಬೆಳಗಿನ ಅವಧಿಯಲ್ಲಿ ವಿದ್ವತ್ ಗೋಷ್ಠಿ ಹಾಗೂ ಸಂಜೆ ಅವಧಿಯಲ್ಲಿ ಸಂಗೀತ ಕಛೇರಿಗಳು ನಡೆಯಲಿವೆ. ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟನಾ ಸಮಾರಂಭದಲ್ಲಿ ಸಾನ್ನಿಧ್ಯ ವಹಿಸಿದ್ದರು. ಸಮ್ಮೇಳನಾಧ್ಯಕ್ಷರೂ ಆದ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ 'ಅಕಾಡೆಮಿ ರತ್ನ' ಫೆಲೋಷಿಪ್ ಪುರಸ್ಕೃತ ವೈಣಿಕ ವಿದ್ವಾನ್ ಡಾ.ರಾ. ವಿಶ್ವೇಶ್ವರನ್, ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್ ಅಧ್ಯಕ್ಷರೂ ಆದ ಕೇನ್ಸ್ ಟೆಕ್ನಾಲಜಿ ವ್ಯವಸ್ಥಾಪಕ ನಿರ್ದೇಶಕ ರಮೇಶ್ ಕಣ್ಣನ್ ಸೇರಿದಂತೆ ಟ್ರಸ್ಟ್‌ನ ಮೈಸೂರು ನಾಗರಾಜ್, ಮೈಸೂರು ಮಂಜುನಾಥ್ ಸೇರಿದಂತೆ ಪದಾಧಿಕಾರಿ ಗಳು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಗಿರಾಕಿ : ಒಂದು ಕೆ.ಜಿ. ಚಿಪ್ಸ್‌ಗೆ ಎಷ್ಟು ರೂಪಾಯಿ
ವ್ಯಾಪಾರಿ : 80 ರೂಪಾಯಿ
ಗಿರಾಕಿ : ಲೂಸ್ ತಗೊಂಡರೆ
ವ್ಯಾಪಾರಿ : ಯಾರ್ ತಗೊಂಡ್ರು ಅಷ್ಟೆ.

ಮೈಸೂರು ಮಿತ್ರ

ಮಂಗಳವಾರ, 3 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಬದುಕು ಎಂಬುದು ಹತ್ತಿಯಿದ್ದಂತೆ. ಅದನ್ನು ಸಂತೋಷವೆಂಬ ಗಾಳಿಯಲ್ಲಿ ಊದಿ. ಆದರೆ ಅದನ್ನು ದುಃಖವೆಂಬ ನೀರಿನಲ್ಲಿ ಅದ್ದಬೇಡಿ.–ಕುವೆಂಪು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿನ್ನಲ್ಲಿ ನೀ ಹುಡುಕು, ಅರಿಷಡ್ವರ್ಗಗಳ ಹೊರ ಹಾಕು.

ನಿಮ್ಮ ಪತ್ರಗಳು

■ ರೈಲ್ವೆ ಇಲಾಖೆ ಹಿರಿಯ ನಾಗರಿಕರಿಗೆ ಶೇ.40 ರಿಯಾಯಿತಿ ನೀಡಲಿ

ಮಾನ್ಯರೆ,

ಕಳೆದ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಲ್ಲಿ ಭಾರತೀಯ ರೈಲ್ವೆಗೆ 12,154 ಕೋಟಿ ರೂ. ಆದಾಯ ಬಂದಿರುವುದಾಗಿ, ರೈಲ್ವೆ ಸಚಿವರು ಮಾಹಿತಿ ನೀಡಿದ್ದಾರೆ, ಆದರೆ, ಕಳೆದ ಹತ್ತು ವರ್ಷಗಳ ಹಿಂದಿನಿಂದಲೂ, 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ರೈಲ್ವೆ ಇಲಾಖೆಯು ರೈಲ್ವೆ ಪ್ರಯಾಣದ ದರದಲ್ಲಿ ಶೇ.30 ರಷ್ಟು ರಿಯಾಯಿತಿ ನೀಡುತ್ತಿತ್ತು. 60 ವರ್ಷ ಪೂರೈಸಿದ ಮಹಿಳೆಯರು ಸೇರಿದಂತೆ ಎಲ್ಲರಿಗೂ ಇದು ಅನ್ವಯವಾಗುತ್ತಿತ್ತು. ಆದರೆ ಕಳೆದ ಐದು ವರ್ಷಗಳಿಂದ ಇತ್ತೀಚೆಗೆ ಅಂದರೆ ಕೋವಿಡ್ ಮಹಾಮಾರಿ ದೇಶದಲ್ಲಿ ವ್ಯಾಪಕವಾಗಿ ಹರಡಿದ ನಂತರ ಹಿರಿಯ ನಾಗರಿಕರು ಓಡಾಡುವುದನ್ನು ಸ್ವಲ್ಪ ಮಟ್ಟಿಗಾದರೂ ತಡೆಯಲು ಈ ರಿಯಾಯಿತಿಯನ್ನು ಕೇಂದ್ರ ಸರ್ಕಾರ ವಾಪಸ್ಸು ಪಡೆದಿದೆ ಎಂದು ರೈಲ್ವೆ ಇಲಾಖೆ ಪ್ರಕಟಣೆ ಹೊರಡಿಸಿತ್ತು. ಇದರಿಂದಾಗಿ ರೈಲ್ವೆ ಇಲಾಖೆಗೆ ಬರುತ್ತಿದ್ದ ಆದಾಯ ಪ್ರಮಾಣವೂ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರಲೂಬಹುದು. ಆದರೆ, ಈಗ ರೈಲ್ವೆ ಇಲಾಖೆಗೆ ಸಾಕಷ್ಟು ಪ್ರಮಾಣದಲ್ಲಿ ಆದಾಯವು ಬರುತ್ತಿರುವುದರಿಂದ ಹಾಗೂ ದೇಶದಲ್ಲಿ ಕೋವಿಡ್ ಸೋಂಕು ಹೆಚ್ಚು ಕಡಿಮೆ ಮರೆಯಾಗುತ್ತಾ ಬಂದಿದೆ. ರೈಲ್ವೆ ಇಲಾಖೆಯು ಇತ್ತೀಚಿನ ವರ್ಷಗಳಲ್ಲಿ ಲಾಭದಾಯಕವಾಗಿಯೂ ನಡೆಯುತ್ತಿರುವುದರಿಂದ ಕೇಂದ್ರ ರೈಲ್ವೆ ಸಚಿವರು ಹಿರಿಯ ನಾಗರಿಕರಿಗೆ ರೈಲ್ವೆ ಪ್ರಯಾಣದಲ್ಲಿ ಹಿಂದೆ ಇದ್ದ ಶೇ.30 ರಷ್ಟು ರಿಯಾಯಿತಿಯನ್ನು, ಶೇ.40ಕ್ಕೆ ಹೆಚ್ಚಿಸಿ, ಹಿರಿಯ ನಾಗರಿಕರು ರೈಲಿನಲ್ಲಿ ಸುರಕ್ಷಿತವಾಗಿ ಓಡಾಡುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು

■ ಸಿಎಂ ಸಿದ್ದರಾಮಯ್ಯ ಘನತೆ ಉಳಿಸಿಕೊಳ್ಳಲು ಚಿಂತಿಸಲಿ

ಮಾನ್ಯರೆ,

'ಕೇಡುಗಾಲಕ್ಕೆ ಕಾಗೆ ರಾಗಿ ತಿಂತು' ಅನ್ನುವುದು ನಮ್ಮ ಗ್ರಾಮೀಣ ಪ್ರದೇಶದಲ್ಲಿನ ಗಾದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಎರಡನೆಯ ದೇವರಾಜ ಅರಸ್ ಎಂಬ ಹೆಚ್ಚುಗಾರಿಕೆಯನ್ನು ಅವರ ಅಭಿಮಾನಿಗಳಿಂದ ಪಡೆದುಕೊಳ್ಳುತ್ತಿದ್ದಾರೆ. ಅದಕ್ಕನುಗುಣವಾಗಿ ಸಿದ್ದರಾಮಯ್ಯನವರು ತಮ್ಮ ಮಾತುಗಾರಿಕೆಯಲ್ಲಿ, ಆಡಳಿತದಲ್ಲಿ ಸಾರ್ವಜನಿಕರೊಂದಿಗೆ, ಪತ್ರಿಕಾ ಮಾಧ್ಯಮದೊಂದಿಗೆ ವ್ಯವಹರಿಸುವಾಗ ಅಗತ್ಯ ತೂಕವನ್ನು ಇಟ್ಟುಕೊಳ್ಳಬೇಕಾದುದು ಅಪೇಕ್ಷಣೀಯ. ದೇವರಾಜ ಅರಸ್ ಅವರು ತಾನೊಬ್ಬ ಸರ್ವಾಧಿಕಾರಿಯೆಂದಾಗಲಿ, ಸರ್ವಜ್ಞ ಎಂದಾಗಲಿ, ತಾನೊಬ್ಬ ಕರ್ನಾಟಕಕ್ಕೆ ಅನಿವಾರ್ಯವಾದ ದೇವತಾ ಮನುಷ್ಯ ಎಂದಾಗಲಿ, ಎಲ್ಲದರಲ್ಲೂ ತಾನೇ ಸಮರ್ಥನೆಂದಾಗಲಿ, ಸಂವಿಧಾನಕ್ಕೆ ಸವಾಲು ಹಾಕಬಲ್ಲೆ ಎಂದಾಗಲೀ ಎಂದೂ ಚಿಂತಿಸಿರಲಿಲ್ಲ.

ಯಾವುದೇ ರಾಜಕೀಯ ಪಕ್ಷ ಅಥವಾ ರಾಜಕೀಯ ವ್ಯಕ್ತಿಗಳಿಂದ ವಿದ್ಯಾಕ್ಷೇತ್ರ ದೂರವಿರಬೇಕೆಂದು ವಿಶ್ವವಿದ್ಯಾಲಯಗಳನ್ನು ಸ್ವಾತಂತ್ರ್ಯಪೂರ್ವದಿಂದಲೂ ಈವರೆಗೆ ನಡೆಸಿಕೊಂಡು ಬರಲಾಗಿದೆ. ಆದರೆ ತುಂಬಾ ಚಿಂತನಾಶೀಲ ಎಂದೇ ಈವರೆಗೆ ಭಾವಿಸಲಾಗಿದ್ದ ಸಿದ್ದರಾಮಯ್ಯನವರು ಇತ್ತೀಚೆಗೆ ತಮ್ಮ ಮೇಲೆ ಬಂದ ಗೊಂದಲಗಳಿಂದ ಜನರ ಮನಸ್ಸಿನಲ್ಲಿ ತಮ್ಮ ಬಗ್ಗೆ ಉಂಟಾಗಿರಬಹುದಾದ ಕಪ್ಪು ಚುಕ್ಕೆಗಳನ್ನು ಮರೆ ಮಾಡಲೋ ಎಂಬಂತೆ ಹತಾಶರಾಗಿ ತನ್ನ ವರ್ಚಸ್ಸನ್ನು ಹೇಗಾದರೂ ಹೆಚ್ಚಿಸಿಕೊಳ್ಳಲು ಇಲ್ಲದ ಮೆರುಗುಗಳನ್ನು ಮೆತ್ತಿಕೊಳ್ಳಲು ಪರದಾಡುತ್ತಿರುವುದರ ಸಂಕೇತವೇ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿವಿಯ ಕುಲಪತಿಯಾಗಲು ಹೊರಟಿದ್ದಾರೆ ಎನ್ನಿಸುತ್ತದೆ. ಇದು ಕೇವಲ ಒಂದು ಸ್ಯಾಂಪಲ್ ಆಗಿದ್ದು ಪ್ರತಿಕ್ರಿಯೆ ನೋಡಿಕೊಂಡು ಉಳಿದೆಲ್ಲಾ ವಿಶ್ವವಿದ್ಯಾಲಯಗಳಿಗೂ ಇದನ್ನು ವಿಸ್ತರಿಸಿಕೊಂಡರೂ ಅಚ್ಚರಿಪಡಬೇಕಿಲ್ಲ. ವಿದ್ಯೆ ಬರದವನು ವಿದ್ಯಾಮಂತ್ರಿ, ಹುದ್ದೆಗೆ ಯಾವುದೇ ರೀತಿಯಲ್ಲಿಯೂ ಅರ್ಹತೆಯಿಲ್ಲದವರು ಛಾನ್ಸಿಲರ್. ಮುಂದೊಂದು ದಿನ ರಾಜ್ಯದ ಕಾನೂನು ಮಂತ್ರಿಯೇ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಎಂಬ ನಿರ್ಣಯ ತೆಗೆದುಕೊಂಡರೂ ಅಚ್ಚರಿ ಪಡಬೇಕಿಲ್ಲವೇನೋ! ಹತಾಶೆಯ ಕಾರಣಕ್ಕೆ ಬಳಿದು ಕೊಳ್ಳುವ ಬಣ್ಣಗಳಿಂದ ನಮ್ಮ ಅರ್ಹತೆಯನ್ನು, ತೂಕವನ್ನು ಹೆಚ್ಚಿಸಿಕೊಳ್ಳುವುದು ಸಾಧ್ಯವಿಲ್ಲ. ಮುಡಾ ಹಗರಣದ ಸಂದರ್ಭದಲ್ಲಿ ಆತ್ಮಸಾಕ್ಷಿಯ ಮಾತನಾಡಿದ್ದ ಸಿದ್ದರಾಮಯ್ಯನವರು ಆ ಹಿನ್ನೆಲೆಯಲ್ಲಿ ತಾವು ಛಾನ್ಸಿಲರ್ ಆಗುವ ಸ್ಥಾನದ ಬಗೆಗೆ ಯೋಚಿಸಬೇಕಾದ ಅಗತ್ಯವಿದೆ.

ಅವರೊಬ್ಬ ಸಮರ್ಥ ಆಡಳಿತಗಾರ. ಅಷ್ಟು ಸಾಕು ಅವರ ಘನತೆಯನ್ನು ವೈಭವೀಕರಿಸಿಕೊಳ್ಳಲು, ಆಡಳಿತದಲ್ಲಿ ಹಿಂದಿನ ಅವಧಿಯ ಬಿಗಿ, ಕಟು ನಿರ್ಧಾರ, ಕಹಿಯಾದರೂ ಅನಿವಾರ್ಯವೆನಿಸುವ ಕಾನೂನುಗಳನ್ನು ಜಾರಿಗೆ ತರುವುದು ಅವರೊಬ್ಬರಿಂದ ಸಾಧ್ಯ. ಆ ಮೂಲಕ ಅವರೊಬ್ಬ– ಯಾಕೆ ಇನ್ನೊಬ್ಬ ದೇವರಾಜ ಅರಸು, ವೀರೇಂದ್ರ ಪಾಟೀಲರಾಗಬಹುದೇ ಹೊರತು ಇಂತಹ ಹುಂಬ ಹೆಜ್ಜೆಗಳಿಂದಲ್ಲ. ಬೇರೆ ರಾಜ್ಯದವರ ಉದಾಹರಣೆ ನಮಗೆ ಬೇಡ. ಕರ್ನಾಟಕಕ್ಕೆ ಅದರದ್ದೇ ಆದ ತೂಕ; ಸಂಸ್ಕಾರವಿದೆ. ಅದನ್ನು ಉಳಿಸಿಕೊಳ್ಳುವುದರತ್ತ ಸಿದ್ದರಾಮಯ್ಯನವರು ಚಿಂತಿಸಬೇಕಿದೆ.

–ದೊಡ್ಡಕಮರವಳ್ಳಿ ಸಿದ್ದಲಿಂಗಪ್ಪ, ಜೆ.ಪಿ.ನಗರ, ಮೈಸೂರು

■ ಅಮೇರಿಕ ನಾಯಕತ್ವಕ್ಕೆ ಅಭಿನಂದನೆಗಳು

ಮಾನ್ಯರೆ,

ಮಧ್ಯ ಪ್ರಾಚ್ಯದಲ್ಲಿ ಕಳೆದ ಹಲವಾರು ದಿನಗಳಿಂದ ಉಂಟಾಗಿದ್ದ ಉದ್ವಿಗ್ನ ಪರಿಸ್ಥಿತಿ ಕಡೆಗೂ ಶಮನಗೊಂಡಿರುವುದು ಸ್ವಾಗತಾರ್ಹ. ಅಪಾರವಾದ ಜೀವ ಹಾನಿಗೆ ಕಾರಣವಾಗಿದ್ದ ಇಸ್ರೇಲ್ ಮತ್ತು ಇರಾನ್ ಬೆಂಬಲಿತ ಬಂಡುಕೋರರ ಪಡೆ ಹೆಜ್ಬುಲ್ಲಾ ನಡುವೆ ಕಳೆದ 14 ತಿಂಗಳಿಂದ ನಡೆಯುತ್ತಿದ್ದ ಯುದ್ಧಕ್ಕೆ ಅಮೇರಿಕದ ಮಧ್ಯಸ್ಥಿಕೆಯಲ್ಲಿ 'ತಾತ್ಕಾಲಿಕ ಕದನ ವಿರಾಮ' ಏರ್ಪಡುವ ಮೂಲಕ ಇಡೀ ವಿಶ್ವವೇ ನಿರಾಳವಾಗಿದೆ.

ಈ ಯುದ್ಧ ವಿರಾಮ (cease fire) 2 ತಿಂಗಳು ಚಾಲ್ತಿಯಲ್ಲಿರುವುದಾಗಿ ಹೇಳಲಾಗಿದ್ದು, ಒಂದು ವೇಳೆ ಈ ಅವಧಿಯಲ್ಲಿ ಬಂಡುಕೋರರ ಪಡೆ ಇಸ್ರೇಲ್ ವಿರುದ್ಧ ದಾಳಿ ಮಾಡಿದರೆ, ಇಸ್ರೇಲ್ ಆತ್ಮರಕ್ಷಣೆಗೆ (self defence) ಪ್ರತಿದಾಳಿ ನಡೆಸುವ ಹಕ್ಕನ್ನು ಕಾಯ್ದಿರಿಸಿಕೊಂಡಿದೆ.

ಯುದ್ಧವನ್ನು ಕೊನೆಗಾಣಿಸಲು ವಿಶ್ವಸಂಸ್ಥೆ ಕೂಡ ಸಾಕಷ್ಟು ಶ್ರಮ ವಹಿಸಿತ್ತಾದರೂ ಅದು ವಿಫಲವಾಗಿತ್ತು. ಭಾರತ ಕೂಡ ರಾಜತಾಂತ್ರಿಕ ಮಾರ್ಗಗಳ ಮೂಲಕ ಯುದ್ಧ ನಿಲುಗಡೆಗೆ ಪ್ರಯತ್ನಿಸಿತ್ತು. ಈಗ ಅಮೇರಿಕದ ಮುಂದಾಳತ್ವದಲ್ಲಿ ಉಂಟಾಗಿರುವ ಕದನ ವಿರಾಮ ಘೋಷಣೆ ಇಡೀ ವಿಶ್ವವೇ ಸಮಾಧಾನಪಡುವಂತಾಗಿದೆ. ಏಕೆಂದರೆ, ಈ ಯುದ್ಧ ಮೂರನೇ ಜಾಗತಿಕ ಯುದ್ಧವಾಗಿ ಮಾರ್ಪಡುವ ಸೂಚನೆಗಳು ಇದ್ದವು.

ಕದನ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೂ ಸುಮಾರು 45 ಸಾವಿರಕ್ಕೂ ಅಧಿಕ ಜನರು, 244 ಮಾನವ ಹಕ್ಕುಗಳ ಹೋರಾಟಗಾರರು ಹಾಗೂ 135 ಪತ್ರಕರ್ತರು ಮತ್ತು ಮಾಧ್ಯಮ ಸಿಬ್ಬಂದಿಗಳು ತಮ್ಮ ಪ್ರಾಣ ಕಳೆದುಕೊಂಡಿದ್ದರು ಹಾಗೂ ಜನಜೀವನ ಅಸ್ತವ್ಯಸ್ತಗೊಂಡಿತ್ತು. ಇದರ ಜೊತೆಗೆ ಲಕ್ಷಾಂತರ ಜನರು ಗಾಯಗೊಂಡಿದ್ದರು. ಆದರೆ, ಪರಸ್ಪರ ಕಾದಾಡುತ್ತಿದ್ದ ಇಸ್ರೇಲ್ ಹಾಗೂ ಹೆಜ್ಬುಲ್ಲಾ ನಡುವೆ ಸಂಧಾನ ಏರ್ಪಡಿಸಿ ಯುದ್ಧಕ್ಕೆ ತಾತ್ಕಾಲಿಕ ವಿರಾಮ ನೀಡಿರುವುದು ಅಮೇರಿಕ ಹೆಗ್ಗಳಿಕೆಯಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು, 9341731661



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಕಾಯಕ ನಿಷ್ಠೆಯಿಂದಷ್ಟೇ ಆಯುಷ್ಮಾನ್ ಭಾರತ

ತನ್ನ ಬಡತನದಲ್ಲೇ ಒಬ್ಬ ಬಡವ ಕೂಡ ಅವಕಾಶ ಸಿಕ್ಕಾಗ ತನ್ನಂತೆಯೇ ಕಷ್ಟದಲ್ಲಿದ್ದವರಿಗೆ ಏನಾದರೊಂದು ಸಹಾಯ ಮಾಡುವ ತವಕದಲ್ಲಿಯೇ ಇರುತ್ತಾನೆ. ಸಿರಿವಂತ ಕೂಡ ತನ್ನಲ್ಲಿರುವ ಸಂಪತ್ತಿನ ಸದ್ಬಳಕೆಗಾಗಿ ತನ್ನಲಿರುವ ಸಂಪತ್ತಿನಲ್ಲಿ ಕುಟುಂಬ ಪರಿವಾರದವರಿಗೆ ಮೀಸಲಿಟ್ಟು, ಯಥೇಚ್ಛವಾಗಿ ಹೆಚ್ಚುವರಿಯಾದುದ್ದನ್ನು ಸಮಾಜಕ್ಕೆ ಬೇರೆ ಬೇರೆ ಆಯಾಮಗಳಲ್ಲಿ ಸೇವೆ ಸಲ್ಲಿಸಿ ಕೃತಾರ್ಥಭಾವ ಅನುಭವಿಸುತ್ತಾನೆ. ಕೆಲವರು ಮಾತ್ರ ಸಮಾಜದ ಸಂಪತ್ತನ್ನೆ ಸಮಾಜಕ್ಕರ್ಪಿಸಿ ನಾನು ಕೊಟ್ಟೆ, ನಾನು ಕೊಟ್ಟೆ ಎನ್ನುತ್ತಿರುತ್ತಾರೆ. ಒಟ್ಟಾರೆ ಎಲ್ಲರಿಗೂ ಒಂದಲ್ಲ ಒಂದು ರೀತಿಯಲ್ಲಿ ಸ್ವಂತಕ್ಕೆ ಸರ್ವಸ್ವ ಸಮಾಜಕ್ಕೆ ಏನಾದರೊಂದು ರೀತಿಯಲ್ಲಿ ತನ್ನಲ್ಲಿದ್ದುದನ್ನು ಹಂಚಿ ಕೃತಾರ್ಥಭಾವ ಅನುಭವಿಸುವ ತವಕದಲ್ಲಿರುತ್ತಾರೆ.

ಕೆಲವರು ಸಮಾಜಕ್ಕೆ ಸರ್ವಸ್ವವನ್ನರ್ಪಿಸಿ ಸ್ವಂತಕ್ಕೆ ಸ್ವಲ್ಪ ಮಾಡಿಕೊಂಡು ಕೀರ್ತಿವಂತರಾಗಿ ಆಳಿ, ಬಾಳಿ, ತಾವು ಅಳಿದಮೇಲು ಜನರ ಭಾವ ಮಂದಿರದಲ್ಲಿ ಅಚ್ಚಳಿಯದೆ. ಉಳಿದವರು ಅನೇಕರಿದ್ದಾರೆ. ಹಾಗೆಂದ ಮೇಲೆ ಹಂಚಿಕೊಳ್ಳುವುದರಲ್ಲಿ ಏನೋ ಒಂದು ಸುಖವಿದೆ, ಒಂದು ಸಮಾಧಾನವಿದೆ. ಇದನ್ನೆ ಸಾಮಾಜಿಕ ವಿದ್ಯಮಾನ ಎಂತಲೂ ಕರೆಯುತ್ತೇವೆ. ಇದು 2+2=4 ಎನ್ನುವ ರೀತಿಯ ಮ್ಯಾಥಮಿಟಿಕಲ್ ಕ್ಯಾಲುಕ್ಯೂಲೇಷನ್ ಅಲ್ಲ, ನಮ್ಮೊಳಗೆ ಸಂಚಯನಗೊಂಡ ಸಮಾಜಮುಖಿ ತುಡಿತಗಳ, ಒತ್ತಡಗಳ ಬಿಡುಗಡೆ ಅಷ್ಟೆ, ಇದು ಲೆಕ್ಕಾಚಾರವಲ್ಲ, ಮನೋಮಂದಿರದ ಸದಾಚಾರ! ಇಡೀ ದೇಶವೇ ಕೊರೊನಾ ಸಂಬಂಧಿ ಲಾಕ್‌ಡೌನ್‌ನಿಂದ ತತ್ತರಿಸಿದಾಗ ಸಮಾಜಕ್ಕೆ ಈ ಲೆಕ್ಕಾಚಾರ ಮತ್ತು ಸದಾಚಾರಗಳೆರಡು ಸಮಯಕ್ಕೆ ಸರಿಯಾಗಿ ಕ್ರಿಯೆ–ಪ್ರತಿಕ್ರಿಯೆಗಳ ರೀತಿಯಲ್ಲಿ ಒದಗಿ ಬಂದಿವೆ.

ಇಂಥ ಕಾಲಘಟ್ಟದಲ್ಲಿ ದುಡ್ಡು–ದುಗ್ಗಾಣಿಗಳ ಮುಖೇನ ಸಮಾಜಕ್ಕೆ ಸಮಾಜದ ಉಗ್ರಾಣ ತುಂಬಿಸಲಾಗದ ಕಲಾ ಕ್ಷೇತ್ರ ಕೂಡ ಹಿಂದೆ ಬೀಳಲಿಲ್ಲ, ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ ಮುಂತಾದ ಸಾಂಸ್ಕೃತಿಕ ವಲಯದಲ್ಲಿ ತೊಡಗಿಸಿಕೊಂಡು ಕೆಲಸ ಮಾಡುತ್ತಿರುವ ಕವಿ, ಕಲಾವಿದರು ಕೂಡ ತಮ್ಮ ತಮ್ಮ ಕಲಾ ಸಾಧನೆಯ ಕುಶಲತೆಯ ಸಂಪತ್ತನ್ನು ತಮ್ಮ ಮಾತು, ಕವಿತೆ, ಹಾಡು, ತಮ್ಮ ಬರಹ, ನಟನೆ, ನಾಟ್ಯ, ಚಿತ್ರ, ಶಿಲ್ಪ ಮುಂತಾದವುಗಳ ಮುಖೇನ ಆತಂಕದಲ್ಲಿದ್ದ ಜನರ ಅಂತರಂಗಕ್ಕೆ ತಮ್ಮ ಕಲೆಯ ಮೂಲಕ ರಮಣೀಯತೆಯನ್ನು ತುಂಬಿ ಕೊರೊನಾ ಕಾಲದಲ್ಲಿ ಮನದಲ್ಲಿ ಮನೆ ಮಾಡಿದ್ದ ಆತಂಕದ ಜಾಗ ತುಂಬಿ ಸಮಾಜಮುಖಿ ಕೃತಾರ್ಥತೆಯನ್ನು ಅನುಭವಿಸಿದ್ದಾರೆ. ಹಾಗೆಂದ ಮೇಲೆ ಆರ್ಥಿಕ ಶ್ರೀಮಂತಿಕೆಗೆ ಸರಿಸಮನಾದ ಮತ್ತೊಂದು ಶ್ರೀಮಂತಿಕೆ ಇದೆ ಎಂದಾಯಿತಲ್ಲ ಅದೇ ಕಲಾ ಶ್ರೀಮಂತಿಕೆ!

ವ್ಯಾಸ–ವಾಲ್ಮೀಕಿಗಳಾಗಲೀ, ಪಂಪ–ಕಾಳಿದಾಸರಾಗಲೀ, ಭಾಸಭವಭೂತಿಗಳಾಗಲಿ ಬಾಣಾ–ಕಲ್ಹಣರಾಗಲಿ, ಆ ಕಾಲದಿಂದ ಈ ಕಾಲದವರೆಗೆ ಉಳಿದು ಬಂದಿದ್ದಾರೆಂದರೆ ಸಮಾಜದ ಸುಖಕ್ಕಾಗಿ ತಾವು ಸೃಷ್ಟಿಸಿ ಸಮಾಜಕ್ಕೆ ಅರ್ಪಿಸಿದ ಈ ಅಂತರಂಗದ ಆಸ್ತಿಯಿಂದ! ಪ್ರಭುಗಳು ಕಟ್ಟಿಸಿದ ಕೋಟೆ–ಕೊತ್ತಲುಗಳು, ಸಿರಿವಂತರು ಕಟ್ಟಿಸಿದ ಛತ್ರ–ಅರವಟ್ಟಿಗೆಗಳು ಬಸದಿ–ದೇವಾಲಯಗಳು, ಮಂದಿರ ಮಸೀದಿಗಳು ಉಳಿದ ಹಾಗೆಯೇ ಅಕ್ಷರದ ಆಸ್ತಿ ಕೂಡ ಇವುಗಳ ಪಕ್ಕದಲ್ಲೇ ಪರ್ಯಾಯ ಮಾರ್ಗದಲ್ಲಿ ತಮ್ಮ ಆಸ್ತಿತ್ವ ಉಳಿಸಿಕೊಂಡಿವೆ.

ಕಾಲ ಗರ್ಭವೆಂಬುದು ಅಗಸ್ತ್ಯನ ಜೀರ್ಣಾಗ್ನಿಯಿದ್ದಂತೆ. ಇಲ್ಲಿ ಎಲ್ಲದರ ಆಸ್ತಿತ್ವವು ಜೀರ್ಣವಾಗಿ ಹೊಗುತ್ತದೆ. ಮನುಷ್ಯ ಮಾತ್ರ ತಾನು ಕಟ್ಟಿದ ಮಹಲು ತಾನು ಸೃಷ್ಟಿಸಿದ ಸಾಂಸ್ಕೃತಿಕ ಸುಖದ ಅಮಲು ಎರಡನ್ನು ಈ ಅಗಸ್ತ್ಯನ ಜೀರ್ಣಾಗ್ನಿಯಿಂದ ಪಾರು ಮಾಡಿ, ತನ್ನ ನಂತರವು ಉಳಿಸಿ ಹೋಗುವ ನಿಟ್ಟಿನಲ್ಲಿ ತನ್ನ ಶ್ರಮ ಮತ್ತು ಅಭಿವ್ಯಕ್ತಿಗಳನ್ನು ಕಾಲಗರ್ಭದ ಈ ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗದಂತೆ ಸಂರಕ್ಷಿಸಿ ಇಟ್ಟು ಹೋಗುವ ಕುಶಲಕರ್ಮಿಯಾಗಿಯೇ ಯೋಚಿಸುತ್ತಾನೆ. ಪರಿಣಾಮ ನಮ್ಮ ಸಂಸ್ಕೃತಿ, ನಮ್ಮ ಕಲೆ, ನಮ್ಮ ನಾಗರಿಕತೆಗಳು ಇಂದಿಗೂ ನಮ್ಮ ಅಸ್ಮಿತೆಯನ್ನು ಉಳಿಸುವ ಪರಂಪರೆಯಾಗಿಯೇ ಉಳಿದು ಬಂದಿವೆ. ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗದಂತೆ ಉಳಿಸಿಟ್ಟ ಈ ಎಲ್ಲವೂ 'ಹಳೆಯಚಿನ್ನ' ಗಳಂತೆ ಬೆಲೆ ಬಾಳುವ ಸ್ಮಾರಕಗಳಂತೆ, ನಮ್ಮ ಕಾಲದಲ್ಲಿ ಕಂಗೊಳಿಸಿವೆ. ಇಂಥ ಕಲಾತ್ಮಕ ಅಭಿವ್ಯಕ್ತಿಗಳು ಕಾಲಾತೀತವಾಗಿ ಉಳಿಯಬೇಕಾದರೆ ಕಲಾಕಾರನಿಗೆ ಅವಶ್ಯವಾಗಿ ಬೇಕಾದುದು ಮಾತ್ರ Involvment ಅಂದರೆ ಯಾವ ಕಲಾಕಾರ ಸಂತೆಗೆ ಮೂರು ಮೊಳ ಹೆಣೆಯುತ್ತಾನೋ ಆತ ಕಾಲಪ್ರವಾಹದಲ್ಲಿ ಕೊಚಿ ಹೋಗುತ್ತಾನೆ, ಯಾವ ಕಲಾಕಾರ ತನ್ನ ಕಲಾಸೃಷ್ಟಿಯ ಮೂಲಸೆಲೆಯೊಂದಿಗೆ ತಾನೂ ಮಿಳಿತವಾಗಿ ತನ್ನ ಇರುವಿಕೆಯನ್ನು ಸಂಪೂರ್ಣವಾಗಿ ತನ್ನ ಸೃಷ್ಟಿ ಕ್ರಿಯೆಗೆ ವಿನಿಯೋಗಿಸುತ್ತಾನೋ ಆ ಕಲಾಸೃಷ್ಟಿ ಮತ್ತು ಆ ಕಲಾಕಾರ ಇಬ್ಬರೂ ಸಮಾಜದ ಜೀರ್ಣಾಗ್ನಿಯಲ್ಲಿ ಜೀರ್ಣವಾಗದೆ ಕಾಲ ಪ್ರವಾಹದಲ್ಲಿ ಕೊಚ್ಚಿ ಹೋಗದೆ ಉಳಿದು ಬಿಡುತ್ತಾರೆ. ತಂತ್ರಜ್ಞಾನದ ಈ ಯುಗದಲ್ಲೂ ನಮ್ಮೆಲ್ಲಾ ಸಾಧನೆಗಳನ್ನು ಸಂರಕ್ಷಿಸಿ ಇಟ್ಟುಕೊಂಡರು, ಪಕ್ಕದಲ್ಲೇ ಡಿಲೀಷನ್ ಅಪ್ಷನ್ ಇರುತ್ತದೆ. ಯಾರಿಗೆ ಗೊತ್ತು! ಯಾವ ಸಂದರ್ಭದಲ್ಲೋ ಅದು ಹೇಗೋ ಎಲ್ಲವೂ ಡಿಲೀಟ್–ಆಗಿ ಹೋಗಿಬಿಡಬಹುದು. ಆದರೆ ಅದು ಪ್ರಗತಿಪರವೋ, ಸಾಂಪ್ರದಾಯಕವೋ ಅದು ಯಾವುದೇ ಇರಲಿ ಇಬ್ಬರ ಉದ್ದೇಶವು ಒಂದೇ, ಅದು ಸಾಮಾಜಿಕ ಸುಖಕ್ಕಾಗಿ, ಸಮಾಜಮುಖಿಯಾಗಿ ನಿರ್ಮಾಣಗೊಂಡಿದ್ದು! ಆದರೆ Involvment ಇಲ್ಲದೆ ಸೃಷ್ಟಿಸಿದ ಯಾವುದು ಕೂಡ ತನ್ನ ಕಾಲಗರ್ಭದಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಿಲ್ಲ. ಇದಕ್ಕೊಂದು ಉದಾರಣೆಯನ್ನು ಇಲ್ಲಿ ಉಲ್ಲೇಖಿಸಬೇಕು.

> **“** ಸಾಹಿತ್ಯ, ಸಂಸ್ಕೃತಿ, ಕಲೆ, ಸಂಗೀತ ಮುಂತಾದ ಸಾಂಸ್ಕೃತಿಕ ವಲಯದಲ್ಲಿ ತೊಡಗಿಸಿಕೊಂಡು ಕೆಲಸ ಮಾಡುತ್ತಿರುವ ಕವಿ, ಕಲಾವಿದರು ಕೂಡ ತಮ್ಮ ತಮ್ಮ ಕಲಾ ಸಾಧನೆಯ ಕುಶಲತೆಯ ಸಂಪತ್ತನ್ನು ತಮ್ಮ ಮಾತು, ಕವಿತೆ, ಹಾಡು, ತಮ್ಮ ಬರಹ, ನಟನೆ, ನಾಟ್ಯ, ಚಿತ್ರ, ಶಿಲ್ಪ ಮುಂತಾದವುಗಳ ಮುಖೇನ ಆತಂಕದಲ್ಲಿದ್ದ ಜನರ ಅಂತರಂಗಕ್ಕೆ ತಮ್ಮ ಕಲೆಯ ಮೂಲಕ ರಮಣೀಯತೆಯನ್ನು ತುಂಬಿ ಕೊರೊನಾ ಕಾಲದಲ್ಲಿ ಮನದಲ್ಲಿ ಮನೆ ಮಾಡಿದ್ದ ಆತಂಕದ ಜಾಗ ತುಂಬಿ ಸಮಾಜಮುಖಿ ಕೃತಾರ್ಥತೆಯನ್ನು ಅನುಭವಿಸಿದ್ದಾರೆ. ಹಾಗೆಂದ ಮೇಲೆ ಆರ್ಥಿಕ ಶ್ರೀಮಂತಿಕೆಗೆ ಸರಿಸಮನಾದ ಮತ್ತೊಂದು ಶ್ರೀಮಂತಿಕೆ ಇದೆ ಎಂದಾಯಿತಲ್ಲ, ಅದೇ ಕಲಾ ಶ್ರೀಮಂತಿಕೆ!

1258ರಲ್ಲಿ ಶಿಲ್ಪಕಲಾ ವೈಭವ ಪೂರ್ಣಗೊಳ್ಳುತ್ತಿದ್ದ ಕಾಲ ಮೂರನೇ ನರಸಿಂಹ ಪ್ರಭು, ಸೋಮನಾಥ ದಂಡನಾಯಕ ಸೋಮನಾಥನ ನೇತೃತ್ವದಲ್ಲಿ ಆವತ್ತಿನ ಕಾಲಕ್ಕೆ ಸೆಲೆಬ್ರಿಟಿ ವರ್ಚಸ್ಸಿನಲ್ಲಿ ಕೆಲಸ ಮಾಡುತ್ತಿದ್ದ ಶಿಲ್ಪಿ ಮಲ್ಲಿತಮ. ಆಗ ನಿರ್ಮಾಣಗೊಂಡ ಶಿಲ್ಪ ವೈಭವವೇ ಇವತ್ತಿನ ಮೈಸೂರು ಜಿಲ್ಲೆಯ ಸೋಮನಾಥಪುರ. ಸೋಮನಾಥಪುರದಲ್ಲಿ ಶಿಲ್ಪಿಗಳು ಪ್ರಾಂಗಣದ ಕೆಲಸ ಮಾಡುತ್ತಿರುತ್ತಾರೆ. ಶಿಲ್ಪ ಕಲಾ ವೈಭವಕ್ಕಾಗಿ ಹತ್ತಾರು ಶಿಲ್ಪಿಗಳು ಹೀಗೆ ಹಗಲಿರುಳೆನ್ನದೆ ಕೆಲಸ ಮಾಡುತ್ತಿದ್ದ ಪರಿಯನ್ನು ಕಂಡು ವಿದೇಶಿ ಯಾತ್ರಿಕನೊಬ್ಬ ಆನಂದಭರಿತನಾಗುತ್ತಾನೆ. ತನ್ನ ಟಿಪ್ಪಣಿ ಪುಸ್ತಕದಲ್ಲಿ ಕರ್ನಾಟಕದಲ್ಲಿ ಶಿಲ್ಪಕಲಾ ವೈಭವದ ಪ್ರಸ್ತುತಿಗಾಗಿ ಶಿಲ್ಪಿಗಳ ಕಾರ್ಯವೈಖರಿಯನ್ನು ಗಮನಿಸಿ ತನ್ನ ಪ್ರವಾಸಕಥನಕ್ಕಾಗಿ ಗುರುತು ಹಾಕಿಕೊಳ್ಳುತ್ತಿರುತ್ತಾನೆ, ಹಾಗೆ ಗುರುತು ಹಾಕಿಕೊಳ್ಳುತ್ತಿರುವ ಸಂದರ್ಭದಲ್ಲಿ ಮೂರು ಜನ ಪ್ರಧಾನಶಿಲ್ಪಿಗಳು ತಮ್ಮ ತಮ್ಮ ಸಹಾಯಕರ ನೆರವಿನಿಂದ ತಾವು ಒಪ್ಪಿಕೊಂಡ ಕೆತ್ತನೆಯ ಕೆಲಸದಲ್ಲಿ ತಲ್ಲಿನರಾಗಿರುತ್ತಾರೆ. ಅವರ ಕಾರ್ಯವೈಖರಿಯ ತಲ್ಲೀನತೆಗೆ ಮನ ಸೋತ ಯಾತ್ರಿಕ, ಅಲ್ಲಿ ಕೆತ್ತನೆಯ ಕೆಲಸದಲ್ಲಿ ನಿರತರಾಗಿದ್ದ ಮೂವರು ಪ್ರಧಾನ ಶಿಲ್ಪಿಗಳನ್ನು ಮಾತನಾಡಿಸುತ್ತಾನೆ. ಪ್ರಾಂಗಣದ ಕಂಬ ಕೆತ್ತುವ ಕೆಲಸದಲ್ಲಿ ನಿರತನಾಗಿದ್ದ ಶಿಲ್ಪಿಯೊಬ್ಬರನ್ನು ಆತ ಮಾತನಾಡಿಸುತ್ತಾನೆ ಏನು ಮಾಡುತ್ತಿದ್ದೀರಿ ಎಂದು ಯಾತ್ರಿಕ ಲೋಕಾಭಿರಾಮವಾಗಿ ಮಾತು ಆರಂಭಿಸಿ ಆತನನ್ನು ಮಾತಿಗೆಳೆಯುತ್ತಾನೆ. ಕೆಲಸದಲ್ಲಿ ಮಗ್ನನಾಗಿದ್ದ ಶಿಲ್ಪಿ ಕೂಡಲೇ ಹಿಂದಿರುಗಿ ನಿಮ್ಮ 'ಕಣ್ಣಿಗೆ ಕಾಣುತ್ತಿಲ್ಲವೆ ಕೆಲಸ ಕೊಟ್ಟಿದ್ದಾರೆ ಕೆಲಸ ಮಾಡುತ್ತಿದ್ದೇನೆ' ಎಂದು ಸ್ವಲ್ಪ ಒರಟಾಗಿಯೇ ಉತ್ತರಿಸುತ್ತಾನೆ. ಆ ಶಿಲ್ಪಿಯಿಂದ ಈ ಉತ್ತರವನ್ನು ನಿರೀಕ್ಷಿಸಿರದ ಆ ಯಾತ್ರಿಕ ಕ್ಷಣ ಮಾತ್ರವು ಅಲ್ಲಿ ನಿಲ್ಲದೆ ಮುಂದೆ ಸಾಗುತ್ತಾನೆ.

ಎರಡನೆಯ ಶಿಲ್ಪಿಯ ಬಳಿ ಬಂದ ಯಾತ್ರಿಕ ಕೆತ್ತನೆಯ ಕೆಲಸದಲ್ಲಿ ಮುಳುಗಿದ್ದ ಆ ಶಿಲ್ಪಿಯನ್ನು ಮತ್ತದೇ ಪ್ರಶ್ನೆ ಕೇಳುತ್ತಾನೆ. ಯಾತ್ರಿಕನ ಪ್ರಶ್ನೆಗೆ ಹಿಂತಿರುಗಿ ಉತ್ತರಿಸಿದ ಆ ಶಿಲ್ಪಿ 'ಪ್ರಭುಗಳು ಪಗಾರ ನಿಗದಿಗೊಳಿಸಿ ಕೆತ್ತನೆ ಕೆಲಸ ಮುಗಿಸಲು ಹೇಳಿದ್ದಾರೆ. ಹಾಗಾಗಿ, ಕೆತ್ತನೆಯ ಕೆಲಸ ಮಾಡುತ್ತಿದ್ದೇನೆ' ಎನ್ನುತ್ತಾನೆ ಮೊದಲನೆಯ ಶಿಲ್ಪಿಯ ಮಾತಿನಷ್ಟು ಈತ ಒರಟನಲ್ಲದಿದ್ದರೂ ಮಾತಿನಲ್ಲೊಂದು ಸೌಜನ್ಯವಿತ್ತು. ಆದರೆ ಪಗಾರಕ್ಕಾಗಿ ಕೆಲಸ, ಕೆಲಸಕ್ಕಾಗಿ ಪಗಾರ, ಅದಕ್ಕಾಗಿ ಈ ಕಾರ್ಯತತ್ಪರತೆ ಎಂಬ ವಸ್ತುನಿಷ್ಠ ಮಾತುಗಾರಿಕೆ ಅವನ ಅಭಿವ್ಯಕ್ತಿಯಲ್ಲಿ ವ್ಯಕ್ತವಾಗುತ್ತಿತ್ತು. ಯಾತ್ರಿಕ ತನ್ನ ಟಿಪ್ಪಣಿಯಲ್ಲಿ ಅದನ್ನು ಬರೆದುಕೊಂಡು ಯಾವ ಭಾವನೆಯೂ ಇಲ್ಲದೆ ಮುಂದುವರಿಯುತ್ತಾನೆ. ಮೂರನೆಯ ಶಿಲ್ಪಿಯ ಬಳಿಬಂದ ಯಾತ್ರಿಕ ಈತ ಇನ್ಯಾವ ಥರದಲ್ಲಿ ಉತ್ತರ ಕೊಡುತ್ತಾನೋ ಎಂಬ ಆತಂಕದಿಂದಲೇ ಮತ್ತದೇ ಪ್ರಶ್ನೆಯಿಂದ ಆ ಮೂರನೇ ಶಿಲ್ಪಿಯನ್ನು ಮಾತನಾಡಿಸುತ್ತಾನೆ. 'ಏನು ಮಾಡುತ್ತಿದ್ದೀರಿ'– ಎಂದು ಕೇಳುತ್ತಾನೆ. ಆದರೆ ಯಾತ್ರಿಕನಿಗೆ ಈ ಮೂರನೇ ಶಿಲ್ಪಿಯ ಬಳಿ ಆಶ್ಚರ್ಯ ಕಾದಿರುತ್ತದೆ. ಕಾರಣ ಮೊದಲ ಇಬ್ಬರೂ ಶಿಲ್ಪಿಗಳು ಉತ್ತರಿಸಿದಂತೆ ಆತ ಉತ್ತರಿಸುವುದಿರಲಿ, ಯಾತ್ರಿಕನ ಕಡೆಗೆ ತಿರುಗಿಯೂ ನೋಡುವುದಿಲ್ಲ ಪ್ರಾಯಶಃ ತಾನು ಕೂಗಿದ್ದು ಆ ಶಿಲ್ಪಿಗೆ ಕೇಳಿಲ್ಲವೆಂದು ಭಾವಿಸಿದ ಆ ಯಾತ್ರಿಕ ಮತ್ತೆ ಮತ್ತೆ ಜೋರಾಗಿ ಕೂಗಿ ಆ ಶಿಲ್ಪಿಯ ಕಿವಿ ಮುಟ್ಟುವಂತೆ ಕೂಗಿ ಕೂಗಿ ಮಾತನಾಡಿಸುವ ಪ್ರಯತ್ನ ಮಾಡುತ್ತಾನೆ. ಆದರೆ ಆ ಶಿಲ್ಪಿಗೆ ಆ ಯಾತ್ರಿಕನ ಮಾತಾಗಲಿ, ಅವನು ಕೇಳಿದ ಪ್ರಶ್ನೆಯಾಗಲಿ ಎರಡು ತಲೆಗೆ ಹೋಗುವುದಿಲ್ಲ, ಆತ ಮಾತ್ರ ನಿರುಮ್ಮಳವಾಗಿ ತನ್ನ ಕೆತ್ತನೆಯ ಕೆಲಸದಲ್ಲಿ ಮಗ್ನನಾಗಿರುತ್ತಾನೆ. ಇದನ್ನೇ ಹೇಳುವುದು ಕಲಾಕಾರಣದ ತಲ್ಲಿನತೆ Involvment ಅಂತ. ಆತನ ಯಾವ ಕೂಗಿಗು ತಲೆಯೆತ್ತದ ಆ ಶಿಲ್ಪಿಯನ್ನು ಮಾತನಾಡಿಸಲೇಬೇಕೆಂಬ ಹಠಕ್ಕೆ ಬಿದ್ದು, ಆ ಯಾತ್ರಿಕ ಆ ಶಿಲ್ಪಿಯ ಮೈ ಮುಟ್ಟಿ ಅಲುಗಾಡಿಸಿ ಆತನ ಕೆಲಸದ ತಲ್ಲೀನತೆಗೆ ಅಡ್ಡಿಪಡಿಸಿ ಮಾತನಾಡಿಸುತ್ತಾನೆ. ಆಗ ಯಾತ್ರಿಕನ ಕಡೆ ತಲೆಯೆತ್ತಿದ ಆ ಶಿಲ್ಪಿ ಏನು ಎಂಬಂತೆ ಕಣ್ಣಲ್ಲೇ ಸನ್ನೆ ಮಾಡಿ ತಲೆಯಾಡಿಸುತ್ತಾನೆ. ಆ ಯಾತ್ರಿಕ ಮತ್ತದೆ ಪ್ರಶ್ನೆ ಕೇಳುತ್ತಾನೆ. 'ಏನು ಮಾಡುತ್ತಿದ್ದೀರಿ' ಎಂದು. ಎಲೆ ಅಡಿಕೆ ತಾಂಬೂಲ ಜಗಿಯುತ್ತಾ ಹಣೆಯ ಮೇಲಿನ ಬೆವರನ್ನು ಒರೆಸಿಕೊಳ್ಳುತ್ತಾ ಆ ಯಾತ್ರಿಕನನ್ನು ಕುರಿತು ಮಾತನಾಡುವ ಆ ಶಿಲ್ಪಿ ಹೇಳುತ್ತಾನೆ 'ನಾನು ದೇವಾಲಯದ ಕೆಲಸ ಮಾಡುತ್ತಿದ್ದೇನೆ' ಎನ್ನುತ್ತಾನೆ.

ಹಾಗೆಂದರೆ! ಎನ್ನುವ ಯಾತ್ರಿಕನ ಮಾತಿಗೆ ಮಾತು ಮುಂದುವರಿಸುವ ಆ ಶಿಲ್ಪಿ ಹೇಳುತ್ತಾನೆ. 'ಇದು ಸೋಮನಾಥ ದೇವಾಲಯದ ಕೆತ್ತನೆಯ ಕೆಲಸ. ಪ್ರಾಂಗಣವನ್ನು ದಾಟಿ ಒಳಬರುವ ಜನಕ್ಕೆ ರಸ ರೋಮಾಂಚನವಾಗುವಂತೆ ಮಾಡಲು ಕೆಲಸ ಮಾಡಿಕೊಡುವ ಜವಾಬ್ದಾರಿಯನ್ನು ಹೊತ್ತಿದ್ದೇನೆ. ನಾನು ಇಲ್ಲಿ ಕೆತ್ತುತ್ತಿರುವ ಪ್ರತಿಯೊಂದು ಮೂರ್ತಿಶಿಲ್ಪವು ಜನರ ಮನಸ್ಸಿಗೆ ಸುಖ ಕೊಡಬೇಕು ಸಮಧಾನ ಕೊಡಬೇಕು. ಆ ಮೂರ್ತಿ ಜನ ಸಮೂಹದಲ್ಲಿ ರಸೋತ್ಪತ್ತಿಯನ್ನುಂಟು ಮಾಡಬೇಕು ಹಾಗಾಗಿ ಕೆಲಸದಲ್ಲಿ ಸ್ವಲ್ಪ ತಲ್ಲೀನನಾಗಿ ಬಿಟ್ಟೆ, ನಿಮ್ಮ ಮಾತು ಕೇಳಿಸಲ್ಲಿಲ್ಲ. ಕ್ಷಮೆ ಇರಲಿ' ಎಂದನಂತೆ. ಆತ ಮತ್ತಾರು ಅಲ್ಲ ಆ ಕಾಲದ ಪ್ರಸಿದ್ಧ ಶಿಲ್ಪಿ ಮಲ್ಲಿತಮ. ಯಾತ್ರಿಕ ಆತನ ನಯ, ವಿನಯ, ಕಾರ್ಯತತ್ಪರತೆಯಲ್ಲಿನ ತಲ್ಲೀನತೆಗೆ ಮನಸೋತು ಆತನ ಗುರಿ ದಿಕ್ಕು ದೆಸೆಗಳನ್ನು, ತನ್ನ ಟಿಪ್ಪಣಿ ಪುಸ್ತಕದಲ್ಲಿ ಗುರುತು ಹಾಕಿಕೊಳ್ಳುತ್ತಾನೆ. ಒಬ್ಬ ಕಲಾಕಾರ ತನ್ನ ನಂತರವು ಉಳಿಯುವ ಆತನ ಕಲಾಸೃಷ್ಟಿಯ ಬಗೆಗೆ ಜವಾಬ್ದಾರಿ ಹೊತ್ತಿದ್ದೇನೆ ಎನ್ನುವ ಆತನ ಮಾತು ಅದ್ಭುತ. ಅದು ಶಾಶ್ವತ **'ಸರ್ಕಾರದ ಕೆಲಸ ದೇವರ ಕೆಲಸ'** ಎಂದು ಬರೆದುಕೊಂಡ ಮೇಲೆ ನಾವು ಪಗಾರಕ್ಕಾಗಿ ಕೆಲಸ ಕೆಲಸಕ್ಕಾಗಿ ಪಗಾರ ಎಂದರೆ ಎರಡನೇ ಶಿಲ್ಪಿಯ ಗುಂಪಿಗೆ ಸೇರುತ್ತೇವೆ. ಇದು ಸರ್ಕಾರದ ಕೆಲಸಕ್ಕೆ ಮಾತ್ರ ಅನ್ವಯಿಸುವುದಿಲ್ಲ ತಲ್ಲೀನತೆಯಿಲ್ಲದೆ ಅಡಿಗೆ ಮಾಡುವ ಮಾಮೂಲಿ ಗೃಹಿಣಿಯಿಂದ ಹಿಡಿದು, ಬಾಹ್ಯಕಾಶದ ನಿರಂತರ ಸಂಶೋಧನೆಯಲ್ಲಿ ಮುಳುಗಿರುವ ವಿಜ್ಞಾನಿಯತನಕ ಎಲ್ಲರಿಗೂ ಇದು ಪಾಠವೇ! ಇನ್ನು ಕಣ್ಣು ಕಿವಿ ಮನಸ್ಸು ಇದಾವುದರ ತಲ್ಲೀನತೆಯೇ ಇಲ್ಲದೇ ಯಾಂತ್ರಿಕವಾಗಿ ಕೈ ಕಾಲುಗಳು ಮಾತ್ರ ದುಡಿಮೆಯಲ್ಲಿ ತೊಡಗಿಸಿಕೊಂಡರೆ ಮೊದಲ ಶಿಲ್ಪಿಯ ಗುಂಪಿಗೆ ಸೇರುತ್ತೇವೆ. ಮೈ ಮನಸ್ಸುಗಳು ಕೈ ಕಾಲುಗಳ ಸಂಯೋಜನೆ ತಪ್ಪಿದರೆ ಅಪಘಾತವೆ ಹೊರತು ಆಶಾವಾದಿತನ ಆಗುವುದಿಲ್ಲ. ಮನಸ್ಸು ನಿದ್ರೆಗೆ ಜಾರುವ ಮುಂಜಾನೆಯ ಹೊತ್ತಿನಲ್ಲಿ ಡ್ರೈವಿಂಗ್ ಸೀಟಿನಲ್ಲಿ ಕುಳಿತ ಡ್ರೈವರ್‌ನ ಹಾಗೆ! ಮೂರನೇ ಶಿಲ್ಪಿಯ ಜಾಗದಲ್ಲಿ ನಾವಿದ್ದರೆ ಅದು ದೇವರ ಕೆಲಸ, ಕಾಲಪ್ರವಾಹಕ್ಕೆ ಸಿಕ್ಕಿದರೂ ಅಗಸ್ತ್ಯನ ಜೀರ್ಣಾಗ್ನಿಗೆ ಸಿಕ್ಕಿದರೂ ಅಳಿಯದೆ ಉಳಿಯುವ ಸಮಾಜಮುಖಿ ವಿದ್ಯಮಾನ. ಅಲ್ಲಿ ನಾವು ಕಲಿತ ಕೆಲಸ, ಕಲಾಕಾರ ಸೃಷ್ಟಿಸಿದ ಆದಮ್ಯವಾದ ಕ್ರಿಯಾಶೀಲತೆ ವಸ್ತುವಿನ ರೂಪದಲ್ಲಿ, ಅಕ್ಷರದ ರೂಪದಲ್ಲಿ, ಅಭಿನಯದ ರೂಪದಲ್ಲಿ, ಅಂತರಂಗದಲ್ಲಿ ಬಹಿರಂಗದಲ್ಲಿ ಶಾಶ್ವತ. ಆಯಾ ಕ್ಷೇತ್ರಗಳ ಕಲಾಕಾರರು ಸೃಜಿಸಿದ ಅದ್ಭುತಗಳು ಆ ಕಾಲದ ವಿದ್ಯಮಾನಗಳಾಗಿ ಉಳಿಯುತ್ತವೆ. ಹಾಗೇಯೇ ಉಳಿದಿವೆ. ಇಂದಿಗೂ ಸರ್.ಎಂವಿ ಮತ್ತು ಕೃಷ್ಣರಾಜ ಒಡೆಯರು ಕಟ್ಟಿದ ಅಣೆಕಟ್ಟೆ ಚೌಡಯ್ಯನವರ ಪಿಟೀಲು, ಡಾ. ರಾಜಕುಮಾರರ ಅಭಿನಯ, ಚಾರ್ಲಿಚಾಪ್ಲಿನ್ನರ ಹಾಸ್ಯ ಹೀಗೆ ಪಟ್ಟಿ ಮಾಡುತ್ತಾ ಹೋದರೆ ನಮ್ಮ ತಲ್ಲಿನತೆಯ ವಿದ್ಯಮಾನದ ಪ್ರತೀಕಗಳು. ಹೀಗೆ ಪಟ್ಟಿ ಮಾಡುತ್ತಾ ಹೋದರೆ ಲೆಕ್ಕ ಅಸಂಖ್ಯಾತವಾಗಬಹುದು.

ಕೆಲಸ ಅದು ಚಿಕ್ಕದಿರಲಿ ದೊಡ್ಡದೇ ಇರಲಿ ಅನ್ನ ಆಹಾರ ಛತ್ರ, ಛಾಮರ ಅರವಟ್ಟಿಗೆಗಳು ಸಮಾಜಕ್ಕೆ ಹೊಟ್ಟೆ ತುಂಬಿಸಿವೆ. ಆ ಕೈಂಕರ್ಯ ಕೈಗೊಂಡವರು ಕೃತಾರ್ಥತೆಗೆ ಸಂದಂತೆ, ಕಲೆ ಸಾಹಿತ್ಯ, ಸಂಗೀತ, ಶಿಲ್ಪ ನೃತ್ಯ, ಚಿತ್ರ, ಅಭಿನಯ, ಜನಪದರು. ಹೀಗೆ ಒಟ್ಟಾರೆ ಎಲ್ಲ ಕಲಾಕಾರರು ಎಲ್ಲ ಕಾಲದಲ್ಲೂ ತಾವು ಕೂಡ ಈ ಸಮಾಜವನ್ನು ರಂಜಿಸಿ ಅಂತರಂಗಕ್ಕೊಂದು ಸುಖಕೊಟ್ಟು ಸಾಮಾಜಿಕ ವಿದ್ಯಮಾನ ಸೃಷ್ಟಿಸಿದ್ದಾರೆ. ಹಾಗೆಯೇ ಕಲಾಕಾರರಲ್ಲಿ ಆಗ ವಿದ್ಯೆಯು ಇತ್ತು ಮಾನವು ಇತ್ತು. ಹಾಗಾಗಿ ಅದು ಕಲಾಕಾರನ ಸಾಮಾಜಿಕ ವಿದ್ಯಮಾನವಾಗಿ ಪರಿವರ್ತನೆಯಾಯಿತು. ಅಂದರೆ ಕಲೆಯ ಚಟುವಟಿಕೆಗಳು ಕಲಾನುಕಾಲದಿಂದ ಉಳಿಯುತ್ತಲೆ ಬಂದಿತು. ಈ ದೃಷ್ಟಿಯಿಂದಲೇ ಇಂದಿಗೂ ಪಂಪನಿಂದ ಕುವೆಂಪುವರೆಗೆ ಎಂದು ನಾವು ಭಾವಿಸಲು, ಬರೆದುಕೊಳ್ಳಲು ಸಾಧ್ಯವಾಗಿದೆ. ಈ ಕಲಾ ವಿದ್ಯಮಾನವೇ ಯುಗಸಾಕ್ಷಿ ಹಾಗಾಗಿ ತಲ್ಲೀನತೆ (Involvment) ಯಿಂದ ಸೃಷ್ಟಿಸಿದ ಅದು ಯಾವುದೇ ಇರಲಿ ಅದಕ್ಕೆ ಆಯಸ್ಸು ಜಾಸ್ತಿ, ಅಜಂತ ಎಲ್ಲೋರಗಳು, ಭಾರತದ ಹಳೆಯ ವಿಶ್ವವಿದ್ಯಾನಿಲಯಗಳಾದ ತಕ್ಷಶಿಲ, ನಳಂದಂತಹ ವಿಶ್ವವಿದ್ಯಾಲಯಗಳು, ಭಾರತದ ಕಂಠಸ್ಥ ಗಾನಕೋಗಿಲೆಗಳು, ವಾದ್ಯಪರಿಕರಗಳು, ಕಲಾ ಸಾಮ್ರಾಟರು, ಅಕ್ಷರ ಪ್ರತಿಭೆಗಳು ಇಂದಿಗೂ ಭಾರತೀಯರ ಮನೋಮಂದಿರದಲ್ಲಿ ಅಚ್ಚಳಿಯದೆ ಉಳಿದಿರುವುದೇ ನಮ್ಮ ಸಾಂಸ್ಕೃತಿಕ ವಿದ್ಯಮಾನ ಇದುವೇ ಆಯುಷ್ಮಾನ್ ಭಾರತ ಏನಂತೀರಿ?

ಮೋದಿ, ಸಿದ್ದರಾಮಯ್ಯ ಹಣ ಹಾಕ್ತಾರೆಂದು ಅಂಚೆ ಕಚೇರಿಯಲ್ಲಿ 'ಡಿಜಿಟಲ್ ಅಕೌಂಟ್' ತೆರೆಯಲು ಮುಗಿಬಿದ್ದ ಜನರು!



ಕಲಬುರ್ಗಿ: ಮಹಾರಾಷ್ಟ್ರದಲ್ಲಿ ಬಿಜೆಪಿ ಪಕ್ಷ ಗೆದ್ದಿದೆ. ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಗೆದ್ದಿದೆ. ಪ್ರಧಾನಿ ನರೇಂದ್ರ ಮೋದಿ, ಸಿಎಂ ಸಿದ್ಧರಾಮಯ್ಯ ಇಬ್ಬರು ಸೇರಿ ಜನರಿಗೆ ಹಣ ಹಾಕ್ತಾರೆ. ಆದರೆ ಡಿಜಿಟಲ್ ಅಕೌಂಟ್ ಇದ್ರೆ ಮಾತ್ರವೇ ಎಂಬುದಾಗಿ ವದಂತಿಯೊಂದು ಹರಡಿತ್ತು.

ಈ ವದಂತಿಯಿಂದ ಕಲಬುರ್ಗಿಯ ಕೇಂದ್ರ ಅಂಚೆ ಕಚೇರಿಗೆ ಡಿಜಿಟಲ್ ಅಕೌಂಟ್ ತೆರೆಯಲು ಜನರು ಮುಗಿಬಿದ್ದಿದ್ದಾರೆ. ಕಲಬುರ್ಗಿಯ ಕೇಂದ್ರ ಅಂಚೆ ಕಚೇರಿಯಲ್ಲಿ ಜನರ ದಂಡೇ ನೆರೆದಿದೆ. ಕಿಲೋ ಮೀಟರ್‌ಗಟ್ಟಲೇ ಜನರು ಸಾಲುಗಟ್ಟಿ ನಿಂತಿದ್ದಾರೆ. ಕಾರಣ ಪೋಸ್ಟ್ ಆಫೀಸ್‌ನಲ್ಲಿ ಡಿಜಿಟಲ್ ಅಕೌಂಟ್ ತೆರೆಯೋದಕ್ಕೆ ಅಂತೆ. ಅದು ಮೋದಿ ದುಡ್ಡು ಹಾಕ್ತಾರೆ. ಸಿದ್ದರಾಮಯ್ಯ ದುಡ್ಡು ಹಾಕ್ತಾರೆ ಎಂಬ ವದಂತಿಯ ಕಾರಣದಿಂದ ಅಂತೆ.

ಈ ವದಂತಿಯ ಕಾರಣದಿಂದಾಗಿ ಕಲಬುರ್ಗಿಯ ಕೇಂದ್ರ ಅಂಚೆ ಕಚೇರಿಗೆ ನೂರಾರು ಜನರು ಆಗಮಿಸಿದ್ದಾರೆ. ಡಿಜಿಟಲ್ ಅಕೌಂಟ್ ಇದ್ದರೆ ಮಾತ್ರವೇ ಮೋದಿ, ಸಿದ್ದರಾಮಯ್ಯ ದುಡ್ಡು ಹಾಕುತ್ತಾರೆ ಎಂಬ ವದಂತಿಯನ್ನು ನಂಬಿ, ಡಿಜಿಟಲ್ ಖಾತೆ ತೆರೆಯೋದಕ್ಕೆ ನೂರಾರು ಜನರು ಸಾಲುಗಟ್ಟಿ ನಿಂತು ತೆರೆಯುತ್ತಿರುವುದು ಕಂಡು ಬಂದಿದೆ.

ಈ ಬಗ್ಗೆ ಯಾವುದೇ ಅಧಿಕಾರಿಗಳಿಂದ ಖಚಿತ ಮಾಹಿತಿ ಲಭ್ಯವಿಲ್ಲ. ಇದೊಂದು ವದಂತಿಯಾಗಿದೆ. ಈ ತರದ ಯಾವುದೇ ಸ್ಕೀಮ್ ಇಲ್ಲ. ಮೋದಿ, ಸಿದ್ಧರಾಮಯ್ಯ ದುಡ್ಡು ಹಾಕ್ತಿಲ್ಲ. ಇದೊಂದು ಸುಳ್ಳು ಸುದ್ದಿಯಾಗಿದೆ. ಯಾರೂ ಇದನ್ನು ನಂಬಬಾರದು ಅನ್ನೋದು ಅನೇಕರ ಮಾತಾಗಿದೆ.

ತುಮಕೂರಲ್ಲಿ ಭೀಕರ ರಸ್ತೆ ಅಪಘಾತ; ಮೂವರ ಸಾವು

ತುಮಕೂರು: ಖಾಸಗಿ ಬಸ್ಸೊಂದು ರಸ್ತೆ ಪಕ್ಕದಲ್ಲಿರುವ ಡಿವೈಡರ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾದ ಪರಿಣಾಮ ಮೂವರು ಪ್ರಯಾಣಿಕರು ಸ್ಥಳದಲ್ಲೇ ಸಾವನ್ನಪ್ಪಿ, 20 ಮಂದಿ ಗಾಯಗೊಂಡಿರುವ ಘಟನೆ ತುಮಕೂರು ಜಿಲ್ಲೆಯ ಶಿರಾ ತಾಲೂಕಿನ ಚಿಕ್ಕನಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಸೋಮವಾರ ನಡೆದಿದೆ. ಇಂದು ಬೆಳಗಿನ ಜಾವ ಗೋವಾದಿಂದ' ಬೆಂಗಳೂರು ಕಡೆಗೆ ಬರುತ್ತಿದ್ದ ಖಾಸಗಿ ಬಸ್ ಚಾಲಕನ ನಿಯಂತ್ರಣ ತಪ್ಪಿ ರಸ್ತೆಯ ಡಿವೈಡರ್‌ಗೆ ಡಿಕ್ಕಿ ಹೊಡೆದಿದೆ. ನಂತರ ಬಸ್ ಪಲ್ಟಿಯಾಗಿದೆ. ಪರಿಣಾಮ ಬಸ್‌ನಲ್ಲಿದ್ದ ಮೂವರು ಮಹಿಳಾ ಪ್ರಯಾಣಿಕರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.



ಮೃತ ಮಹಿಳೆಯರನ್ನು ಸಿಂಬಾಳಿ ಸಿಂಗ್, ಊರ್ವಿ ಹಾಗೂ ಪ್ರಿಯಾಂಕ ಎಂದು ಗುರುತಿಸಲಾಗಿದೆ. ಘಟನೆಯಲ್ಲಿ 20 ಜನ ಪ್ರಯಾಣಿಕರಿಗೆ ಗಾಯವಾಗಿದೆ. ಗಾಯಾಳುಗಳಿಗೆ ಸ್ಥಳೀಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಇನ್ನು ಕೆಲವರನ್ನು ಹೆಚ್ಚಿನ ಚಿಕಿತ್ಸೆಗಾಗಿ ತುಮಕೂರಿನ ಜಿಲ್ಲಾಸ್ಪತ್ರೆ ಹಾಗೂ ಸಿದ್ಧಗಂಗಾ ಖಾಸಗಿ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಬಸ್‌ನಲ್ಲಿ ಒಟ್ಟು 29 ಮಂದಿ ಪ್ರಯಾಣಿಸುತ್ತಿದ್ದರು. ಕಳ್ಳಂಬೆಳ್ಳ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಕಳಚಿ ಬಿದ್ದ ಪಾಲಿಕೆ ಕೌನ್ಸಿಲ್ ಸಭಾಂಗಣದ ಅಲಂಕಾರಿಕ ಮೇಲ್ಛಾವಣಿ

ಮೈಸೂರು, ಡಿ.2(ಆರ್‌ಕೆ)– ಮೈಸೂರು ಮಹಾನಗರಪಾಲಿಕೆ ಕಚೇರಿ ಪಾರಂಪರಿಕ ಕಟ್ಟಡದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕೌನ್ಸಿಲ್ ಸಭಾಂಗಣದ ಪ್ಲಾಸ್ಟರ್ ಆಫ್ ಪ್ಯಾರೀಸ್ ಅಲಂಕಾರಿಕ ಮೇಲ್ಛಾವಣಿ (ಫಾಲ್ಸ್ ಸೀಲಿಂಗ್) ಕಳಚಿ ಬಿದ್ದಿದೆ.

ಭಾನುವಾರ ರಾತ್ರಿಯಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಪಾಲಿಕೆ ಕಚೇರಿ ಕಟ್ಟಡದ ಮೊದಲ ಮಹಡಿಯ ತಾರಸಿಯೇ ಸೋರುತ್ತಿದ್ದು, ಅದೇ ವೇಳೆ ನಿನ್ನೆ (ಡಿ.1) ರಾತ್ರಿ ಹೊಸ ಕೌನ್ಸಿಲ್ ಸಭಾಂಗಣದ ಒಂದು ಭಾಗದಲ್ಲಿ ಅಳವಡಿಸಿರುವ ಪ್ಲಾಸ್ಟರ್ ಆಫ್ ಪ್ಯಾರೀಸ್ ಅಲಂಕಾರಿಕ ಮೇಲ್ಛಾವಣಿ ಕಳಚಿ ಬಿದ್ದಿದ್ದು, ಅದರಿಂದ ಇಡೀ ಸಭಾಂಗಣದಲ್ಲಿರುವ ಬೆಲೆ ಬಾಳುವ ಪೀಠೋಪಕರಣಗಳು ಹಾಗೂ ಅಲ್ಲಿರಿಸಲಾಗಿದ್ದ ಕೆಲ ಕಡತಗಳ ಬಂಡಲ್‌ಗಳು ಹಾಳಾಗಿವೆ.


ಕೆಲ ವರ್ಷಗಳ ಹಿಂದೆಯಷ್ಟೇ ಕೌನ್ಸಿಲ್ ಸಭೆ ನಡೆಸಲು ಅನುಕೂಲವಾಗುವಂತೆ ಮೂಲಸೌಕರ್ಯಗಳೊಂದಿಗೆ ಶ್ರೀ ಕೃಷ್ಣರಾಜ ಒಡೆಯರ್ ಸಭಾಂಗಣವನ್ನು ನಿರ್ಮಿಸಲಾಗಿತ್ತು. ಆ ವೇಳೆ ಇಡೀ ಸಭಾಂಗಣದ ಮೇಲ್ಭಾಗಕ್ಕೆ ಶೀಟ್ ಅಳವಡಿಸಿದ್ದರಿಂದ ಅದರ ಕೆಳಗೆ ಪ್ಲಾಸ್ಟರ್ ಆಫ್ ಪ್ಯಾರೀಸ್‌ನಿಂದ ಅಲಂಕಾರಿಕ ಮೇಲ್ಛಾವಣಿ ಅಳವಡಿಸಲಾಗಿತ್ತು.

ಇದೀಗ ಚಾವಣಿಗೆ ಅಳವಡಿಸಿರುವ ಶೀಟ್‌ನಿಂದ ಮಳೆ ನೀರು ಹರಿದು ಶಿಥಿಲಗೊಂಡ ಮೇಲ್ಛಾವಣಿ ಭಾನುವಾರ ರಾತ್ರಿ ಕುಸಿದು ಬಿದ್ದಿದೆ.

ಅದೃಷ್ಟವಶಾತ್ ಆ ವೇಳೆ ಯಾರೂ ಅಲ್ಲಿ ಇರಲಿಲ್ಲವಾದ್ದರಿಂದ ಯಾವುದೇ ಅಪಾಯ ಸಂಭವಿಸಿಲ್ಲ. ಆದರೆ, ಅಲ್ಲಿದ್ದ ಕುರ್ಚಿ, ಮೇಜುಗಳು, ಫ್ಯಾನ್‌ಗಳು ಜಖಂಗೊಂಡಿವೆ. ಇಂದು ಬೆಳಗ್ಗೆ ಸಿಬ್ಬಂದಿ ಕಚೇರಿಗೆ ಬಂದಾಗ ಕೌನ್ಸಿಲ್ ಸಭಾಂಗಣದ ಒಂದು ಭಾಗದಲ್ಲಿ ಅಲಂಕಾರಿಕ ಮೇಲ್ಛಾವಣಿ ಕಳಚಿ ಬಿದ್ದಿರುವುದು ಕಂಡುಬಂತು. ತಕ್ಷಣ ಅಲ್ಲಿ ಬಿದ್ದಿದ್ದ ಅವಶೇಷಗಳನ್ನು ತೆರವುಗೊಳಿಸುವ ಹಾಗೂ ಚಾವಣಿಯ ಜಂಕ್‌ಶೀಟ್‌ಗಳನ್ನು ರಿಪೇರಿ ಮಾಡುವ ಕೆಲಸಕ್ಕೆ ಪಾಲಿಕೆ ಸಿಬ್ಬಂದಿ ಮುಂದಾಗಿದ್ದರು. ನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ನಿರ್ದೇಶನದಂತೆ ರಿಪೇರಿ ಕಾರ್ಯವನ್ನು ತೀವ್ರಗೊಳಿಸಿದ್ದು, ವಾರದೊಳಗೆ ಕಾಮಗಾರಿ ಪೂರ್ಣಗೊಳ್ಳುವ ನಿರೀಕ್ಷೆಯಿದೆ.




ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಮೈಸೂರು ಮಹಾನಗರಪಾಲಿಕೆ ಪ್ರಧಾನ ಕಚೇರಿ ಕಟ್ಟಡದ ಮಾಳಿಗೆ ಸೋರುತ್ತಿದೆ.



ಮೈಸೂರು ಮಹಾನಗರಪಾಲಿಕೆ ಕಚೇರಿಯ ಕೌನ್ಸಿಲ್ ಸಭಾಂಗಣದ ಪ್ಲಾಸ್ಟರ್ ಆಫ್ ಪ್ಯಾರೀಸ್ ಅಲಂಕಾರಿಕ ಮೇಲ್ಛಾವಣಿ (ಫಾಲ್ಸ್ ಸೀಲಿಂಗ್) ಕಳಚಿ ಬಿದ್ದಿದೆ.

ಮಳೆಯಿಂದಾಗಿ ಚಾವಣಿ ದುರಸ್ತಿ ಕಾಮಗಾರಿ ಆರಂಭಿಸಿರಲಿಲ್ಲ

ಮೈಸೂರು, ಡಿ.2(ಆರ್‌ಕೆ)– ಶಿಥಿಲಗೊಂಡಿರುವ ಮೈಸೂರು ಮಹಾನಗರಪಾಲಿಕೆ ಪ್ರಧಾನ ಕಚೇರಿಯ ಪಾರಂಪರಿಕ ಕಟ್ಟಡದ ಚಾವಣಿಯನ್ನು, ಕಾರ್ಯಾದೇಶವಿದ್ದರೂ ಮಳೆ ಕಾರಣಕ್ಕಾಗಿ ಇನ್ನೂ ಆರಂಭಿಸಿಲ್ಲ ಎಂದು ನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ತಿಳಿಸಿದ್ದಾರೆ.



ಕಳೆದ 3 ತಿಂಗಳ ಹಿಂದಷ್ಟೇ ಪಾರಂಪರಿಕ ಇಲಾಖೆ ಅಧಿಕಾರಿಗಳು, ತಜ್ಞರು, ಇಂಜಿನಿಯರ್‌ಗಳೊಂದಿಗೆ ಕಚೇರಿ ಕಟ್ಟಡದ ಮೇಲ್ಚಾವಣಿಯನ್ನು ಪರಿಶೀಲಿಸಿ, ಶಿಥಿಲಗೊಂಡಿದ್ದ ತಾರಸಿಯನ್ನು ದುರಸ್ತಿ ಮಾಡಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಪೈಪ್ ಅಳವಡಿಸುವ ಬಗ್ಗೆ ಡಿಪಿಆರ್ ಸಿದ್ಧಪಡಿಸಿ ಪಾರಂಪರಿಕ ಇಲಾಖೆಯಿಂದ ಅನುಮತಿ ಸಹ ಪಡೆದು ಕಾಮಗಾರಿಗೆ ಅಂದಾಜು ತಯಾರಿಸಿ ಟೆಂಡರ್ ಕರೆಯಲಾಗಿತ್ತು. ಯಶಸ್ವಿ ಬಿಡ್ಡುದಾರರಾದ ಅಶ್ವಥ್ ಎಂಬುವರಿಗೆ ಕಾಮಗಾರಿ ಕೈಗೊಳ್ಳಲು ಕಾರ್ಯಾದೇಶವನ್ನೂ ನೀಡಲಾಗಿದೆ. ಅವರು ಅದಕ್ಕೆ ಬೇಕಾದ ಸಲಕರಣೆಗಳನ್ನೂ ಕಚೇರಿ ಆವರಣದಲ್ಲಿ ಈಗಾಗಲೇ ಡಂಪ್ ಮಾಡಿದ್ದಾರೆ. ಆದರೆ, ಮಳೆ ನಿಂತ ಮೇಲೆ ಕೆಲಸ ಆರಂಭಿಸುತ್ತೇನೆ ಎಂದು ಗುತ್ತಿಗೆದಾರರು ತಿಳಿಸಿದ್ದಾರೆ. ಮೋಡ ಮುಸುಕಿದಾಗ ಇಲ್ಲವೇ ಮಳೆ ಸುರಿಯುತ್ತಿದ್ದಾಗ ರೂಫಿಂಗ್ ಕೆಲಸ ಮಾಡಲು ಅವರು ಸಿದ್ಧರಿಲ್ಲ ಎಂದರು.


ವಿಶೇಷವಾಗಿ ಇದು ಪಾರಂಪರಿಕ ಕಟ್ಟಡವಾಗಿರುವುದರಿಂದ ಪಾರಂಪರಿಕ ಇಲಾಖೆಯವರ ಸಲಹೆಯಂತೆ ಸೂಕ್ತ ಸಲಕರಣೆಗಳನ್ನು ಬಳಸಿ, ಕೌಶಲವುಳ್ಳ ಕಾರ್ಮಿಕರಿಂದ ಕಾಮಗಾರಿ ನಡೆಸಬೇಕು. ಇನ್ನೇನು ಕೆಲಸ ಆರಂಭ ಮಾಡಬೇಕು ಎನ್ನುವಷ್ಟರಲ್ಲಿ ಚಂಡಮಾರುತದ ಫಲವಾಗಿ ಮಳೆ ಆರಂಭವಾಗಿದೆ. ಮಳೆ ನಿಂತ ಮೇಲೆ ಈ ಕಾಮಗಾರಿಯನ್ನು ಕೈಗೊಂಡು ಆದಷ್ಟು ಬೇಗ ಪೂರ್ಣಗೊಳಿಸಿ, ಪಾರಂಪರಿಕ ಕಟ್ಟಡದ ರಕ್ಷಣೆ ಮಾಡುತ್ತೇವೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಕೌನ್ಸಿಲ್ ಸಭಾಂಗಣದ ಅಲಂಕಾರಿಕ ಮೇಲ್ಛಾವಣಿ ಕಳಚಿ ಬಿದ್ದಿರುವುದನ್ನೂ ಸೂಕ್ತ ರೀತಿ ಮತ್ತೆ ಅಳವಡಿಸುತ್ತೇವೆ ಎಂದು ಪಾಲಿಕೆ ಆಯುಕ್ತರು ತಿಳಿಸಿದರು.

ಸೋರುತ್ತಿದೆ ಮೈಸೂರು ಪಾಲಿಕೆ ಪಾರಂಪರಿಕ ಕಟ್ಟಡದ ಮಾಳಿಗೆ

ಮೈಸೂರು, ಡಿ.2(ಆರ್‌ಕೆ)– ಭಾನುವಾರ ರಾತ್ರಿಯಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಮಹಾನಗರಪಾಲಿಕೆ ಕಚೇರಿ ಪಾರಂಪರಿಕ ಕಟ್ಟಡದ ಮಾಳಿಗೆ ಸೋರುತ್ತಿದೆ.

ಪರಿಣಾಮ ಕಟ್ಟಡದ ಮೊದಲ ಮಹಡಿಯಲ್ಲಿರುವ ಆಯುಕ್ತರ ಕಚೇರಿ ಹಳೇ ಕೌನ್ಸಿಲ್ ಸಭಾಂಗಣ, ಆಡಳಿತಾಧಿಕಾರಿಗಳ ಕಚೇರಿ, ಆಪ್ತ ಸಹಾಯಕರ ಕಚೇರಿ, ಉಪ ಆಯುಕ್ತರ ಕಚೇರಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಕಚೇರಿ, ಕಾರಿಡಾರ್, ಪೋರ್ಟಿಕೋ, ನಗರ ಯೋಜನಾ ಶಾಖೆ ಸೇರಿದಂತೆ ಮೊದಲ ಮಹಡಿಯ ಎಲ್ಲಾ ಕಚೇರಿಗಳ ತಾರಸಿಯಿಂದ ಮಳೆ ನೀರು ಸೋರುತ್ತಿದೆ. ಇದರಿಂದ ಅಧಿಕಾರಿಗಳು, ಸಿಬ್ಬಂದಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲ. ಆಯುಕ್ತರು, ಉಪ ಆಯುಕ್ತರ ಕಚೇರಿ ಎದುರಿನ ಕಾರಿಡಾರ್, ಹಳೇ ಕೌನ್ಸಿಲ್ ಸಭಾಂಗಣದೆದುರು ಮಳೆ ನೀರು ಸುರಿಯುವೆಡೆ ಪ್ಲಾಸ್ಟಿಕ್ ಬಕೆಟ್‌ಗಳನ್ನು ಇರಿಸಲಾಗಿದೆ. ಮೂರು ದಿನಗಳ ಕಾಲ ನಿರಂತರ ಮಳೆ ಸುರಿಯಲಿದೆ ಎಂದು ಹವಾಮಾನ ಇಲಾಖೆ ಈಗಾಗಲೇ ಮುನ್ಸೂಚನೆ ನೀಡಿದೆ. ಒಂದೇ ರಾತ್ರಿ ಸುರಿದ ಮಳೆಗೆ ಪಾಲಿಕೆ ಕಚೇರಿ ಕಟ್ಟಡದ ತಾರಸಿ ಸೋರುತ್ತಿದೆ. ಡಿಸೆಂಬರ್ 4ರವರೆಗೂ ನಿರಂತರವಾಗಿ ಮಳೆ ಸುರಿದಲ್ಲಿ ಇಡೀ ಕಟ್ಟಡವೇ ಶಿಥಿಲಗೊಳ್ಳುವ ಸಾಧ್ಯತೆಯೂ ಇದೆ. ತಾರಸಿಯಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ಮಾಡಿರುವ ಪೈಪ್‌ಗಳಲ್ಲಿ ಕಸ ಕಡ್ಡಿ ತುಂಬಿಕೊಂಡ ಕಾರಣ ನೀರು ನಿಂತು ಶಿಥಿಲಗೊಂಡ ತಾರಸಿಯಿಂದ ಸೋರುತ್ತಿದೆ. ಇದರಿಂದಾಗಿ ಇಂದು ಪಾಲಿಕೆ ಕಚೇರಿಯಲ್ಲಿ ಕೆಲಸ–ಕಾರ್ಯಗಳಿಗೆ ತೊಂದರೆ ಉಂಟಾಗಿದೆ. ಆದರೆ ಕಚೇರಿ ನೆಲ ಮಹಡಿಯ ಶಾಖೆಗಳಿಗೆ ಯಾವುದೇ ಅಡ್ಡಿ ಇಲ್ಲ.

ಹಿರಿಯ ವಕೀಲ ಎಚ್.ಎನ್.ವೆಂಕಟೇಶ್ ಅವರಿಗೆ ಅಭಿನಂದನೆ....



ಲಾ ಗೈಡ್–2025ರ ಕ್ಯಾಲೆಂಡರ್ ಹಾಗೂ ಡೈರಿ ಬಿಡುಗಡೆ ಕಾರ್ಯಕ್ರಮದಲ್ಲಿ ಲಾ ಗೈಡ್ ಮಾಸ ಪತ್ರಿಕೆ ಸಂಪಾದಕರೂ ಆದ ಹಿರಿಯ ವಕೀಲ ಎಚ್.ಎನ್.ವೆಂಕಟೇಶ್ ಅವರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಈ ವೇಳೆ ಮಾಜಿ ಸಚಿವರೂ ಆದ ಹಾಲಿ ಶಾಸಕ ಎ.ಮಂಜು, ಮಾಜಿ ಎಂಎಲ್‌ಸಿ ಮರಿತಿಬ್ಬೇಗೌಡ, ಹಿರಿಯ ವಕೀಲ ಹರೀಶ್‌ಕುಮಾರ್ ಹೆಗಡೆ, ಮಾಜಿ ಕಾರ್ಪೋರೇಟರ್ ಲೋಕೇಶ್ ಪಿಯಾ, ಶಂಭು, ಮನುಶೈವಾ, ವೆಂಕಟೇಶ್, ಜಯಶಂಕರ, ಮಂಜು ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯದ ಆರ್ಥಿಕತೆ ವೇಗ ಪಡೆದುಕೊಂಡಿದೆ

●ಮುಖ್ಯಮಂತ್ರಿ ಸಿದ್ದರಾಮಯ್ಯ ಸಮರ್ಥನೆ
●ಐದು ಗ್ಯಾರಂಟಿ ನಡುವೆಯೂ ಆರ್ಥಿಕ ಪ್ರಗತಿಗೆ ಹರ್ಷ

ಬೆಂಗಳೂರು, ಡಿ.2(ಕೆಎಂಶಿ)–ನಮ್ಮ ಸರ್ಕಾರದ ಐದಕ್ಕೆ ಐದೂ ಗ್ಯಾರಂಟಿಗಳು ಮತ್ತು ಅಭಿವೃದ್ಧಿ ಯೋಜನೆಗಳು ಎಲ್ಲಾ ಜಾತಿ, ಧರ್ಮದವರಿಗೂ ಸೇರಿದ್ದು, ಸಕಲರ ಅಭಿವೃದ್ಧಿ ರೂಪಿಸಿದ್ದರಿಂದಲೇ ರಾಜ್ಯದ ಆರ್ಥಿಕತೆ ವೇಗ ಪಡೆದುಕೊಂಡಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಸಮರ್ಥಿಸಿಕೊಂಡಿದ್ದಾರೆ.

ಸರ್ಕಾರದ ವಿವಿಧ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಡೀ ದೇಶದಲ್ಲಿ ರಾಜ್ಯದ ಜಿಡಿಪಿ ನಂಬರ್ ಒನ್ ಆಗಿದೆ. ದೇಶದ ಜಿಡಿಪಿ ಇನ್ನೂ 8ರಲ್ಲಿದೆ. ರಾಜ್ಯದ ಜಿಡಿಪಿ 10ಕ್ಕೆ ತಲುಪಿದೆ, ವಿದೇಶಿ ಬಂಡವಾಳ ಆಕರ್ಷಣೆ ಮತ್ತು ಕೇಂದ್ರಕ್ಕೆ ತೆರಿಗೆ ಪಾವತಿಸುವುದರಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ.



ಇದು ಸಾಧ್ಯವಾಗಿದ್ದು ರಾಜ್ಯದ ಎಲ್ಲಾ ಜಾತಿ ಮತ್ತು ಧರ್ಮದವರ ಒಟ್ಟಾರೆ ಕೊಡುಗೆಯಿಂದ ಎಂದು ತಿಳಿಸಿದರು.

ರಾಜ್ಯದ ಪ್ರತಿಯೊಬ್ಬರಿಗೂ ಆರ್ಥಿಕ, ಸಾಮಾಜಿಕ ಶಕ್ತಿ ತುಂಬುವ ಕಾರ್ಯಕ್ರಮಗಳನ್ನು ನಾವು ಕೊಡುತ್ತಲೇ ಹೋಗುತ್ತೇವೆ. ಜೊತೆಗೆ ಹಿಂದುಳಿದವರ, ದುರ್ಬಲರ ಏಳಿಗೆಗೆ ವಿಶೇಷ ಯೋಜನೆಗಳನ್ನೂ ರೂಪಿಸುತ್ತೇವೆ, ಎಸ್‌ಸಿಪಿ/ಟಿಎಸ್‌ಪಿ ಕಾಯ್ದೆ ಜಾರಿ ಮಾಡಿದ್ದು ನಮ್ಮ ಸರ್ಕಾರ ಮಾತ್ರ. ನಮ್ಮ ಸರ್ಕಾರ ಮಹಿಳೆಯರ ಪರ, ಎಲ್ಲಾ ಜಾತಿ, ಬಡವರ, ಹಿಂದುಳಿದವರ, ದಲಿತರ ಪರ ಎಂದರು. ಹಳ್ಳಿ, ತಾಲೂಕು, ಜಿಲ್ಲೆಗಳ ಅಭಿವೃದ್ಧಿಯಿಂದ ಮಾತ್ರ ರಾಜ್ಯದ, ದೇಶದ ಅಭಿವೃದ್ಧಿ ಸಾಧ್ಯ, ರಾಜ್ಯಗಳ ಅಭಿವೃದ್ಧಿಯಿಂದ ಮಾತ್ರ ದೇಶದ ಜಿಡಿಪಿ ಪ್ರಗತಿ ಕಾಣಲು ಸಾಧ್ಯ, ಎಲ್ಲಾ ಧರ್ಮ, ಜಾತಿ ಜನರು ಆರ್ಥಿಕವಾಗಿ ಪ್ರಗತಿ ಹೊಂದಿದರೆ ಮಾತ್ರ ದೇಶದ ಜಿಡಿಪಿ ಬೆಳವಣಿಗೆಯಾಗುತ್ತದೆ. ನಮ್ಮ ಸರ್ಕಾರ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವಾಗ ಎಲ್ಲಾ ಜಾತಿ, ಧರ್ಮ, ವರ್ಗದವರನ್ನೂ ಒಳಗೊಂಡಿರುತ್ತದೆ.

ಜಾನಪದ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನ

ಮೈಸೂರು,ಡಿ.2– 2024–25ನೇ ಸಾಲಿನಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಉಪಯೋಜನೆ ಅಡಿಯಲ್ಲಿ ಪರಿಶಿಷ್ಟ ಜಾತಿಯ ಯುವಜನರಿಂದ ಕಲಾಪ್ರಕಾರಗಳ ಜಾನಪದ ತರಬೇತಿ ಶಿಬಿರಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ತರಬೇತಿ ಶಿಬಿರವು ಡಿ.10 ರಿಂದ 17 ರವರೆಗೆ 8 ದಿನಗಳವರೆಗೆ ನಡೆಯಲಿದೆ.

ಅಭ್ಯರ್ಥಿಯು ಕರ್ನಾಟಕ ರಾಜ್ಯದವರಾಗಿದ್ದು, 16 ರಿಂದ 40 ವರ್ಷದೊಳಗಿನ ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು ಹಾಗೂ ಕನಿಷ್ಠ 10ನೇ ತರಗತಿ ಪಾಸ್, ಫೇಲ್ ವಿದ್ಯಾರ್ಹತೆ ಹೊಂದಿದ್ದು, ಅರ್ಜಿಯೊಂದಿಗೆ ಕಡ್ಡಾಯವಾಗಿ ಆರ್.ಡಿ. ಸಂಖ್ಯೆಯಿರುವ ಜಾತಿ ಪ್ರಮಾಣ ಪತ್ರ, ಅರ್ಜಿದಾರರ ಹೆಸರು ಮತ್ತು ಭಾವಚಿತ್ರವುಳ್ಳ ಆಧಾರದ ಪತ್ರವನ್ನು ಲಗತ್ತಿಸಬೇಕು. ತರಬೇತಿ ಶಿಬಿರದಲ್ಲಿ ಭಾಗವಹಿಸುವ ಯುವಕ, ಯುವತಿಯರಿಗೆ ಲಘು ಉಪಾಹಾರ ಒದಗಿಸಲಾಗುವುದು. ಹೊರಜಿಲ್ಲೆಗಳಿಂದ ಆಗಮಿಸುವ ಶಿಬಿರಾರ್ಥಿಗಳಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು.

ಅರ್ಜಿ ನಮೂನೆ ಮತ್ತು ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯ ನೋಟೀಸ್ ಬೋರ್ಡ್ ಅಥವಾ ದೂ.ಸಂ: 0821–2564179 ಅನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಗೀತ ಸಾಮ್ರಾಜ್ಯದಲ್ಲಿ ವಚನ ಸಂಗೀತ, ಸಾಹಿತ್ಯ ಸೇರಿಸಿದ ವಿಶಿಷ್ಟ ಕಲಾ ಪ್ರಾಕಾರ



ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕದ ವತಿಯಿಂದ ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಭವನದಲ್ಲಿ ಏರ್ಪಡಿಸಿದ್ದ ವಚನ ಗಾಯನ ಸ್ಪರ್ಧೆಯನ್ನು ಅಂತರರಾಷ್ಟ್ರೀಯ ವಯೋಲಿನ್ ವಾದಕ ಎಂ.ಮಂಜುನಾಥ್ ಉದ್ಘಾಟಿಸಿದರು.

ಮೈಸೂರು, ಡಿ.2–ಭಾರತದ ಸಂಗೀತ ಸಾಮ್ರಾಜ್ಯದಲ್ಲಿ ನೂರಾರು ಪ್ರಾಕಾರಗಳಿದ್ದಾಗಲೂ ವಚನ ಸಂಗೀತ ಮತ್ತು ಸಾಹಿತ್ಯ ಸೇರಿಸಿದ ವಿಶಿಷ್ಟ ಕಲಾಪ್ರಾಕಾರವಾಗಿದೆ. ಶರಣರು ಸುಂದರ ಮತ್ತು ಸರಳ ಭಾಷೆಯಲ್ಲಿ ಮನೋಜ್ಞವಾಗಿ ಧಾರ್ಮಿಕ ಮತ್ತು ಲೌಕಿಕ ವಿಷಯಗಳನ್ನು ವಿಶೇಷ ರೀತಿಯಲ್ಲಿ ವಚನ ರಚಿಸಿರುತ್ತಾರೆ ಎಂದು ಅಂತರರಾಷ್ಟ್ರೀಯ ವಯೋಲಿನ್ ವಾದಕ ಎಂ.ಮಂಜುನಾಥ್ ಹೇಳಿದರು.

ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕದ ವತಿಯಿಂದ ಜೆಎಸ್‌ಎಸ್ ಆಸ್ಪತ್ರೆಯ ರಾಜೇಂದ್ರ ಭವನದಲ್ಲಿ ಏರ್ಪಡಿಸಿದ್ದ ವಚನ ಗಾಯನ ಸ್ಪರ್ಧೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಚನಗಳನ್ನು ಓದಿದಾಗ ಮನಸ್ಸಿಗೆ ಎಷ್ಟು ನೆಮ್ಮದಿ ದೊರೆಯುತ್ತದೆ. ಅದಕ್ಕಿಂತ ಮೀರಿ ವಚನ ಗಾಯನವನ್ನು ಕೇಳಿದಾಗ ಉಂಟಾಗುತ್ತದೆ. ಹೆಚ್ಚು ಜನ ಗಾಯನ ಸ್ಪರ್ಧೆಯಲ್ಲಿ ತಿಳಿವಯಸ್ಸಿನಲ್ಲೂ ಎಷ್ಟು ಉತ್ಸಾಹದಿಂದ ಭಾಗವಹಿಸಿರುವು ದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಇಂಥ ಕಲಾಪ್ರಾಕಾರಗಳ ಸ್ಪರ್ಧೆಯಲ್ಲಿ ಭಾಗವಹಿಸುವುದು ಸಂಸ್ಕಾರದಿಂದ ಸಾಧ್ಯ ಎಂದರು. ಕಾರ್ಯಕ್ರಮದಲ್ಲಿ ಮೈಸೂರು ಟಾರ್ಪಾಲಿನ್ಸ್ ಮಾಲೀಕ ವೈ ವೀರಭದ್ರ, ದತ್ತಿದಾನಿಗಳಾದ ನಂಜುಂಡಸ್ವಾಮಿ, ಶಾಂತಕುಮಾರ್, ತೀರ್ಪುಗಾರರಾಗಿ ಶ್ರೀಮತಿ ಭುವನೇಶ್ವರಿ ಸುಧಾಕೃಷ್ಣ, ನಿತಿನ್ ರಾಜಾರಾಮ್ ಶಾಸ್ತ್ರಿ ಭಾಗವಹಿಸಿದ್ದರು.

ಹಿರಿಯರ ವಿಭಾಗದಲ್ಲಿ ಭಗವಾನ್–ಪ್ರಥಮ, ಶಶಿಕಲಾ–ದ್ವಿತೀಯ, ಸೌಮ್ಯ ಸಿ–ತೃತೀಯ, ಸಮಾಧಾನಕರ ಬಹುಮಾನವನ್ನು ಸುಗುಣ ಹಾಗೂ ಶ್ರೀಮತಿ ಲಾವಣ್ಯ ಪಡೆದುಕೊಂಡರು. ಹಿರಿಯರ ವಿಭಾಗದಲ್ಲಿ ವೇಣುಗೋಪಾಲ್–ಪ್ರಥಮ, ಆಜ್ಞಾ ಪ್ರಣವ್–ದ್ವಿತೀಯ, ಅನಘ–ತೃತೀಯ ಬಹುಮಾನ ಪಡೆದುಕೊಂಡರು. ಪ್ರೊ.ಮಲ್ಲೇಶ್, ಮಂಜುಳಾ ಇದ್ದರು.

ಮೈಸೂರು ಜಿಲ್ಲಾ ದೇಹದಾರ್ಢ್ಯ ಮತ್ತು ಫಿಟ್ನೆಸ್ ಸಂಸ್ಥೆ



ಮೈಸೂರು ಜಿಲ್ಲಾ ದೇಹದಾರ್ಢ್ಯ ಮತ್ತು ಫಿಟ್ನೆಸ್ ಸಂಸ್ಥೆ ಹಾಗೂ ಕರುನಾಡು ಸೇವಾ ಸೇನೆ ಸಂಯುಕ್ತವಾಗಿ ಆಯೋಜಿಸಿದ್ದ ಜಿಲ್ಲಾ ಮಟ್ಟದ ದೇಹದಾರ್ಢ್ಯ ಸ್ಪರ್ಧೆಯಲ್ಲಿ ವಿನೋದ್ ಮೊದಲ ಬಹುಮಾನ ಪಡೆದರು. ಸತೀಶ್ ಎರಡನೇ ಬಹುಮಾನ ಹಾಗೂ ಹರ್ಷನ್ ಖಾನ್ ಮೂರನೆ ಬಹುಮಾನ ಪಡೆದರು. ಈ ವೇಳೆ ಮಾಜಿ ಶಾಸಕ ಎಲ್.ನಾಗೇಂದ್ರ ಇತರರಿದ್ದಾರೆ.

ಖತ್ಮೆ–ಇ–ಖಾದ್ರಿಯಾ, ಗಾರ್ವಿ ಷರೀಫ್ ಆಚರಣೆ



ಹಝರತ್ ಸೈಯದ್ ಷಾ ಅಲ್ತಾಫ್ ಪೀರಾನ್ ಖಾದ್ರಿ ಶತ್ತಾರಿ ಸಾಹೆಬ್, ಸಜ್ಜದ ನಷೀನ್, ಆಸ್ತಾನೆ ಆಲಿಯಾ ಮಕಾನ್ ವತಿಯಿಂದ ಬಡಾ ಮಕಾನ್‌ನಲ್ಲಿ ಖತ್ಮೆ–ಇ–ಖಾದ್ರಿಯಾ ಮತ್ತು ಗಾರ್ವಿ ಷರೀಫ್ ಆಚರಿಸಲಾಯಿತು.

ಮೈಸೂರು, ಡಿ.2–ಹಝರತ್ ಸೈಯದ್ ಷಾ ಅಲ್ತಾಫ್ ಪೀರಾನ್ ಖಾದ್ರಿ ಶತ್ತಾರಿ ಸಾಹೆಬ್, ಸಜ್ಜದ ನಷೀನ್, ಆಸ್ತಾನೆ ಆಲಿಯಾ ಮಕಾನ್ ವತಿಯಿಂದ ಬಡಾ ಮಕಾನ್‌ನಲ್ಲಿ ಖತ್ಮೆ–ಇ–ಖಾದ್ರಿಯಾ ಮತ್ತು ಗಾರ್ವಿ ಷರೀಫ್ ಆಚರಿಸಲಾಯಿತು.

ಮುಖ್ಯ ಅತಿಥಿಗಳಾದ ಹಝರತ್ ಮೌಲಾನಾ ಖಾರಿ ಸೈಯದ್ ಷಾ ವಲಿ ಪೀರಾನ್ ಬಾದ್‌ಶಾ ಖಾದ್ರಿ ಚಿಸ್ತಿ, ಸೂಫಿ ವಲಿ ಬಾ ಸಾಹೆಬ್, ಸಜ್ಜದಾ ನಷೀನ್ ದರ್ಗಾ–ಇ–ಆಲಾ ಹಝರತ್ ಸೈಯದ್ ಸಫ್‌ದರ್ ಅಲಿ ಷಾ ಖಾದ್ರಿ ಬಾಗ್ದಾದಿ ದರ್ಗಾ, ಬೆಂಗಳೂರು ಅವರ ಅಧ್ಯಕ್ಷತೆಯಲ್ಲಿ ಫಾತೆಹಾಖಾನಿ, ದಾರುದ್–ಓ–ಸಲಾಂ ಮತ್ತು ದುವಾ ಷರೀಫ್ ನೆರವೇರಿಸಲಾಯಿತು. ಮೈಸೂರು ಮತ್ತು ಸುತ್ತಮುತ್ತಲಿನ ಬಡಾವಣೆಗಳಿಂದ ಹೆಚ್ಚಿನ ಸಂಖ್ಯೆಯ ಭಕ್ತಾದಿಗಳು ಇದರಲ್ಲಿ ಭಾಗವಹಿಸಿದ್ದರು. ಸೂಫಿಝಾಮ್ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷ ಹಝರತ್ ಮೌಲಾನಾ ಸೈಯದ್ ಮುಕ್ತಾರ್ ಅಹಮದ್ ನೂರಿ ಬಾಬಾ ಸಾಬ್, ಅಫ್ರೋಝ್, ಅಸ್ಲಮ್, ಶೋಯಿಬ್, ಖಾಸಿಫ್, ಆಸಿಫ್, ಫಾರೂಖ್ ಮತ್ತು ಇತರರು ಭಾಗವಹಿಸಿದ್ದರು.

ಪುಟ್ಟಣ್ಣ ಕಣಗಾಲ್ 91ನೇ ಜನ್ಮ ದಿನಾಚರಣೆ



ಪರಿವರ್ತನಂ ಟ್ರಸ್ಟ್ ವತಿಯಿಂದ ಸೋಮವಾರ ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ನೆನಪಿನಂಗಳ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು, ಡಿ.2–ಕನ್ನಡ ಚಿತ್ರರಂಗದ ಚಿತ್ರಬ್ರಹ್ಮ ರಾಷ್ಟ್ರೀಯ ಪ್ರಶಸ್ತಿಗಳ ವಿಜೇತ ಪುಟ್ಟಣ್ಣ ಕಣಗಾಲ್ ಅವರ 91ನೇ ಜನ್ಮದಿನೋತ್ಸವದ ಅಂಗವಾಗಿ ಪರಿವರ್ತನಂ ಟ್ರಸ್ಟ್ ವತಿಯಿಂದ ಪುಟ್ಟಣ್ಣ ಕಣಗಾಲ್ ನೆನಪಿನಂಗಳ ಕಾರ್ಯಕ್ರಮವನ್ನು ಚಾಮರಾಜಪುರಂನಲ್ಲಿರುವ ವಿಷ್ಣುವರ್ಧನ ರಸ್ತೆಯಲ್ಲಿರುವ ಕಚೇರಿಯಲ್ಲಿ ಆಯೋಜಿಸಲಾಗಿತ್ತು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮಡ್ಡಿಕೆರೆ ಗೋಪಾಲ್, ಚಿತ್ರಬ್ರಹ್ಮ ಪುಟ್ಟಣ್ಣ ಕಣಗಾಲ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಪುಟ್ಟಣ್ಣ ಕಣಗಾಲ್ ಅವರ ಚಿತ್ರಗಳು ಕುಟುಂಬ ಪ್ರಧಾನವಾದ ಚಿತ್ರಗಳು, ಸಾಮಾಜಿಕ ಸಂದೇಶದ ಜೊತೆಯಲ್ಲೇ ಅವರ ನಿರ್ದೇಶನದಲ್ಲಿ ಮಹಿಳಾ ಪ್ರಧಾನಚಿತ್ರಗಳು, ಮೈಸೂರು ದಸರಾ, ಕೊಡಗಿನ ಕಾವೇರಿ, ಕನ್ಯಾಕುಮಾರಿ, ಮಾನಸಸರೋವರ, ಚಿತ್ರದುರ್ಗದ ಕಲ್ಲಿನ ಕೋಟೆ ಸೇರಿದಂತೆ ಹಲವಾರು ಇತಿಹಾಸ ಬಿಂಬಿಸುವ ಸ್ಥಳಗಳನ್ನು ಜನರಿಗೆ ಪ್ರಚಾರಪಡಿಸುತ್ತಿದ್ದರು ಎಂದರು.

ಸಮಾಜಸೇವಕ ಕೆ.ರಘುರಾಂ ವಾಜಪೇಯಿ ಮಾತನಾಡಿ, ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕ ಬಿ.ಆರ್ ಪಂತಲು ರವರ ಮೂಲಕ ಚಿತ್ರನಿರ್ದೇಶನದಲ್ಲಿ ಕೆಲಸ ಮಾಡಿದ ಕಣಗಾಲ್ ಗ್ರಾಮದ ಎಸ್.ಆರ್ ಪುಟ್ಟಣ್ಣ ಕಣಗಾಲ್ ರವರು ಕಾದಂಬರಿ ಆಧಾರಿತ ಚಿತ್ರವನ್ನು ಹೆಚ್ಚಾಗಿ ನಿರ್ದೇಶಿಸಿ ವಿಷ್ಣುವರ್ಧನ್, ಅಂಬರೀಶ್, ಶ್ರೀನಾಥ್, ಕಲ್ಪನಾ, ಆರತಿ, ವಜ್ರಮುನಿ, ಶ್ರೀನಾಥ್ ಸೇರಿದಂತೆ ಹೊಸಮುಖದ ಕಲಾವಿದರನ್ನು ಮುಖ್ಯವಾಹಿನಿಗೆ ತಂದರು ಎಂದರು.

ಬ್ರಾಹ್ಮಣ ಸಂಘದ ಅಧ್ಯಕ್ಷ ಡಿಟಿ. ಪ್ರಕಾಶ್ ಮಾತನಾಡಿ, ಪುಟ್ಟಣ್ಣ ಕಣಗಾಲ್ ಅವರ ಹೆಸರಿನಲ್ಲಿ ಕನ್ನಡಚಿತ್ರರಂಗ ಅತ್ಯುತ್ತಮ ಚಿತ್ರ ನಿರ್ದೇಶಕ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡುತ್ತದೆ. ಅದರ ಜೊತೆಯಲ್ಲೇ ಚಿತ್ರನಿರ್ದೇಶಕರ ಕಲಿಕಾ ಸಂಶೋಧನಾ ಘಟಕವನ್ನು ನಿರ್ಮಿಸಬೇಕು. ಇದರಿಂದ ಸಾಕಷ್ಟು ಯುವಕಲಾವಿದರಿಗೆ ಸ್ಫೂರ್ತಿ ದೊರೆಯುತ್ತದೆ ಎಂದರು. ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯದರ್ಶನ, ಜಿ.ರಾಘವೇಂದ್ರ, ನಿರೂಪಕ ಅಜಯ್ ಶಾಸ್ತ್ರಿ, ಪರಿವರ್ತನ ಟ್ರಸ್ಟ್ ಅಧ್ಯಕ್ಷ ವಿನಯ್ ಕಣಗಾಲ್, ಆಲನಹಳ್ಳಿ ಎಂ.ಎನ್.ಚೇತನ್ ಗೌಡ ಹಾಗೂ ಇನ್ನಿತರರು ಹಾಜರಿದ್ದರು.

ಮೈಸೂರು ಮಿತ್ರ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಸ್ವಾಗತ ಸಮಿತಿ ಸಭೆ

ಸಾಹಿತ್ಯ ಸಮ್ಮೇಳನದಲ್ಲಿ ಮಂಡ್ಯದ ಹೆಗ್ಗುರುತು ಮೂಡಲಿ

ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ

ಮಂಡ್ಯ: ಮೂರನೇ ಬಾರಿಗೆ ಮಂಡ್ಯದಲ್ಲಿ ಜರುಗಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಬಹಳ ಅರ್ಥಪೂರ್ಣವಾಗಿ ಆಚರಿಸಿ ಯಶಸ್ವಿಗೊಳಿಸುವುದರ ಜೊತೆಗೆ ಸಮ್ಮೇಳನದಲ್ಲಿ ಮಂಡ್ಯದ ಹೆಗ್ಗುರುತು ಮೂಡಿಸುವ ಕೆಲಸವಾಗಬೇಕು ಎಂದು ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಲಹೆ ನೀಡಿದರು.

ಡಿ.20, 21, 22ರಂದು ನಡೆಯುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಿದ್ಧತೆ ಕುರಿತಂತೆ ಮಂಡ್ಯ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಸ್ವಾಗತ ಸಮಿತಿ ಸಭೆಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮಂಡ್ಯ ಜಿಲ್ಲೆ ಆಚಾರ ವಿಚಾರ, ಇಲ್ಲಿನ ಪ್ರೇಕ್ಷಣೀಯ, ಐತಿಹಾಸಿಕ ಸ್ಥಳಗಳ ಮಹತ್ವ, ಐತಿಹ್ಯವನ್ನು ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟಕ್ಕೆ ಸಾರುವ ಅವಕಾಶ ಇದೆ. ಇದಕ್ಕಾಗಿ ಒಂದು ಕ್ರಿಯಾಯೋಜನೆ ರೂಪಿಸಿ ಮಂಡ್ಯಕ್ಕೆ ತನ್ನದೇ ಆದ ಐಡೆಂಟಿಟಿ ಸಿಗುವಂತ ಕೆಲಸವಾಗಬೇಕು ಎಂದು ಸ್ವಾಮೀಜಿಗಳು ಸಲಹೆ ನೀಡಿದರು.

ಸಮ್ಮೇಳನದ ಪೂರ್ವ ಸಿದ್ಧತೆಗಳ ಮಾಹಿತಿ ಪಡೆದ ಸ್ವಾಮೀಜಿಗಳು, ಇದು ನಮ್ಮ ಹಬ್ಬ. ಮನೆ ಹಬ್ಬದಂತೆ ಆಚರಣೆ ಮಾಡಬೇಕು. ಜಿಲ್ಲೆಯ ಸಾಮಾನ್ಯ ಪ್ರಜೆ ಕೂಡ ಸಮ್ಮೇಳನದ ಪ್ರಚಾರ ಕಾರ್ಯದಲ್ಲಿ ಸ್ವಯಂಪ್ರೇರಿತವಾಗಿ ತೊಡಗಿಕೊಳ್ಳುವಂತಾಗಬೇಕು. ಮಂಡ್ಯ ಹೃದಯ ಶ್ರೀಮಂತಿಕೆಗೆ ಹೆಸರುವಾಸಿ. ಅತಿ ಹೆಚ್ಚು ಕನ್ನಡ ಮಾತನಾಡುವ ಜಿಲ್ಲೆಯೆಂದರೆ ಅದು ಮಂಡ್ಯ. ಹೀಗಾಗಿ ಇಲ್ಲಿ ನಡೆಯುತ್ತಿರುವ ಸಾಹಿತ್ಯ ಸಮ್ಮೇಳನ ಮಾದರಿಯಾಗಿರಬೇಕು ಎಂದು ಹೇಳಿದರು.

ಸ್ವಾಗತ ಸಮಿತಿ ಅಧ್ಯಕ್ಷರೂ ಆದ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಸಭೆಯಲ್ಲಿ ವ್ಯಕ್ತಪಡಿಸಿದ ಎಲ್ಲಾ ಸಲಹೆಗಳನ್ನು ನೂರಕ್ಕೆ ನೂರು ಜಾರಿ ಮಾಡುವ ಪ್ರಾಮಾಣಿಕ ಪ್ರಯತ್ನ ಮಾಡಲಾಗುತ್ತದೆ. ಗುರುಗಳ ಮಾರ್ಗದರ್ಶನದಲ್ಲಿ ಕೆಲಸ ಮಾಡೋಣ. ಊಟದ ವ್ಯವಸ್ಥೆ ಅಚ್ಚುಕಟ್ಟಾಗಿ ಇರಲಿ. ಬೆಂಗಳೂರು, ಮೈಸೂರಿನ ಜೊತೆಗೆ ತಾಲೂಕು ಕೇಂದ್ರಗಳಿಂದಲೂ ವಿಶೇಷ ಬಸ್ ವ್ಯವಸ್ಥೆ ಮಾಡಲಾಗುವುದು ಎಂದರು.


ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಮಹೇಶ್ ಜೋಶಿ ಮಾತನಾಡಿ, ಮಾರ್ಗದರ್ಶಕ ಸೂಚಕದಂತೆ ಮಳಿಗೆ, ವೇದಿಕೆ ಸಿದ್ಧತೆ ಮಾಡಲಾಗುತ್ತದೆ.

ಸಭೆಯಲ್ಲಿ ವ್ಯಕ್ತವಾದ ಸಲಹೆಗಳು

- ಆನ್‌ಲೈನ್ ಜೊತೆಗೆ ಆಫ್‌ಲೈನ್ ನೋಂದಣಿಗೂ ಅವಕಾಶ ಕೊಡಿ
- ಜಿಲ್ಲಾಧಿಕಾರಿ ಉದ್ಯಾನವನದಿಂದ ಮೆರವಣಿಗೆ ಆರಂಭ
- ಕೃಷಿ ಬದುಕಿನ ಕುರಿತು ಕೃಷಿಯತ್ತ ಸೆಳೆಯಲು ಕೃಷಿಗೋಷ್ಠಿ ಇರಲಿ
- ಕನ್ನಡ ಶಾಲೆಗಳ ಮುಚ್ಚದಂತೆ ಅವುಗಳ ಸಶಕ್ತೀಕರಣಗೊಳಿಸುವ ಹಾಗೂ ಕನ್ನಡ ಮಾಧ್ಯಮ ಶಾಲೆಗಳಿಗೆ ಅನುದಾನ ನೀಡುವ ಎರಡು ನಿರ್ಣಯಗಳನ್ನು ಸಮ್ಮೇಳನದಲ್ಲಿ ಕೈಗೊಳ್ಳಬೇಕು.
- ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳು, ಶಿಕ್ಷಣ ಸಂಸ್ಥೆಗಳ ಮೇಲೆ ಬೆಳಕು ಚೆಲ್ಲಬೇಕು.
- ಸಮ್ಮೇಳನದಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ ಶೈಲಿಯ ಆಹಾರ ಇರಲಿದೆ.
- ಸಾಹಿತಿಗಳ ತಾರತಮ್ಯ ಬೇಡ. ಒಂದೇ ರೀತಿಯ ಊಟದ ವ್ಯವಸ್ಥೆ ಇರಲಿ. ಆಹಾರ ಮಳಿಗೆಗಳ ಸಮೀಪ ಶುಚಿತ್ವಕ್ಕೆ ಒತ್ತು ಕೊಡಬೇಕು.
- ಆಕರ್ಷಣೀಯ ಲೈಟಿಂಗ್ ವ್ಯವಸ್ಥೆ ಆಗಬೇಕು. ಉಚಿತ ವಾಹನ, ರೂಟ್ ಮ್ಯಾಪ್ ಬಗ್ಗೆ ಹೆಚ್ಚು ಪ್ರಚಾರ ಮಾಡಬೇಕು.
- ಮೂರು ದಿನಗಳ ಕಾರ್ಯಕ್ರಮದಂತೆ ನೋಡದೆ ಜಿಲ್ಲೆಯ ಖ್ಯಾತಿ, ಹೆಸರನ್ನು ಎತ್ತಿ ಹಿಡಿಯಬೇಕು.
- ಪ್ರವಾಸಿ ತಾಣಗಳು, ಪುರಾಣ ಪ್ರಸಿದ್ಧ ಸ್ಥಳಗಳ ಹೈಲೈಟ್ ಆಗಬೇಕು.

ಅಧ್ಯಕ್ಷರ ಆಯ್ಕೆ ಬಗ್ಗೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಗುತ್ತಿದೆ. ಸಾಹಿತ್ಯ ಸಮ್ಮೇಳನಕ್ಕೆ 18 ದೇಶಗಳಿಂದ ಕನ್ನಡ ಪ್ರೇಮಿಗಳು ಆಗಮಿಸುತ್ತಿದ್ದು, ಮಂಡ್ಯದ ಸಾಹಿತ್ಯ ಸಮ್ಮೇಳನ ಅಂತಾರಾಷ್ಟ್ರೀಯ ಮಟ್ಟದ ಆಕರ್ಷಣೆ ಆಗಲಿದೆ ಎಂದರು.

ಸಭೆಯಲ್ಲಿ ಶಾಸಕರಾದ ರಮೇಶ್ ಬಂಡಿಸಿದ್ದೇಗೌಡ, ನರೇಂದ್ರಸ್ವಾಮಿ, ರವಿಕುಮಾರ್, ಉದಯ್, ಎಂಎಲ್‌ಸಿಗಳಾದ ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ, ವಿವೇಕಾನಂದ, ನಗರಸಭೆ ಅಧ್ಯಕ್ಷ ಪ್ರಕಾಶ್, ಮಾಜಿ ಸಚಿವ ಸೋಮಶೇಖರ್, ಮಾಜಿ ಸಂಸದೆ ಸುಮಲತಾ, ಮಾಜಿ ಎಂಎಲ್‌ಸಿಗಳಾದ ಮರಿತಿಬ್ಬೇಗೌಡ, ಶ್ರೀಕಂಠೇಗೌಡ, ಮಾಜಿ ಶಾಸಕ ಅನ್ನದಾನಿ ಸೇರಿದಂತೆ ವಿವಿಧ ಸಮಿತಿಗಳ ಅಧ್ಯಕ್ಷರು, ಸದಸ್ಯರು ಉಪಸ್ಥಿತರಿದ್ದರು.



ಮಂಡ್ಯ ವಿವಿಯಲ್ಲಿ ಆಯೋಜಿಸಿದ್ದ ಸ್ವಾಗತ ಸಮಿತಿ ಸಭೆಯಲ್ಲಿ ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀಡಾ.ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು. ಸಚಿವ ಎನ್.ಚಲುವರಾಯಸ್ವಾಮಿ, ಕಸಾಪ ಅಧ್ಯಕ್ಷ ನಾಡೋಜ ಮಹೇಶ್ ಜೋಶಿ ಇದ್ದರು.

ಜಿಲ್ಲಾಧಿಕಾರಿ ಡಾ.ಕುಮಾರ ಅವರು ಸಮ್ಮೇಳನದ ಸಿದ್ಧತೆ ಕುರಿತು ಸಭೆಗೆ ವಿವರಿಸಿದರು. ವೇದಿಕೆ, ಮಳಿಗೆ, ಆಹಾರ ವಿತರಣಾ ಕೌಂಟರ್, ಪಾರ್ಕಿಂಗ್‌ಗೆ ಸಾಂಜೋ ಆಸ್ಪತ್ರೆ ಹಾಗೂ ಅಮರಾವತಿ ಹೋಟೆಲ್ ಹಿಂಭಾಗದಲ್ಲಿ ಜಾಗ ಗುರುತಿಸಲಾಗಿದೆ. ಕುಡಿಯುವ ನೀರು, ಶೌಚಾಲಯ, ಆಹಾರ ವಿತರಣೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ ಎಂದರು.

ಇದೇ ಮೊದಲ ಬಾರಿಗೆ ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. ಸ್ಥಳೀಯ ಕಲಾವಿದರಿಗೆ ಅವಕಾಶ ನೀಡಲು ಅಂಬೇಡ್ಕರ್ ಭವನ, ಕಲಾಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. 87 ಕಡೆ ಸ್ವಾಗತ ಕಮಾನುಗಳು ಇರಲಿವೆ. ಮುಂಜಾಗ್ರತಾ ಕ್ರಮವಾಗಿ ಹೆಲ್ಪ್ ಡೆಸ್ಕ್, ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ನಗರದಿಂದ ಸಮ್ಮೇಳನಕ್ಕೆ ಆಗಮಿಸುವವರಿಗೆ ಉಚಿತ ಬಸ್ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸಾಹಿತ್ಯ ಸಮ್ಮೇಳನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡುವ ಕಲಾತಂಡಗಳ ಗೌರವಧನವನ್ನು ಹೆಚ್ಚಳ ಮಾಡಲಾಗಿದೆ ಎಂದು ಶಾಸಕ ದಿನೇಶ್ ಗೂಳಿಗೌಡ ಅವರು ಹೇಳಿದರು.

ಸ್ಥಳೀಯ ಕಲಾತಂಡಗಳ ಗೌರವ ಧನವನ್ನು ಪರಿಷ್ಕರಣೆ ಮಾಡಲಾಗಿದೆ. ಐದು ಸಾವಿರವಿದ್ದ ಗೌರವಧನವನ್ನು ಹತ್ತು ಸಾವಿರಕ್ಕೆ ಹೆಚ್ಚಿಸಲಾಗಿದೆ. 471 ತಂಡಗಳಿಂದ ಅರ್ಜಿಗಳು ಬಂದಿದ್ದು 191 ತಂಡಗಳಿಗೆ ಅವಕಾಶ ಕಲ್ಪಿಸಬೇಕಾಗಿದೆ. ನಾಡಗೀತೆ, ರೈತಗೀತೆ, ನಾಲ್ವಡಿ ಗೀತೆ ಹಾಡುವ 87 ಮಂದಿಗೆ ಏಕರೂಪದ ವಸ್ತ್ರ ವಿತರಣೆ ಮಾಡುವುದರ ಜೊತೆಗೆ ಸ್ಥಳೀಯ ಕಲಾವಿದರಿಗೆ ಅವಕಾಶ ನೀಡಲು ಹಾಗೂ ಸಮ್ಮೇಳನದ ಪ್ರಚಾರಕ್ಕಾಗಿ ಡಿಸೆಂಬರ್ 18,19ರಿಂದಲೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದರು.

ಚಂದ್ರಶೇಖರನಾಥ ಸ್ವಾಮೀಜಿ ಮೇಲಿನ ಎಫ್‌ಐಆರ್ ವಾಪಸ್ಸಾತಿಗೆ ಆಗ್ರಹ

ಮಂಡ್ಯ: ವಿಶ್ವ ಮಾನವ ಒಕ್ಕಲಿಗರ ಮಠದ ಚಂದ್ರಶೇಖರ ಸ್ವಾಮೀಜಿ ಅವರ ಮೇಲೆ ಹಾಕಿರುವ ಎಫ್‌ಐಆರ್ ಅನ್ನು ಸರ್ಕಾರ ಹಿಂಪಡೆಯಲು ಮುಂದಾಗಬೇಕು ಎಂದು ಒಕ್ಕಲಿಗ ಸೇವಾ ಟ್ರಸ್ಟ್‌ನ ಅಧ್ಯಕ್ಷ ತಮ್ಮಯ್ಯ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಾಮೀಜಿಗಳು ಬಾಯ್ತಪ್ಪಿನಿಂದ ಹೇಳಿಕೆ ನೀಡಿದ್ದರು. ತಮ್ಮ ಹೇಳಿಕೆಯಿಂದ ತಪ್ಪಾಗಿದೆಯೆಂದು ಕ್ಷಮೆಯನ್ನೂ ಕೇಳಿದ್ದಾರೆ. ಅದನ್ನು ಪರಿಗಣಿಸಿ, ಸರ್ಕಾರ ಎಫ್‌ಐಆರ್‌ನ್ನು ಹಿಂಪಡೆಯಬೇಕೆಂದು ಕೋರಿದರು. ಇವರು ಒಂದು ಸಮುದಾಯಕ್ಕೆ ಮಾತ್ರ ಸ್ವಾಮೀಜಿಗಳಲ್ಲ, ಒಂದು ವೇಳೆ ಸರ್ಕಾರ ಎಫ್‌ಐಆರ್ ಹಿಂಪಡೆಯದೇ ಇದ್ದರೆ ಒಕ್ಕಲಿಗ ಸಮುದಾಯ ಸೇರಿದಂತೆ ಎಲ್ಲಾ ಸಂಘ ಸಂಸ್ಥೆಗಳು ಹೋರಾಟ ಮಾಡಬೇಕು ಎಂದರು.



ಸುದ್ದಿಗೋಷ್ಠಿಯಲ್ಲಿ ಪುರಸಭೆ ಸದಸ್ಯ ಎಸ್.ಪ್ರಕಾಶ್ ಮಾತನಾಡಿದರು.

ಟ್ರಸ್ಟ್‌ನ ಕಾರ್ಯಾಧ್ಯಕ್ಷ ಎಲ್.ಕೃಷ್ಣ ಮಾತನಾಡಿ, ರಾಜ್ಯದ ರಾಜಕೀಯ ಮುಖಂಡರು ಈ ಸಂಬಂಧ ಗಮನ ಹರಿಸಿ ಸದರಿ ಎಫ್‌ಐಆರ್ ಹಿಂತೆಗೆಸಲು ಸೂಕ್ತ ಕ್ರಮ ಕೈಗೊಳ್ಳಬೇಕು. ಈ ರೀತಿ ಸ್ವಾಮೀಜಿಗಳ ಮೇಲೆ ತನಿಖೆಯಾದರೆ ಒಕ್ಕಲಿಗ ಸಮಾಜಕ್ಕೆ ಕಳಂಕವಾಗಲಿದೆ. ಸರ್ಕಾರ ಸ್ವಾಮೀಜಿಗಳ ವಿರುದ್ಧ ವಿಚಾರಣೆಯನ್ನು ರದ್ದು ಮಾಡಬೇಕೆಂದು ಮನವಿ ಮಾಡಿದರು.

ಅಖಿಲ ಕರ್ನಾಟಕ ಒಕ್ಕಲಿಗರ ಸಂಘದ ಜಿಲ್ಲಾಧ್ಯಕ್ಷ ಕೆ.ಸಿ.ರವೀಂದ್ರ ಮಾತನಾಡಿ, ಸ್ವಾಮೀಜಿಗಳು ಮಾತನಾಡುವ ವೇಳೆ ಉದ್ವೇಗದಿಂದ ಲೋಪವಾಗಿದೆ. ಸ್ವಾಮೀಜಿಗಳು ಕ್ಷಮೆಯಾಚನೆ ಮಾಡಿದ್ದು, ಇದನ್ನು ಮುಂದುವರೆಸದೇ ಸದರಿ ಪ್ರಕರಣದಿಂದ ಸ್ವಾಮೀಜಿಯವರನ್ನು ಖುಲಾಸೆ ಮಾಡಬೇಕು ಎಂದು ಕೋರಿದರು.

ಗೋಷ್ಠಿಯಲ್ಲಿ ಟ್ರಸ್ಟ್‌ನ ರಾಜ್ಯ ಉಪಾಧ್ಯಕ್ಷ ಕೃಷ್ಣೇಗೌಡ, ಚಂದ್ರಶೇಖರ್ ಇದ್ದರು.

ಶ್ರೀರಂಗಪಟ್ಟಣ: ಚಂದ್ರಶೇಖರನಾಥ ಸ್ವಾಮೀಜಿ ವಿರುದ್ಧ ದಾಖಲಾಗಿರುವ ಪ್ರಕರಣವನ್ನು ರಾಜ್ಯ ಸರ್ಕಾರ ವಾಪಸ್ ಪಡೆಯುವಂತೆ ಪುರಸಭೆ ಸದಸ್ಯ ಎಸ್.ಪ್ರಕಾಶ್ ಒತ್ತಾಯಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಒಕ್ಕಲಿಗ ಸಮಾಜದ ಸ್ವಾಮೀಜಿ ಚಂದ್ರಶೇಖರನಾಥ ಶ್ರೀಗಳು ಬಾಯಿತಪ್ಪಿ ಮಾತನಾಡಿ, ಈಗಾಗಲೇ ವಿಷಾದ ವ್ಯಕ್ತಪಡಿಸಿದ್ದಾರೆ. ಹೀಗಿದ್ದರೂ ಅವರ ವಿರುದ್ಧ ರಾಜ್ಯ ಸರ್ಕಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡುವ ಮೂಲಕ ಒಂದು ಸಮಾಜದ ಓಲೈಕೆ ಮಾಡುತ್ತಿರುವುದು ಸರಿಯಲ್ಲ. ರಾಜಕಾರಣಿಗಳು ಸೇರಿದಂತೆ ಹಲವರು ದೊಡ್ಡಮಟ್ಟದಲ್ಲಿ ಸಂವಿಧಾನ ವಿರೋಧಿ ಹೇಳಿಕೆಗಳನ್ನು ನೀಡಿದ್ದಾರೆ. ಅಂತಹವರ ಮೇಲೆ ಯಾವುದೇ ಪ್ರಕರಣಗಳು ದಾಖಲಾಗಿಲ್ಲ, ಕೇವಲ ಸ್ವಾಮೀಜಿ ಮೇಲೆ ಮಾತ್ರ ಏಕೆ ಎಂದು ಪ್ರಶ್ನಿಸಿದರು.

ಸಚಿವ ಜಮೀರ್ ಅಹಮದ್ ಅವರು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಮೈ ಬಣ್ಣದ ವಿರುದ್ಧ ಮಾತನಾಡಿದಾಗ ಯಾವುದೇ ಪ್ರಕರಣ ದಾಖಲು ಮಾಡಲಿಲ್ಲ. ಕನಿಷ್ಠಪಕ್ಷ ಅವರಿಗೆ ಎಚ್ಚರಿಸುವ ಪ್ರಯತ್ನವನ್ನೂ ಮಾಡದ ರಾಜ್ಯ ಸರ್ಕಾರ, ಇದೀಗ ಶ್ರೀಗಳು ವಿಷಾದ ವ್ಯಕ್ತ ಪಡಿಸಿದ್ದರೂ ಏಕೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಕಿಡಿಕಾರಿದರು.

ಸ್ವಾಮೀಜಿಯನ್ನ ಯಾವುದೇ ಕಾರಣಕ್ಕೂ ಪೊಲೀಸ್ ಠಾಣೆಗೆ ಕರೆಸಿಕೊಳ್ಳಬಾರದು. ಒಂದುವೇಳೆ ವಿನಾ ಕಾರಣ ವಿಚಾರಣೆ ನಡೆಸಿದರೆ ಮುಂದಿನ ಸಭೆಯಲ್ಲಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಇಂದ್ರಕುಮಾರ್, ಮುಖಂಡರಾದ ಸುಧಾಕರ್, ಮಹದೇವಪುರ ಸುರೇಶ್, ನಂದೀಶ್ ಇದ್ದರು.

ಜಾನಪದ ಕಲಾ ಪ್ರಾಕಾರಗಳ ತರಬೇತಿ ಶಿಬಿರ

ಮಂಡ್ಯ, ಡಿ.2– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ 2024–25ನೇ ಸಾಲಿನ ಪರಿಶಿಷ್ಟ ಜಾತಿ ಉಪಯೋಜನೆ ಅಡಿ ಇಲಾಖೆ ಪ್ರಮುಖ ಕಾರ್ಯಕ್ರಮಗಳಾದ ಯುವಜನಮೇಳ ಹಾಗೂ ಯುವಜನೋತ್ಸವ ಕಾರ್ಯಕ್ರಮಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಪರಿಶಿಷ್ಟ ಜಾತಿ ಯುವಜನರಿಗೆ ಜಾನಪದ ಕಲಾ ಪ್ರಾಕಾರಗಳ ತರಬೇತಿ ಶಿಬಿರವನ್ನು 50 ಶಿಬಿರಾರ್ಥಿಗಳಿಗೆ ಡಿ.10 ರಿಂದ 17–12 ರವರೆಗೆ ಆಯೋಜಿಸಲಾಗಿದೆ.

ಡಿ.7ರೊಳಗೆ ಆಸಕ್ತ ಪರಿಶಿಷ್ಟ ಜಾತಿ ಯುವಕ/ಯುವತಿಯರು ನಿಗದಿತ ನಮೂನೆಯಲ್ಲಿ ಅರ್ಜಿ ಭರ್ತಿ ಮಾಡಿ ಮಂಡ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ಸಲ್ಲಿಸಬಹುದು ಎಂದು ಮಂಡ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿಕ್ಕಮರಮ್ಮ ನಿಧನ



ಭಾರತೀನಗರ, ಡಿ.2– ಕೆ.ಎಂ.ದೊಡ್ಡಿಯ ಶ್ರೀವೆಂಕಟೇಶ್ವರ ಸೇವಾ ಟ್ರಸ್ಟ್ ನಿರ್ದೇಶಕ ಬೋರೇಗೌಡರ ತಾಯಿ ಹಾಗೂ ದಿವಂಗತ ಚೊಕ್ಕೇಗೌಡರ ಪತ್ನಿ ಚಿಕ್ಕಮರಮ್ಮ (75) ಭಾನುವಾರ ಸಂಜೆ ಮೃತಪಟ್ಟಿದ್ದಾರೆ. ಮೃತರು ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಕೆ.ಎಂ.ದೊಡ್ಡಿಯ ಜಮೀನಿನಲ್ಲಿ ಸೋಮವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ನಿವೇಶನ ಮಂಜೂರು; ಮುಡಾ ನಿರ್ಣಯ ರದ್ದು

ಮಂಜೂರು ಮಾಡಿ 2023ರ ಡಿಸೆಂಬರ್ 8ರಂದು ನೋಂದಾಯಿಸಿರುವ 48 ನಿವೇಶನಗಳ ಖಾತೆ–ಕಂದಾಯಗಳನ್ನು ರದ್ದುಪಡಿಸಬೇಕಾಗಿದೆ.

ವಿವರ: 2023ರ ಮಾರ್ಚ್ 21ರಂದು ಅಂದು ಮುಡಾ ಅಧ್ಯಕ್ಷರಾಗಿದ್ದ ಯಶಸ್ವಿ ಎಸ್. ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದ ಪ್ರಾಧಿಕಾರದ ಸಾಮಾನ್ಯ ಸಭೆಯಲ್ಲಿ ವಿಷಯ ಸಂಖ್ಯೆ 13(4)ರಲ್ಲಿ ದಟ್ಟಗಳ್ಳಿ ಬಡಾವಣೆಯ 48 ಮಂದಿಗೆ ನಿವೇಶನ ಮಂಜೂರು ಮಾಡುವ ಸಂಬಂಧ ಸುದೀರ್ಘ ಚರ್ಚೆ ನಡೆದು ಅಂತಿಮವಾಗಿ **‘ಹಲವಾರು ವರ್ಷಗಳಿಂದ ಸದರಿ ಪ್ರಕರಣ ನ್ಯಾಯಾಲಯದಲ್ಲಿದ್ದು, ಪ್ರಸ್ತುತ ರಿಟ್ ಅಪೀಲು ಸಂಖ್ಯೆ–437/2014 (ಎಲ್.ಎ–ಯು.ಡಿ.ಎ) ಆದೇಶ ದಿನಾಂಕ 27–02–2023ರಲ್ಲಿ ನ್ಯಾಯಾಲಯದ ಆದೇಶ ಪ್ರಾಧಿಕಾರದ ಪರವಾಗಿರುತ್ತದೆ. ಅದರಂತೆ ಸರ್ಕಾರದ ಆದೇಶ ಸಂಖ್ಯೆ ನಅಇ 113 ಭೂಬದಿ 97 ಬೆಂಗಳೂರು ದಿನಾಂಕ: 11–07–19907ರನ್ನು ಕಾರ್ಯಗತಗೊಳಿಸಲು ಸರ್ಕಾರದ ಗಮನಕ್ಕೆ ತಂದು ಸೂಕ್ತ ಕ್ರಮ ವಹಿಸಲು ಸಭೆಯು ಆಯುಕ್ತರಿಗೆ ತಿಳಿಸಿತು’** ಎಂದು ನಿರ್ಣಯ ಮಾಡಿ, ಅದನ್ನು ಸರ್ಕಾರಕ್ಕೆ ರವಾನೆ ಮಾಡಲಾಗಿತ್ತು.

ನಂತರ ಮುಡಾದ ಆಯುಕ್ತರಾಗಿದ್ದ ದಿನೇಶ್‌ಕುಮಾರ್, 2023ರ ಏಪ್ರಿಲ್ 29ರಂದು 48 ಮಂದಿಗೆ ನಿವೇಶನ ಮಂಜೂರು ಮಾಡಲು ಜ್ಞಾಪನಾ ಪತ್ರ ಹೊರಡಿಸಿ, 2023ರ ಸೆಪ್ಟೆಂಬರ್ 27ರಂದು ಮಂಜೂರಾತಿ ಮಾಡಿ 2023ರ ಡಿಸೆಂಬರ್ 8ರಂದು ಎಲ್ಲಾ 48 ಮಂದಿಗೆ ನಿವೇಶನಗಳನ್ನು ಮುಡಾ ಕಚೇರಿಯಲ್ಲಿರುವ ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಾಯಿಸಲಾಗಿತ್ತು.

ಇದೀಗ ಯಶಸ್ವಿ ಸೋಮಶೇಖರ್ ಅಧ್ಯಕ್ಷತೆಯಲ್ಲಿ ನಡೆದಿದ್ದ ಮುಡಾ ಸಭೆಯ ನಿರ್ಣಯವನ್ನು, ಸರ್ಕಾರವು ರದ್ದುಗೊಳಿಸಿರುವ ಆದೇಶದಲ್ಲಿ ನ್ಯಾಯಾಲಯವು ಚಾಮುಂಡೇಶ್ವರಿನಗರ ಸರ್ವೋದಯ ಸಂಘವು ದಾಖಲಿಸಿದ್ದ ರಿಟ್ ಅಪೀಲನ್ನು 27–02–2023 ರಂದು ವಜಾಗೊಳಿಸಿರುವುದರಿಂದ 1997ರ ಜುಲೈ 11ರಂದು ಸರ್ಕಾರದ ಆದೇಶವನ್ನು ಪ್ರಾಧಿಕಾರವು ಕಾರ್ಯಗತಗೊಳಿಸಲು ನಿರ್ಧರಿಸಿರುವುದು (ಅರ್ಜಿದಾರರಿಗೆ ನಿವೇಶನಗಳನ್ನು ನೀಡುವುದು) ಕಾನೂನುಬಾಹಿರ ಕ್ರಮವಾಗಿದೆ ಎಂದು ಸ್ಪಷ್ಟವಾಗಿ ತಿಳಿಸಿದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987ರಡಿ ಅಭಿವೃದ್ಧಿ ಯೋಜನೆಗೆ ಸರ್ಕಾರದಿಂದ ನಿಯಮಾನುಸಾರ ಅನುಮತಿ ಪಡೆದ ನಂತರ ನಿವೇಶನಗಳನ್ನು ಭೂಸ್ವಾಧೀನಪಡಿಸಿಕೊಂಡಿರುವ ಭೂ ಮಾಲೀಕರಿಗೆ ಪರಿಹಾರದ ಬದಲಿಗೆ ನಿವೇಶನ ಹಂಚಿಕೆ ಮಾಡಬೇಕು ಹಾಗೂ ಭೂಮಿಯನ್ನು ಸ್ವಇಚ್ಛೆಯಿಂದ ಬಿಟ್ಟುಕೊಡುವುದಕ್ಕಾಗಿ ಪ್ರೋತ್ಸಾಹದಾಯಕ ಯೋಜನೆಯಡಿ ಮಾತ್ರ ನಿವೇಶನಗಳನ್ನು ಹಂಚಿಕೆ ಮಾಡಬೇಕೇ ಹೊರತು, ಕೇವಲ ಸ್ಥಳದಲ್ಲಿ ಸ್ವಾಧೀನದಲ್ಲಿದ್ದರು ಎಂಬ ಮಾತ್ರಕ್ಕೆ ಅಭಿವೃದ್ಧಿಪಡಿಸಿದ ಬಡಾವಣೆಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವುದು ನಿಯಮಗಳ ಉಲ್ಲಂಘನೆ ಎಂದು ಕೆ. ಲತಾ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಪ್ರಾಧಿಕಾರದ ಪರವಾಗಿ ಆದೇಶ ಬಂದಿದ್ದರೂ ಸರ್ಕಾರದ ನಿಯಮಗಳು, ಸುತ್ತೋಲೆಗಳಲ್ಲಿನ ನಿರ್ದೇಶನ, ಮಾರ್ಗಸೂಚಿಗಳನ್ನು ಪಾಲಿಸದೇ ಪ್ರಾಧಿಕಾರವು ಕಾರ್ಯಗತಗೊಳಿಸಲು (ಅರ್ಜಿದಾರರಿಗೆ ನಿವೇಶನ ನೀಡಲು) ಸಭೆಯಲ್ಲಿ ತೀರ್ಮಾನಿಸಿರುವುದು ಕಾನೂನುಬಾಹಿರವಾಗಿರುವುದರಿಂದ 2023ರ ಮಾರ್ಚ್ 21ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 13(4)ರ ನಿರ್ಣಯವನ್ನು ಏಕೆ ರದ್ದುಗೊಳಿಸಬಾರದು ಎಂದು ಸರ್ಕಾರ ಈ ಹಿಂದೆ ಪ್ರಾಧಿಕಾರದ ಆಯುಕ್ತರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿ ಸ್ಪಷ್ಟೀಕರಣ ನೀಡುವಂತೆ ಸೂಚಿಸಲಾಗಿತ್ತು. ಈ ಸಂಬಂಧ ಆಯುಕ್ತರು ನೀಡಿರುವ ಸಮಜಾಯಿಷಿ ಮತ್ತು ಸ್ಪಷ್ಟೀಕರಣವನ್ನು ಸರ್ಕಾರ ಒಪ್ಪಲು ಸಾಧ್ಯವಿಲ್ಲ. ಅಲ್ಲದೇ, ಚಾಮುಂಡೇಶ್ವರಿನಗರ ಸರ್ವೋದಯ ಸಂಘವು ದಾಖಲಿಸಿದ್ದ ರಿಟ್ ಅಪೀಲನ್ನು ಉಚ್ಚನ್ಯಾಯಾಲಯವು ವಜಾಗೊಳಿಸಿದೆ. ಈ ಅಂಶವನ್ನು 2023ರ ಮಾರ್ಚ್ 27ರ ಆಯುಕ್ತರ ಪ್ರಸ್ತಾವನೆಯಲ್ಲಾಗಲೀ ಅಥವಾ ಪ್ರಾಧಿಕಾರದ ಸಾಮಾನ್ಯ ಸಭೆ (21–3–2023)ಯಲ್ಲಾಗಲೀ ಚರ್ಚೆಗೆ ಒಳಪಡಿಸಿರುವುದಿಲ್ಲ ಎಂದು ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಕೆ. ಲತಾ ತಮ್ಮ ಆದೇಶದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಮುಡಾ ಆಯುಕ್ತರು ತಮ್ಮ ವಿವರಣೆಯಲ್ಲಿ ಪ್ರಾಧಿಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ ಎಂದು ವಿವರಿಸಿದ್ದಾರೆ. ಆದರೆ, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆಯನ್ವಯ ಸರ್ಕಾರದ ಪೂರ್ವಾನುಮತಿ ಪಡೆದು ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ, ನಕ್ಷೆ ಹಾಗೂ ಅಂದಾಜು ವೆಚ್ಚಕ್ಕೆ ಆಡಳಿತಾತ್ಮಕ ಅನುಮೋದನೆ ಪಡೆಯಬೇಕಾಗಿದೆ. ಅಲ್ಲದೇ, ಈ ಪ್ರಕ್ರಿಯೆಯನ್ನು ಪಾಲಿಸದೇ ನೇರವಾಗಿ ನಿವೇಶನಗಳನ್ನು ನಿಯಮಬಾಹಿರವಾಗಿ ಹಂಚಿಕೆ ಮಾಡಿರುವುದು ಕಾಯಿದೆ ಮತ್ತು ನಿಯಮಗಳಿಗೆ ವ್ಯತಿರಿಕ್ತವಾಗಿದೆ. ಇದರಿಂದ ಪ್ರಾಧಿಕಾರದ ಆಯುಕ್ತರು ಚಾಲ್ತಿ ಕಾಯ್ದೆ ಮತ್ತು ನಿಯಮಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದು ಕಂಡುಬರುತ್ತದೆ. ಆದ್ದರಿಂದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ 2023ರ ಮಾರ್ಚ್ 21ರಂದು ನಡೆದ ಸಾಮಾನ್ಯ ಸಭೆಯ ವಿಷಯ ಸಂಖ್ಯೆ 13(4)ರಲ್ಲಿ ಕೈಗೊಂಡಿರುವ 48 ಮಂದಿಗೆ ನಿವೇಶನ ಮಂಜೂರು ಮಾಡುವ ನಿರ್ಣಯವನ್ನು ರದ್ದುಪಡಿಸಿ ಆದೇಶಿಸಲಾಗಿದೆ ಎಂದು ಅಧೀನ ಕಾರ್ಯದರ್ಶಿಗಳು ತಮ್ಮ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಈ ಆದೇಶದ ಪ್ರಕಾರ ದಟ್ಟಗಳ್ಳಿಯ ವಿವಿಧ ಸರ್ವೆ ನಂಬರ್‌ಗಳಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯಲ್ಲಿ ನಿಯಮ ಬಾಹಿರವಾಗಿ ಒಂದೇ ದಿನ 48 ಮಂದಿಗೆ ಹಂಚಿಕೆ ಮಾಡಿರುವ ವಿವಿಧ ಅಳತೆಗಳ ಕೋಟ್ಯಾಂತರ ರೂ. ಬೆಲೆಬಾಳುವ ನಿವೇಶನಗಳ ಮಂಜೂರಾತಿ ಆದೇಶವನ್ನು ರದ್ದುಪಡಿಸಿ ಪ್ರಾಧಿಕಾರವು ಹಿಂಪಡೆದುಕೊಳ್ಳಬೇಕಾಗಿದೆ. ಜೊತೆಗೆ ಅಂದಿನ ಸಭೆಯಲ್ಲಿ ಹಾಜರಿದ್ದು, ಈ ವಿಷಯಕ್ಕೆ ಅನುಮೋದನೆ ನೀಡಿದವರ ವಿರುದ್ಧವೂ ಕ್ರಮ ವಹಿಸಬೇಕಾಗಿದೆ. ಒಂದು ವೇಳೆ ನವೆಂಬರ್ 30ರ ಸರ್ಕಾರದ ಆದೇಶ ಜಾರಿಗೆ ಬರುವುದಾದರೆ ಮುಡಾದಿಂದ ನಿವೇಶನ ಪಡೆದಿರುವ 48 ಮಂದಿ ನಿವೇಶನ ಕಳೆದುಕೊಳ್ಳುವ ಜೊತೆಗೆ ಈ ಕಾನೂನುಬಾಹಿರ ಕೃತ್ಯದ ಹಿಂದೆ ಕೆಲಸ ಮಾಡಿರುವ ಕಾಣದ ಕೈಗಳ ಬಣ್ಣವೂ ಬಯಲಾಗುವುದರಲ್ಲಿ ಸಂಶಯವಿಲ್ಲ. ಕೇವಲ ಸಭಾ ನಿರ್ಣಯವನ್ನು ರದ್ದುಪಡಿಸುವುದಕ್ಕೆ ಅಷ್ಟೇ ಸೀಮಿತವಾಗದೇ ಈ ಪ್ರಕರಣದ ಬಗ್ಗೆ ಸಮಗ್ರವಾಗಿ ತನಿಖೆ ನಡೆಸಿದರೆ, ಕಾನೂನು ಬಾಹಿರವಾಗಿ 48 ಮಂದಿಗೆ ನಿವೇಶನ ಹಂಚಿಕೆ ಮಾಡಿರುವ ವಿಚಾರದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಕೆಲ ಜನಪ್ರತಿನಿಧಿಗಳು ಸೇರಿದಂತೆ ಹಲವರು ಕಾನೂನು ರೀತಿಯ ಶಿಕ್ಷೆಯನ್ನು ಅನುಭವಿಸಬೇಕಾಗಬಹುದು ಎನ್ನಲಾಗಿದೆ.

ಪರೀಕ್ಷೆ

ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯ ತನಕ ನಡೆಯಲಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆಯು ಮಾರ್ಚ್ 20ರಿಂದ ಆರಂಭಗೊಂಡು ಏಪ್ರಿಲ್ 2 ರವರೆಗೆ ನಡೆಯಲಿದೆ. ಈ ಎಲ್ಲ ಪರೀಕ್ಷೆಗಳು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನಡೆಯಲಿವೆ. ಇದು ತಾತ್ಕಾಲಿಕ ವೇಳಾ ಪಟ್ಟಿಯಾಗಿದ್ದು, ಆಕ್ಷೇಪಣೆ ಇದ್ದಲ್ಲಿ ವಿದ್ಯಾರ್ಥಿಗಳು, ಪೋಷಕರು ಹಾಗೂ ಸಾರ್ವಜನಿಕರು ಇದೇ ಡಿಸೆಂಬರ್ 16ರೊಳಗೆ ಸಲ್ಲಿಸತಕ್ಕದ್ದು ಎಂದು ಮಂಡಳಿ ತಿಳಿಸಿದೆ.

ಯಾವ ಬೆಲೆಯನ್ನೂ ನೀಡಬೇಡಿ!

ಪಡೆಯುತ್ತಿದ್ದೇವೆ. ಆದರೆ ನಮ್ಮ ಬಡಾವಣೆಯನ್ನು ವಕ್ಫ್‌ಗೆ ಸೇರಿದ ಆಸ್ತಿ ಎಂದು ನಮಗೆ ತೊಂದರೆ ನೀಡುತ್ತಿದ್ದಾರೆ ಎಂದು ದೂರಿದರು. ನೀವು ಮನೆಯನ್ನು ಖಾಲಿ ಮಾಡಿ ನಮ್ಮ ಸುಪರ್ದಿಗೆ ನೀಡಬೇಕು. ಇಲ್ಲವೆ ಇದೇ ಮನೆಗಳನ್ನು ಭೋಗ್ಯಕ್ಕೆ ಪಡೆದು ವಾಸ ಮಾಡಬೇಕೆಂದು ಷರತ್ತು ವಿಧಿಸಿದ್ದಾರೆ. ಇದರಿಂದ ನಾವೆಲ್ಲಾ ಈಗ ಅತಂತ್ರ ಸ್ಥಿತಿಯಲ್ಲಿದ್ದೇವೆ. ನೀವೇ ಈ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕೆಂದು ಮನವಿ ಮಾಡಿಕೊಂಡರು.

ಈ ವೇಳೆ ಮಾತನಾಡಿದ ಅಶೋಕ್, ನಿಮ್ಮ ಪರಿಸ್ಥಿತಿ ನಮಗೆ ಅರ್ಥವಾಗುತ್ತಿದೆ. ಯಾವುದೇ ಕಾರಣಕ್ಕೂ ನೀವು ಹೆದರಬೇಡಿ. ಈ ಆಸ್ತಿಯನ್ನು ನಿಮಗೆ ಕೊಡಿಸುತ್ತೇವೆ. ಭಯ ಪಡದೆ ನಮ್ಮ ಹೋರಾಟಕ್ಕೆ ನೀವು ದನಿಗೂಡಿಸಿ ಎಂದು ಕೋರಿದರು.

ಬೆಳಗಾವಿಯಲ್ಲಿ ನಡೆಯುವ ವಿಧಾನಸಭಾ ಅಧಿವೇಶನದ ಸಂದರ್ಭದಲ್ಲಿ (ಡಿಸೆಂಬರ್ 9) ನಿಮ್ಮ ಸಮಸ್ಯೆ ಕುರಿತು ಚರ್ಚೆ ಮಾಡುತ್ತೇನೆ. ಎರಡು ಗಂಟೆಗಳ ಕಾಲ ಇದೇ ವಿಚಾರವಾಗಿ ಮಾತನಾಡಿ ಸರ್ಕಾರದ ಗಮನ ಸೆಳೆಯುತ್ತೇನೆ. ನಿಮಗೆ ಮಾತು ಕೊಡುತ್ತಿದ್ದೇವೆ, ನಾವು ನ್ಯಾಯ ಕೊಡಿಸುತ್ತೇವೆ ಎಂದು ಭರವಸೆ ನೀಡಿದರು.

ಹಲವು ವರ್ಷಗಳಿಂದ ನಮ್ಮ ಸಮಸ್ಯೆ ಕಗ್ಗಂಟಾಗಿದೆ. ಈ ತನಕ ಯಾರೂ ಪರಿಹಾರ ಮಾಡಿಲ್ಲ ಎಂದು ನಿವಾಸಿಗಳು ಅವಲತ್ತುಕೊಂಡರು. ಈ ವೇಳೆ ಮಾತನಾಡಿದ ಶ್ರೀ ಬಸವ ಜ್ಞಾನ ಮಂದಿರದ ಶ್ರೀ ಮಾತೆ ಮಾದೇವಿ, ಇಲ್ಲಿ ಬಸವಣ್ಣನವರ ಮಠ ನಿರ್ಮಾಣ ಮಾಡಿ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕಾರ್ಯಗಳನ್ನು ಹಲವು ವರ್ಷಗಳಿಂದ ಮಾಡುತ್ತಿದ್ದೇವೆ. ಇಲ್ಲಿ ಮಠ ನಿರ್ಮಾಣ ಮಾಡಲು ಸರ್ಕಾರದಿಂದ ಅನುದಾನ ದೊರೆತಿದೆ. ಆದರೆ ಈಗ ಮಠದ ಜಾಗವನ್ನು ಕೂಡ ವಕ್ಫ್ ಆಸ್ತಿ ಎಂದು ಘೋಷಿಸಿದ್ದಾರೆ ಎಂದು ದೂರಿದರು. ನಾವು ಸುಮ್ಮನೆ ಹೋರಾಟ ಮಾಡುತ್ತಿಲ್ಲ. ಇಲ್ಲಿ ಪ್ರಚಾರಕ್ಕೆ ಬಂದು ಹೋಗುತ್ತಿಲ್ಲ. ನಿಮ್ಮ ನೋವಿಗೆ ನಾವು ಸ್ಪಂದಿಸುತ್ತೇವೆ. ಆದರೆ ಬಿಜೆಪಿಯ ಈ ಹೋರಾಟಕ್ಕೆ ನೀವೆಲ್ಲಾ ಒತ್ತಾಸೆಯಾಗಿ ನಿಲ್ಲಬೇಕು. ಅದು ಏನೇ ಆಗಲಿ ನಿಮಗೆ ನಾವು ನ್ಯಾಯ ಒದಗಿಸುತ್ತೇವೆ ಎಂದು ಅಶೋಕ್ ಆಶ್ವಾಸನೆ ನೀಡಿದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ವಕ್ಫ್ ನೋಟಿಸ್‌ಗೆ ನೀವು ಯಾರೂ ಉತ್ತರ ನೀಡಬೇಡಿ, ಗೌರವಿಸಲೂ ಬೇಡಿ, ನಿಮಗೆ ಸೇರಿದ ಆಸ್ತಿಯನ್ನು ನಮ್ಮದು ಎಂದು ಹೇಳುವ ವಕ್ಫ್ ಕಾನೂನಿಗೆ ಅರ್ಥವಿಲ್ಲ. ನಾವು ನಿಮ್ಮ ಜೊತೆಗಿದ್ದು, ಇದನ್ನು ರದ್ದು ಮಾಡಿಸುತ್ತೇವೆ ಎಂದು ಭರವಸೆ ನೀಡಿದರು. ಮಾಜಿ ಕೇಂದ್ರ ಸಚಿವ ನಾರಾಯಣಸ್ವಾಮಿ, ಶಾಸಕರಾದ ಟಿ.ಎಸ್.ಶ್ರೀವತ್ಸ, ರವಿಕುಮಾರ್, ಮಾಜಿ ಶಾಸಕ ಪ್ರೀತಂ ಗೌಡ, ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಸಚಿವ ಹಾಲಪ್ಪ ಆಚಾರ್, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಇತರರು ಈ ವೇಳೆ ಹಾಜರಿದ್ದರು.

ಇನ್ನೂ 2 ದಿನ ಭಾರಿ ಮಳೆ

ಫೆಂಗಲ್ ಪ್ರಭಾವದಿಂದ ಬೆಂಗಳೂರು ಮತ್ತು ಕರ್ನಾಟಕದ ಇತರ ಭಾಗಗಳಲ್ಲಿ ಭಾನುವಾರ ದಿಂದ ವ್ಯಾಪಕ ಮಳೆಯಾಗಿದೆ ಎಂದು ಹೇಳಿದರು. ಐಎಂಡಿ ಅಧಿಕಾರಿಗಳ ಪ್ರಕಾರ, ಉಡುಪಿ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಅತೀ ಹೆಚ್ಚು ಮಳೆಯಾಗುವ ನಿರೀಕ್ಷೆ ಇದ್ದು ಆರೆಂಜ್ ಅಲರ್ಟ್ ಘೋಷಿಸಿದೆ ಆರೆಂಜ್ ಅಲರ್ಟ್ ಎಂದರೆ 11 ಸೆಂ.ಮೀನಿಂದ 20 ಸೆಂ.ಮೀ ವರೆಗಿನ ಭಾರಿ ಮಳೆ ಮತ್ತು ಹಳದಿ ಎಚ್ಚರಿಕೆ ಎಂದರೆ 6 ಸೆಂ.ಮೀ ಮತ್ತು 11 ಸೆಂ.ಮೀ ವರೆಗೆ ಮಳೆಯಾ ಗುತ್ತದೆ. IMD ಹೇಳಿಕೆಯ ಪ್ರಕಾರ, ಡಿ.2ರಂದು, ಕೊಡಗು ಜಿಲ್ಲೆಯಾದ್ಯಂತ ಭಾರಿ ಮಳೆಯ ಸಾಧ್ಯತೆಯಿದೆ. ಆದರೆ ಉಡುಪಿ, ದಕ್ಷಿಣ ಕನ್ನಡ, ಚಾಮರಾಜನಗರ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಮೈಸೂರಿನಲ್ಲಿ ಅತಿ ಹೆಚ್ಚು ಮಳೆಯಾಗುವ ಸಾಧ್ಯತೆಯಿದೆ. ಹಾಸನ, ಮಂಡ್ಯ ಮತ್ತು ರಾಮನಗರ ಜಿಲ್ಲೆಗಳಲ್ಲಿ ಅಲ್ಲಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದ್ದು, ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಹೆಚ್ಚಿನ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಡಿಸೆಂಬರ್ 2 ಮತ್ತು 3ರಂದು, ದಕ್ಷಿಣ ಕರ್ನಾಟಕ ಕರಾವಳಿಯಲ್ಲಿ ಗಾಳಿಯ ವೇಗ ಗಂಟೆಗೆ 35 ಕಿಲೋಮೀಟರ್ ನಿಂದ 45 ಕಿಮೀ ಅಥವಾ 55 ಕಿಮೀ ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆಯಿದೆ ಎಂದು IMD ಮುನ್ಸೂಚನೆ ನೀಡಿದ್ದು ಈ ಅವಧಿಯಲ್ಲಿ ಮೀನುಗಾರರು ಸಮುದ್ರಕ್ಕೆ ತೆರಳದಂತೆ ಸೂಚಿಸಲಾಗಿದೆ.

ಡಿ.3ಕ್ಕೆ ಉಡುಪಿ, ದಕ್ಷಿಣ ಕನ್ನಡ, ಮೈಸೂರು, ಕೊಡಗು, ರಾಮನಗರ, ಚಾಮರಾಜನಗರ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಐಎಂಡಿ ಅಧಿಕಾರಿಗಳು ಮುನ್ಸೂಚನೆ ನೀಡಿದ್ದಾರೆ. ತುಮಕೂರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆ ಗಳಲ್ಲಿ ಹಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದ್ದು, ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಒಳನಾಡಿನ ಉಳಿದ ಜಿಲ್ಲೆಗಳಲ್ಲಿ ಹಲವೆಡೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಐಎಂಡಿ ಹೇಳಿದೆ. ಉತ್ತರ ಕರಾವಳಿ ತಮಿಳುನಾಡು ಮತ್ತು ಪುದುಚೇರಿಯಲ್ಲಿನ ಫೆಂಗಾಲ್ ಚಂಡಮಾರುತ ಪಶ್ಚಿಮಕ್ಕೆ ಚಲಿಸಿದ್ದು ದುರ್ಬಲಗೊಂಡಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಜನ ಜೀವನ ಅಸ್ತವ್ಯಸ್ತ

ಪರಿಸ್ಥಿತಿ ಎದುರಿಸಲು ಸಜ್ಜಾಗಿದ್ದಾರೆ. ಅಭಯ ತಂಡ, ಸ್ವಚ್ಛತಾ ಸಿಬ್ಬಂದಿ, ಪರಿಸರ ಇಂಜಿನಿಯರ್‌ಗಳು ನಿರಂತರವಾಗಿ ನಗರ ಪ್ರದಕ್ಷಿಣೆ ಮೂಲಕ ಅವಶ್ಯ ಕ್ರಮ ಕೈಗೊಂಡಿದ್ದಾರೆ. ಒಂದು ವೇಳೆ ಮಳೆ ಪ್ರಮಾಣ ಜಾಸ್ತಿಯಾಗಿ ಅವಾಂತರಗಳೇನಾದರೂ ಸಂಭವಿಸಿದ್ದಲ್ಲಿ ತಕ್ಷಣ ಪರಿಹಾರ ಕಾರ್ಯಕ್ಕೂ ಸಜ್ಜಾಗಿರುವುದಾಗಿ ಮೈಸೂರು ಮಹಾನಗರಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್ ತಿಳಿಸಿದ್ದಾರೆ. ಮಳೆಯಿಂದಾಗಿ ‘ಶಕ್ತಿ’ಯಿಂದ ಶಕ್ತಿಗುಂದಿದ್ದ ಆಟೋ, ಟ್ಯಾಕ್ಸಿಗಳಿಗೆ ಬಂಪರ್ ಸಂಪಾದನೆ. ಕಳೆಗುಂದಿದ್ದ ಅವರ ಮುಖದಲ್ಲಿ ಇಂದು ಒಂದು ರೀತಿ ನೆಮ್ಮದಿಯ ಚಹರೆ ಕಂಡು ಬರುತ್ತಿತ್ತು.

ಅದಾನಿ, ಸಂಭಾಲ್ ಹಿಂಸಾಚಾರ ಬಗ್ಗೆ ವಿಪಕ್ಷಗಳ ಪ್ರತಿಭಟನೆ, ಗದ್ದಲ

ಲೋಕಸಭೆ, ರಾಜ್ಯಸಭೆ ದಿನದ ಮಟ್ಟಿಗೆ ಮುಂದೂಡಿಕೆ

ನವದೆಹಲಿ: ಉದ್ಯಮಿ ಗೌತಮ್ ಅದಾನಿ ವಿವಾದ ಹಾಗೂ ಉತ್ತರ ಪ್ರದೇಶದ ಸಂಭಾಲ್ ನಲ್ಲಿ ಇತ್ತೀಚಿಗೆ ಸಂಭವಿಸಿದ ಹಿಂಸಾಚಾರ, ಮತ್ತಿತರ ವಿಚಾರಗಳ ಚರ್ಚೆಗೆ ವಿರೋಧ ಪಕ್ಷಗಳು ಇಂದು ಕೂಡಾ ಪ್ರತಿಭಟನೆ ಮುಂದುವರೆಸಿದ್ದರಿಂದ ಗದ್ದಲ ಉಂಟಾಗಿ ಲೋಕಸಭೆ ಹಾಗೂ ರಾಜ್ಯಸಭೆಯನ್ನು ದಿನದ ಮಟ್ಟಿಗೆ ಸೋಮವಾರ ಮುಂದೂಡಲಾಯಿತು.

ವಾರಾಂತ್ಯದ ವಿರಾಮದ ಬಳಿಕ ಲೋಕಸಭೆ ಸಮಾವೇಶಗೊಳ್ಳುತ್ತಿದ್ದಂತೆಯೇ, ಕಾಂಗ್ರೆಸ್ ಸೇರಿದಂತೆ ಅನೇಕ ವಿಪಕ್ಷಗಳ ಸದಸ್ಯರು, ಲಂಚ ಪ್ರಕರಣದಲ್ಲಿ ಅಮೆರಿಕಾ ನ್ಯಾಯಾಲಯದಿಂದ ಉದ್ಯಮಿ ಗೌತಮ್ ಅದಾನಿಗೆ ಬಂಧನದ ವಾರೆಂಟ್ ಸೇರಿದಂತೆ ಅನೇಕ ವಿಚಾರಗಳನ್ನು ಪ್ರಸ್ತಾಪಿಸಿದರು. ಕೆಲ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿದರೆ, ಮತ್ತೆ ಕೆಲವರು ಘೋಷಣೆ ಕೂಗಿ ಗದ್ದಲವನ್ನುಂಟು ಮಾಡಿದರು. ಪ್ರಶ್ನೋತರ ಅವಧಿಗೆ ಅವಕಾಶ ಮಾಡಿಕೊಡಿ ನಂತರ ಅವರು ಪ್ರಸ್ತಾಪಿಸಿದ ವಿಚಾರವನ್ನು ಚರ್ಚೆಗೆ ಕೈಗೆತ್ತಿಕೊಳ್ಳುತ್ತಿದಾಗಿ ಸ್ಪೀಕರ್ ಓಂ ಬಿರ್ಲಾ ಪ್ರತಿಪಕ್ಷಗಳ ಸದಸ್ಯರಿಗೆ ಮನವಿ ಮಾಡಿದರು.

ಧರಣಿ ನಡುವೆ ಒಂದು ಪ್ರಶ್ನೋತ್ತರವನ್ನು ಕೈಗೆತ್ತಿಕೊಳ್ಳಲಾಯಿತು. ಆದರೆ ಸ್ಪೀಕರ್ ಮನವಿಯನ್ನು ನಿರ್ಲಕ್ಷಿಸಿದ ಪ್ರತಿಪಕ್ಷಗಳ ಸದಸ್ಯರು ಪ್ರತಿಭಟನೆ, ಗದ್ದಲ ಮುಂದುವರೆಸಿದ್ದರಿಂದ ಕಲಾಪವನ್ನು 12 ಗಂಟೆಯವರೆಗೂ ಮುಂದೂಡಲಾಯಿತು. ಬಳಿಕ ಕಲಾಪ ಸಮಾವೇಶಗೊಂಡಾಗಲೂ ವಿಪಕ್ಷಗಳು ಪ್ರತಿಭಟನೆ ಮುಂದುವರೆಸಿದ್ದರಿಂದ ದಿನದ ಮಟ್ಟಿಗೆ ಕಲಾಪವನ್ನು ಮುಂದೂಡಲಾಯಿತು.

ರುದ್ರಭೂಮಿಯಲ್ಲಿ ಕೊಳವೆಬಾವಿ ಕಾಮಗಾರಿಗೆ ಚಾಲನೆ



ಚಾಮರಾಜ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಅನುದಾನದಲ್ಲಿ ಜೋಡಿ ತೆಂಗಿನಮರ ರುದ್ರಭೂಮಿಯಲ್ಲಿ ಬೋರ್‌ವೆಲ್ ಕೊರೆಯುವ ಕಾಮಗಾರಿಗೆ ಮಾಜಿ ಕಾರ್ಪೋರೇಟರ್ ಡಿ. ನಾಗಭೂಷಣ್, ಯುವ ಕಾಂಗ್ರೆಸ್ ಮುಖಂಡ ಎಂ.ಎಸ್. ದರ್ಶನ್, ಎಂಟಿ ಬ್ಲಾಕ್ ರಮೇಶ್, ಹಿರಿಯ ಮುಖಂಡರಾದ ವೆಂಕಟೇಶ್, ಚಂದ್ರಶೇಖರ್, ಮಂಜುನಾಥ್, ಇಮ್ರಾನ್, ಓಬಿಸಿ ಬ್ಲಾಕ್ ವೆಂಕಟೇಶ್, ನಾಮ ನಿರ್ದೇಶಿತ ಮಾಜಿ ಕಾರ್ಪೋರೇಟರ್ ಎಂ.ಎನ್. ಬಾಲರಾಜ್, ರುದ್ರಭೂಮಿ ಕಾವಲುಗಾರರಾದ ಶ್ಯಾಂಸುಂದರ್, ಮೋಹನ್‌ಕುಮಾರ್ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಿದರು.

ನಿಧನ



ಜಡೆ ಕೃಷ್ಣ

ಮೈಸೂರು, ಡಿ.2– ಮೈಸೂರಿನ ಕುಂಬಾರಕೊಪ್ಪಲು ನಿವಾಸಿ, ಆಟೋ ಚಾಲಕ ಜಡೆ ಕೃಷ್ಣ(53) ಅವರು ಹೃದಯಾಘಾತದಿಂದ ಸೋಮವಾರ ಬೆಳಗ್ಗೆ ನಿಧನರಾದರು.

ಇವರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕುಂಬಾರಕೊಪ್ಪಲು ರುದ್ರಭೂಮಿಯಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುದುಚೇರಿ, ವಿಲ್ಲುಪುರಂನಲ್ಲಿ ಭಾರಿ ಮಳೆ; ಒಂಬತ್ತು ಮಂದಿ ಸಾವು





ಚೆನ್ನೈ: ನಿಧಾನವಾಗಿ ಚಲಿಸುತ್ತಿರುವ 'ಫೆಂಗಲ್' ಚಂಡಮಾರುತ ವಿಲ್ಲುಪುರಂ ಮತ್ತು ಪುದುಚೇರಿಯಲ್ಲಿ ಭಾರಿ ಮಳೆಯನ್ನುಂಟು ಮಾಡಿದೆ. ಶನಿವಾರ ರಾತ್ರಿಯಿಂದ ವಿಲ್ಲುಪುರಂ, ಪುದುಚೇರಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಧಾರಾಕಾರ ಮಳೆಯಾಗಿದೆ. ಇದರ ಪರಿಣಾಮವಾಗಿ ಕೇಂದ್ರಾಡಳಿತ ಪ್ರದೇಶದಲ್ಲಿ ದಾಖಲೆಯ 49 ಸೆಂ.ಮೀ ಮಳೆಯಾಗಿದೆ.

ಇದು ಪುದುಚೇರಿ ಇತಿಹಾಸದಲ್ಲಿಯೇ ಅತ್ಯಧಿಕವಾಗಿದೆ ಮತ್ತು ವಿಲ್ಲುಪುರಂನಲ್ಲಿ ದಾಖಲೆ ಪ್ರಮಾಣದ ಮಳೆಯಾಗಿದ್ದು, ಮೈಲಂನಲ್ಲಿನ ಸ್ವಯಂಚಾಲಿತ ಹವಾಮಾನ ಕೇಂದ್ರದಲ್ಲಿ 51 ಸೆಂ.ಮೀನಷ್ಟು ಮಳೆ ಬಿದ್ದಿದೆ. ಅಧಿಕೃತ ಮೂಲಗಳ ಪ್ರಕಾರ, ಪುದುಚೇರಿಯಲ್ಲಿ ಮಳೆ ಸಂಬಂಧಿತ ಘಟನೆಗಳಲ್ಲಿ ನಾಲ್ವರು, ತಿರುವಣ್ಣಾಮಲೈನಲ್ಲಿ ಮೂವರು ಮತ್ತು ವೆಲ್ಲೂರು ಮತ್ತು ಚೆನ್ನೈ ಜಿಲ್ಲೆಗಳಲ್ಲಿ ತಲಾ ಒಬ್ಬರು ಸಾವನ್ನಪ್ಪಿದ್ದಾರೆ. ಮಳೆಯಿಂದಾಗಿ ವೆಲ್ಲೂರು, ರಾಣಿಪೇಟ್, ತಿರುಪತ್ತೂರ್, ಧರ್ಮಪುರಿ ಮತ್ತು ಸೇಲಂನಲ್ಲಿ ಶಾಲೆಗಳು ಮತ್ತು ತಿರುವಣ್ಣಾಮಲೈ, ಕಡಲೂರು, ವಿಲ್ಲುಪುರಂ, ಪುದುಚೇರಿ ಮತ್ತು ಕೃಷ್ಣಗಿರಿಯಲ್ಲಿ ಶಾಲಾ ಕಾಲೇಜುಗಳಿಗೆ ಸೋಮವಾರ ರಜೆ ಘೋಷಿಸಲಾಗಿತ್ತು. ದಾಖಲೆ ಮಳೆಯಿಂದಾಗಿ ಪುದುಚೇರಿಯಲ್ಲಿನ ಜನವಸತಿ ಪ್ರದೇಶಗಳು ಮತ್ತು ರಸ್ತೆಗಳು ಸಂಪೂರ್ಣವಾಗಿ ಜಲಾವೃತಗೊಂಡಿದ್ದು, ಉಪ್ಪನಾರ್ ಕಾಲುವೆ ತುಂಬಿ ಹರಿಯುತ್ತಿದೆ. ವಿಲ್ಲುಪುರಂ ಜಿಲ್ಲೆಯ ಕೆಲವು ಭಾಗಗಳು ಸಹ ಭಾರಿ ಪ್ರಮಾಣದಲ್ಲಿ ಜಲಾವೃತಗೊಂಡಿವೆ. ಆದಾಗ್ಯೂ, ಮಳೆಗೆ ಸಂಬಂಧಿಸಿದ ಯಾವುದೇ ಸಾವುಗಳು ವರದಿಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪುದುಚೇರಿ, ವಿಲ್ಲುಪುರಂನಲ್ಲಿ ರೆಡ್ ಅಲರ್ಟ್: ಪುದುಚೇರಿಯಲ್ಲಿ ಪತುಕನ್ನು ಮತ್ತು ತಿರುಕಣ್ಣೂರಿನಲ್ಲಿ ಕ್ರಮವಾಗಿ 45 ಸೆಂ.ಮೀ ಮತ್ತು 43 ಸೆಂ.ಮೀ ಮಳೆಯಾಗಿದ್ದರೆ, ಪುದುಚೇರಿ ನಗರ ಮತ್ತು ಬಹೂರ್‌ನಲ್ಲಿ ಕ್ರಮವಾಗಿ 40 ಸೆಂ.ಮೀ ಮತ್ತು 32 ಸೆಂ.ಮೀ ಮಳೆ ದಾಖಲಾಗಿದೆ. ವಿಲ್ಲುಪುರಂ ಜಿಲ್ಲೆಯಲ್ಲಿ, ಮೈಲಂ ಹೊರತುಪಡಿಸಿ, ತಿಂಡಿವನಂ ಮತ್ತು ನೇಮೂರ್‌ನಲ್ಲಿ ಕ್ರಮವಾಗಿ 37cm ಮತ್ತು 35cm ನಷ್ಟು ಭಾರಿ ಮಳೆಯಾಗಿದೆ. ಸೆಮ್ಮೆಡುವಿನಲ್ಲಿ 31 ಸೆಂ.ಮೀ ಮಳೆಯಾಗಿದ್ದರೆ, ವಳವನೂರ್ ಮತ್ತು ಕೊಲಿಯನೂರಿನಲ್ಲಿ 28 ಸೆಂ.ಮೀ ಮತ್ತು ವಿಲ್ಲುಪುರಂನಲ್ಲಿ 27 ಸೆಂ.ಮೀ ಮಳೆಯಾಗಿದೆ. ನೆರೆಯ ಜಿಲ್ಲೆಗಳಾದ ಕಡಲೂರು ಮತ್ತು ತಿರುವಣ್ಣಾಮಲೈನಲ್ಲಿ ಕ್ರಮವಾಗಿ 23 ಸೆಂ.ಮೀ ಮತ್ತು 22 ಸೆಂ.ಮೀ ಮಳೆ ದಾಖಲಾಗಿದೆ. ಸೋಮವಾರ ಕೃಷ್ಣಗಿರಿ, ಧರ್ಮಪುರಿ, ಸೇಲಂ, ನಾಮಕ್ಕಲ್, ತಿರುಚ್ಚಿ, ಕರೂರ್, ಮಧುರೈ ಮತ್ತು ಥೇಣಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ನಿರೀಕ್ಷೆಯಿದೆ. ಮಂಗಳವಾರ ತಿರುಪತ್ತೂರ್, ಕೃಷ್ಣಗಿರಿ, ಧರ್ಮಪುರಿ, ಸೇಲಂ, ನಾಮಕ್ಕಲ್, ಕರೂರ್, ಈರೋಡ್, ನೀಲಗಿರಿ, ಕೊಯಮತ್ತೂರು, ತಿರುಪ್ಪೂರ್, ದಿಂಡಿಗಲ್ ಮತ್ತು ಥೇಣಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ನಿರೀಕ್ಷೆಯಿದೆ.

ಫೆಂಗಲ್ ಎಫೆಕ್ಟ್ ತಿರುವಣ್ಣಾಮಲೈನಲ್ಲಿ ಭೂಕುಸಿತ, ಅವಶೇಷಗಳಡಿ 7 ಮಂದಿ

ರಕ್ಷಣಾ ಕಾರ್ಯಾಚರಣೆ

ತಿರುವಣ್ಣಾಮಲೈ: ಫೆಂಗಲ್ ಚಂಡಮಾರುತದ ಪರಿಣಾಮವಾಗಿ ತಮಿಳನಾಡಿನ ತಿರುವಣ್ಣಾಮಲೈನಲ್ಲಿ ಭೂ ಕುಸಿತ ಸಂಭವಿಸಿದ್ದು, ಏಳು ಮಂದಿ ಭಾನುವಾರ ಸಂಜೆಯಿಂದ ಅವಶೇಷಗಳಡಿ ಸಿಲುಕಿದ್ದಾರೆ. ರಕ್ಷಣಾ ತಂಡವೊಂದು ಸ್ಥಳಕ್ಕೆ ಧಾವಿಸಿದ್ದು, ಸುಮಾರು 12 ಗಂಟೆಯಿಂದ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ ಸಿಬ್ಬಂದಿ, ಕಮಾಂಡೋ, ತಮಿಳುನಾಡಿನ ಅಗ್ನಿಶಾಮಕ ದಳ ಸೇರಿದಂತೆ ಸುಮಾರು 170 ಜನರು ಕಾರ್ಯಾಚರಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಬೃಹತ್ ಗಾತ್ರದ ಕಲ್ಲುಗಳು ಇರುವುದರಿಂದ ಸಂತ್ರಸ್ತರನ್ನು ಪತ್ತೆ ಹಚ್ಚಲು ಸ್ಕ್ಯಾನಿಂಗ್ ಯಂತ್ರಕ್ಕೆ ಕಷ್ಟವಾಗುತ್ತಿದೆ ಎಂದು ರಕ್ಷಣಾಧಿಕಾರಿ ಸುವಿಕ್ಕೈನ್ ರಾಜ್ TNIE ಗೆ ತಿಳಿಸಿದ್ದಾರೆ.

ಅವಶೇಷಗಳಡಿ ಸಿಲುಕಿರುವವರನ್ನು ರಕ್ಷಿಸಲು ಮಾನವಶಕ್ತಿಯನ್ನು ಅವಲಂಬಿಸಿದ್ದೇವೆ. ಸಂತ್ರಸ್ತರು ಕೆಸರಿನಡಿಯಲ್ಲಿ ಹೂತು ಹೋಗಿರುವುದು ದೃಢಪಟ್ಟಿದ್ದು, ಮೊದಲು ಕಲ್ಲುಗಳನ್ನು ತೆಗೆಯುವುದು ನಮ್ಮ ಆದ್ಯತೆಯಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ತಂಡ ಪ್ರಸ್ತುತ ಅವಶೇಷಗಳನ್ನು ತೆರವುಗೊಳಿಸಲು ಅರೆ, ಪಿಕಾಸಿಯಂತಹ ಸರಳ ಸಾಧನಗಳನ್ನು ಬಳಸುತ್ತಿದೆ. ಜೆಸಿಬಿ, ಅಗೆಯುವ ಯಂತ್ರ ತರಲು ಪ್ರಯತ್ನಿಸುತ್ತಿದ್ದೇವೆ, ಆದರೆ ಭಾರವಾದ ಕಲ್ಲುಗಳು ಯಂತ್ರೋಪಕರಣಗಳನ್ನು ನಿರ್ವಹಿಸಲು ಸವಾಲಾಗುತ್ತಿವೆ ಎಂದು ಅಧಿಕೃತ ಮೂಲಗಳು ವಿವರಿಸಿವೆ. ಸಚಿವ ಇ.ವಿ. ವೇಲು, ಕಲೆಕ್ಟರ್ ಬಾಸ್ಕರ ಪಾಂಡಿಯನ್ ಮತ್ತು ಇತರ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರಕ್ಷಣಾ ಕಾರ್ಯಾಚರಣೆಯ ಮೇಲ್ವಿಚಾರಣೆ ಮಾಡಿದರು ಮತ್ತು ಸಾಧ್ಯವಿರುವ ಎಲ್ಲ ಸಹಾಯವನ್ನು ಒದಗಿಸಲಾಗಿದೆ ಎಂದು ಖಾತ್ರಿಪಡಿಸಿಕೊಂಡರು.

ತುಮಕೂರಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣಕ್ಕೆ ಸಿಎಂ ಶಂಕುಸ್ಥಾಪನೆ



ತುಮಕೂರಿನ ಸೋರೆಕುಂಟೆಯಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದರು. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇನ್ನಿತರರು ಉಪಸ್ಥಿತರಿದ್ದಾರೆ.

ತುಮಕೂರು: ತುಮಕೂರಿನ ಸೋರೆಕುಂಟೆಯಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣ ನಿರ್ಮಾಣವಾಗಲಿದ್ದು, ಈ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿದ್ದಾರೆ. ಕ್ರೀಡಾಂಗಣ ನಿರ್ಮಾಣಕ್ಕಾಗಿ ಕೆಎಸ್‌ಸಿಎಗೆ ಸಿಎಂ ಸಿದ್ದರಾಮಯ್ಯ 50 ಎಕರೆ ಪ್ರದೇಶವನ್ನು ಹಸ್ತಾಂತರಿಸಿದ್ದಾರೆ.

ಕಾರ್ಯಕ್ರಮದಲ್ಲಿ ಮಾತನಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲೆಯ ಅಭಿವೃದ್ಧಿಗೆ ಈ ಯೋಜನೆಯು ಸಾಮರ್ಥ್ಯ ಹೊಂದಿದೆ ಎಂದು ಹೇಳಿದ್ದಾರೆ.

50 ಎಕರೆ ಪ್ರದೇಶ ಹಸ್ತಾಂತರ

ಅಂತಾರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂ ನಿರ್ಮಾಣಕ್ಕಾಗಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಗೆ 50 ಎಕರೆ ಭೂಮಿಯನ್ನು ಮಂಜೂರು ಮಾಡಿದ್ದೇವೆ. ಈ ಉಪಕ್ರಮ ಈ ಪ್ರದೇಶದ ಆರ್ಥಿಕ ಬೆಳವಣಿಗೆ ಮತ್ತು ಒಟ್ಟಾರೆ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು.

ಕ್ರಿಕೆಟ್ ಆಸಕ್ತರ ನಿರೀಕ್ಷೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಕೆಎಸ್‌ಸಿಎ ನಿರ್ಮಾಣವನ್ನು ತ್ವರಿತಗೊಳಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಇದೇ ವೇಳೆ ಒತ್ತಾಯಿಸಿದ್ದಾರೆ. ಮೈಸೂರಿನಲ್ಲೂ ಇದೇ ಯೋಜನೆಗೆ ಭೂಮಿ ಮಂಜೂರು ಮಾಡುವುದಾಗಿ ಸಿದ್ದರಾಮಯ್ಯ ಭರವಸೆ ನೀಡಿದರು.

ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಜಿ.ಪರಮೇಶ್ವರ, ಸಹಕಾರ ಸಚಿವ ಕೆ.ಎನ್.ರಾಜಣ್ಣ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ರಾಜ್ಯ ಸರ್ಕಾರದ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ, ಸ್ಥಳೀಯ ಶಾಸಕರು, ಕೆಎಸ್‌ಸಿಎ ಅಧ್ಯಕ್ಷ ರಘುರಾಮ ಭಟ್ ಸೇರಿದಂತೆ ಅಧಿಕಾರಿಗಳು ಉಪಸ್ಥಿತರಿದ್ದರು.

ಬರೀ ವಿಜಯೇಂದ್ರ ಅಲ್ಲ, ಅವರ ಅಪ್ಪ ಕೂಡ ನನ್ನ ಬಳಿ ಬಂದು ಸಹಿ ಹಾಕಿಸಿಕೊಂಡಿದ್ದರು!

ಯತ್ನಾಳ್‌ಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟಾಂಗ್

ಬೆಂಗಳೂರು,ಡಿ2–ಕರ್ನಾಟಕ ಬಿಜೆಪಿಯ ಎರಡು ಬಣಗಳ ಘರ್ಷಣೆ ದೆಹಲಿ ಅಂಗಣ ತಲುಪಿದೆ. ಹಿರಿಯ ನಾಯಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಬಿಜೆಪಿಯ ಶಿಸ್ತು ಸಮಿತಿ ಶೋಕಾಸ್ ನೋಟಿಸ್ ನೀಡಿದೆ. ಯತ್ನಾಳ್ ಮತ್ತು ತಂಡ ದೆಹಲಿಯಲ್ಲಿದ್ದು, ವರಿಷ್ಠರನ್ನು ಭೇಟಿಯಾಗಲಿದ್ದಾರೆ.

ಈ ನಡುವೆ ಕೆಪಿಸಿಸಿ ಅಧ್ಯಕ್ಷರೂ ಆದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ಯತ್ನಾಳ್ ಅವರ ಆರೋಪವೊಂದಕ್ಕೆ ಪ್ರತಿಕ್ರಿಯಿಸಿದ್ದಾರೆ. ವಿಜಯೇಂದ್ರ ಮಾತ್ರವಲ್ಲ ಅವರ ತಂದೆಯೂ ನನ್ನ ಬಳಿ ಬಂದಿದ್ದರು. ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದ್ದಾರೆ. ಆ ಮೂಲಕ ಯತ್ನಾಳ್ ಅವರಿಗೆ ಟಾಂಗ್ ನೀಡಿದ್ದಾರೆ.

ಕೆಪಿಸಿಸಿ ಅಧ್ಯಕ್ಷರು ಹಾಗೂ ರಾಜ್ಯಾಧ್ಯಕ್ಷ ವಿಜಯೇಂದ್ರ ನಡುವಿನ ಸ್ನೇಹದ ಬಗ್ಗೆ ಹಾಗೂ ಡಿ.ಕೆ.ಶಿವಕುಮಾರ್ ಅವರ ಮನೆಗೆ ತೆರಳಿ ವಿಜಯೇಂದ್ರ 20 ಪತ್ರಗಳಿಗೆ ಸಹಿ ಹಾಕಿಸಿಕೊಂಡಿರುವ



ವಿಡಿಯೋಗಳಿದ್ದು, ಅವುಗಳನ್ನು ಬಹಿರಂಗ ಮಾಡುತ್ತೇನೆ ಎಂದು ಬಸನಗೌಡ ಪಾಟೀಲ್ ಯತ್ನಾಳ್ ಆರೋಪಿಸಿದ್ದರು.

ಇದ'ಕ್ಕೆ ಪ್ರತಿಕ್ರಿಯಿಸಿರುವ ಡಿ.ಕೆ.ಶಿವಕುಮಾರ್, ನಾನು ಈ ರಾಜ್ಯದ ಉಪಮುಖ್ಯಮಂತ್ರಿ. ಈ ಹಿಂದೆ ಯಡಿಯೂರಪ್ಪನವರು ಅವರ ಕ್ಷೇತ್ರದ ಕೆಲಸಗಳ ಕುರಿತು ಒಂದಷ್ಟು ಪತ್ರಗಳಿಗೆ ಸಹಿ ಹಾಕಿಸಿಕೊಂಡು ಹೋಗಿದ್ದರು ಎಂದು ಹೇಳಿದ್ದಾರೆ.

ಯಡಿಯೂರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ನನ್ನ ಕ್ಷೇತ್ರದ ಕೆಲಸವನ್ನು ಮಾಡಿಕೊಡುವುದಾಗಿ ಸದನದಲ್ಲಿ ಮಾತು ಕೊಟ್ಟಿದ್ದರು. ಆದರೆ ಮಾಡಿಕೊಟ್ಟಿರಲಿಲ್ಲ. ಆದ ಕಾರಣ ನಾನೇ ಖುದ್ದಾಗಿ ಭೇಟಿ ಮಾಡಿದ್ದೆ. ನಾನು ಅವರ ಕ್ಷೇತ್ರಕ್ಕೆ ಕೆಲಸ ಮಾಡಿಕೊಡಬಹುದು, ಮುಂದಕ್ಕೂ ಮಾಡಬಹುದು ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿರುಗೇಟು ನೀಡಿದ್ದಾರೆ.

ಆರೋಪ ಮಾಡುವ ಮೊದಲು ಆಲೋಚಿಸಿ ಹೇಳಿಕೆಯನ್ನು ನೀಡಬೇಕು. ನಾನು ಸಚಿವನಾಗಿ ಪ್ರತಿಜ್ಞಾವಿಧಿ ಸ್ವೀಕಾರ ಮಾಡುವಾಗ ಯಾವುದೇ ತಾರತಮ್ಯವಿಲ್ಲದೆ, ಸಂವಿಧಾನದ ಆಶಯಗಳ ಅಡಿಯಲ್ಲಿ ಕೆಲಸ ಮಾಡುತ್ತೇನೆ ಎಂದು ಪ್ರಮಾಣವಚನ ತೆಗೆದುಕೊಂಡಿರುತ್ತೇವೆ. ಕೆಲಸ ಮಾಡಿಕೊಡುವುದು ನನ್ನ ಕರ್ತವ್ಯ ಎಂದು ಡಿಕೆಶಿ ಹೇಳಿದ್ದಾರೆ.

ನಾನು ಎಂದಿಗೂ ವ್ಯಕ್ತಿಗತವಾಗಿ ಹೋಗುವವನಲ್ಲ. ವ್ಯಕ್ತಿ ಪೂಜೆಯನ್ನೂ ಮಾಡುವವನಲ್ಲ. ಬದಲಾಗಿ ಪಕ್ಷದ ಪೂಜೆ ಮಾಡುವವನು. ನಾನು ಇಲ್ಲದೇ ಹೋದರೂ ಪಕ್ಷ ಇದ್ದೇ ಇರುತ್ತದೆ. ಕೊನೆಯದಾಗಿ ಪಕ್ಷವೇ ಮುಖ್ಯ ಎಂದು ಡಿ.ಕೆ.ಶಿವಕುಮಾರ್ ಹೇಳಿದ್ದಾರೆ.

ಬ್ಯಾರಿಕೇಡ್‌ಗಳ ಮುರಿದು ದೆಹಲಿಯತ್ತ ರೈತರು



ನವದೆಹಲಿ: ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ(ಎಂಎಸ್‌ಪಿ)ಗೆ ಕಾನೂನು ಖಾತರಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿರುವ ರೈತರು ಸೋಮವಾರ 'ದೆಹಲಿ ಚಲೋ' ಘೋಷಿಸಿದ್ದು, ನೋಯ್ಡಾದ ದಲಿತ ಪ್ರೇರಣಾ ಸ್ಥಳದ ಬಳಿ ಪೊಲೀಸ್ ತಡೆಗೋಡೆಗಳನ್ನು ಮುರಿದು ಕಡೆಗೆ ರಾಷ್ಟ್ರ ರಾಜಧಾನಿಯತ್ತ ಸಾಗಿದರು.

ಭಾರತೀಯ ಕಿಸಾನ್ ಪರಿಷತ್, ಕಿಸಾನ್ ಮಜ್ದೂರ್ ಮೋರ್ಚಾ, ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಇತರ ರೈತ ಸಂಘಟನೆಗಳು ಇಂದು ದೆಹಲಿಯತ್ತ ಪ್ರತಿಭಟನಾ ಮೆರವಣಿಗೆ ನಡೆಸುವುದಾಗಿ ಘೋಷಿಸಿದ್ದವು.

ರೈತ ನಾಯಕ ಸುಖ್ಬೀರ್ ಖಲೀಫಾ ನೇತೃತ್ವದಲ್ಲಿ ನೊಯ್ಡಾದ ಮಹಾಮಾಯಾ ಮೇಲ್ಸೇತುವೆಯ ಕೆಳಗೆ ತನ್ನ ಪ್ರತಿಭಟನಾ ಮೆರವಣಿಗೆಯನ್ನು ಆರಂಭಿಸಿತು.

ನಾವು ದೆಹಲಿಯತ್ತ ತೆರಳಲು ಸಿದ್ಧರಿದ್ದೇವೆ. ನಾಳೆ, ಡಿ.2ರಂದು, ನಾವು ಮಹಾಮಾಯಾ ಫ್ಲೈಓವರ್ (ನೋಯ್ಡಾದಲ್ಲಿ)ನಿಂದ ದೆಹಲಿ ಕಡೆಗೆ ನಮ್ಮ ಪ್ರತಿಭಟನಾ ಮೆರವಣಿಗೆ ಪ್ರಾರಂಭಿಸುತ್ತೇವೆ. ಮಧ್ಯಾಹ್ನದ ಹೊತ್ತಿಗೆ ನಾವೆಲ್ಲರೂ ದೆಹಲಿ ತಲುಪುತ್ತೇವೆ ಎಂದು ಭಾನುವಾರ ಹೇಳಿದ್ದರು. ರೈತರು ದೆಹಲಿ ಚಲೋ ಚಳವಳಿ ನಡೆಸುತ್ತಿರುವ ಪರಿಣಾಮ ನೊಯ್ಡಾದ ಚಿಲ್ಲಾ ಗಡಿಯಲ್ಲಿ ಭಾರಿ ವಾಹನ ದಟ್ಟಣೆ ಉಂಟಾಗಿದ್ದು, ವಾಹನಗಳು ಕಿಲೋಮೀಟರ್ ಗಟ್ಟಲೆ ಸಾಲುಗಟ್ಟಿ ನಿಂತಿರುವ ದೃಶ್ಯಗಳು ಡ್ರೋನ್ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ರೈತರು ಕಳೆದ ಫೆಬ್ರವರಿ 13 ರಿಂದ ಪಂಜಾಬ್ ಮತ್ತು ಹರಿಯಾಣ ನಡುವಿನ ಶಂಭು ಮತ್ತು ಖಾನೌರಿ ಗಡಿಯಲ್ಲಿ ಮೊಕ್ಕಾಂ ಹೂಡಿದ್ದಾರೆ. ಇದೀಗ ಎಸ್‌ಕೆಎಂ (ರಾಜಕೀಯೇತರ) ಮತ್ತು ಕೆಎಂಎಂ ನೇತೃತ್ವದಲ್ಲಿ ಸಂಸತ್ ಸಂಕೀರ್ಣದ ಕಡೆಗೆ ರೈತರು 'ದೆಹಲಿ ಚಲೋ' ನಡೆಸಲು ಆರಂಭಿಸಿದ್ದಾರೆ.

ರೈತರು ಐದು ಪ್ರಮುಖ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟಿದ್ದು, ಹಳೆ ಸ್ವಾಧೀನ ಕಾನೂನಿನಡಿಯಲ್ಲಿ ಶೇ.10ರಷ್ಟು ನಿವೇಶನ ಹಂಚಿಕೆ ಮತ್ತು ಶೇ.64.7ರಷ್ಟು ಪರಿಹಾರ, ಮಾರುಕಟ್ಟೆ ದರದ ನಾಲ್ಕು ಪಟ್ಟು ಪರಿಹಾರ ಮತ್ತು 2014 ರ ಜನವರಿ 1, 2014ರ ನಂತರ ಭೂರಹಿತರ ಮಕ್ಕಳಿಗೆ ಸ್ವಾಧೀನಪಡಿಸಿಕೊಂಡಿರುವ ಭೂಮಿಗೆ 20 ರಷ್ಟು ನಿವೇಶನಗಳನ್ನು ನೀಡಬೇಕು. ರೈತರಿಗೆ ಉದ್ಯೋಗ ಮತ್ತು ಪುನರ್ವಸತಿ ಪ್ರಯೋಜನಗಳನ್ನು ನೀಡಬೇಕು, ಹೈಪವರ್ ಸಮಿತಿಯು ಅಂಗೀಕರಿಸಿದ ಸಮಸ್ಯೆಗಳ ಬಗ್ಗೆ ಸರ್ಕಾರಿ ಆದೇಶಗಳನ್ನು ನೀಡಬೇಕು ಮತ್ತು ಜನವಸತಿ ಪ್ರದೇಶಗಳ ಸರಿಯಾದ ಇತ್ಯರ್ಥ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ



ಮೈಸೂರಿನ ಆಲನಹಳ್ಳಿಯಲ್ಲಿರುವ ಶಾಶ್ವತ ಸೇವಾ ಶಾಲೆಯಲ್ಲಿ ಆಯೋಜಿಸಿದ್ದ 69ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 624 ಅಂಕ ಪಡೆದ ರಾಜ್ಯದ ವಿವಿಧ ಜಿಲ್ಲೆಯ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಲಾಯಿತು. ನಿವೃತ್ತ ಪ್ರಾಂಶುಪಾಲರು, ಬರಹಗಾರರಾದ ಶಿವಕುಮಾರಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಚಿಕಿತ್ಸೆಗಾಗಿ ಆರ್ಥಿಕ ನೆರವು...



ಕಿಡ್ನಿ ವೈಫಲ್ಯದಿಂದ ಬಳಲುತ್ತಿದ್ದ ಜಯಪುರದ ರವಿ ಎಂಬವವರಿಗೆ ಸಮಾಜ ಸೇವಕ ಎಸ್. ಶ್ರೀಕಾಂತ್ ವೈಯಕ್ತಿಕವಾಗಿ ಆರ್ಥಿಕ ನೆರವಿನ ಚೆಕ್ ನೀಡಿ, ಚಿಕಿತ್ಸೆಗೆ ನೆರವಾದರು. ಈ ವೇಳೆ ಡೇರಿ ಬಸವಣ್ಣ, ನಾಗಣ್ಣ, ಶ್ರೀಕಾಂತ್ ಅಭಿಮಾನಿ ಬಳಗದ ಸಣ್ಣಸ್ವಾಮಿ, ಶಿವರಾಜು, ಸಂತೋಷ್ ಕುಮಾರ್ ಗುಜ್ಜನಾಯಕ, ರಂಗಸ್ವಾಮಿ ಇತರರಿದ್ದರು.

ದೇಶ - ವಿದೇಶ

ಕುವೈತ್ ವಿಮಾನ ನಿಲ್ದಾಣದಲ್ಲೇ 13 ಗಂಟೆ ಕಾಲ ಕಳೆದ ಭಾರತೀಯರು

ಕುವೈತ್: ಮುಂಬೈನಿಂದ ಮ್ಯಾಂಚೆಸ್ಟರ್‌ಗೆ ತೆರಳುತ್ತಿದ್ದ



ವಿಮಾನ ತಾಂತ್ರಿಕ ದೋಷದಿಂದ ತುರ್ತು ಭೂಸ್ಪರ್ಶ ಮಾಡಿದ ನಂತರ ಸುಮಾರು 60 ಭಾರತೀಯ ಪ್ರಯಾಣಿಕರು 13 ಗಂಟೆಗಳ ಕಾಲ ಕುವೈತ್ ವಿಮಾನ ನಿಲ್ದಾಣದಲ್ಲಿ ಪರಿತಪಿಸುವಂತಾಯಿತು.

ಅಂದಹಾಗೆ ಇಂಜಿನ್‌ನಲ್ಲಿ ಬೆಂಕಿ ಕಾಣಿಸಿಕೊಂಡ ನಂತರ ಗಲ್ಫ್ ಏರ್ ವಿಮಾನ ಕುವೈತ್ ವಿಮಾನ ನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಬೇಕಾಯಿತು. ಯುರೋಪಿಯನ್ ಯೂನಿಯನ್, ಅಮೆರಿಕದ ಪ್ರಯಾಣಿಕರಿಗೆ ಮಾತ್ರ ವಿಮಾನಯಾನ ಸಂಸ್ಥೆಯಿಂದ ವಸತಿ ಸೌಕರ್ಯ ನೀಡಿದ್ದು, ಭಾರತ, ಪಾಕಿಸ್ತಾನಿ ಮತ್ತು ಇತರ ಆಗ್ನೇಯ ಏಷ್ಯಾದ ಪಾಸ್‌ಪೋರ್ಟ್‌ಗಳನ್ನು ಹೊಂದಿರುವ ಪ್ರಯಾಣಿಕರು ಪಕ್ಷಪಾತ ಮತ್ತು ಕಿರುಕುಳಕ್ಕೆ ಒಳಗಾಗಿದ್ದಾರೆ. ಈ ವೇಳೆ ಮಧ್ಯ ಪ್ರವೇಶಿಸಿದ ಕುವೈತ್‌ನಲ್ಲಿರುವ ಭಾರತೀಯ ರಾಯಭಾರಿ ಅಧಿಕಾರಿ ತಂಡ, ವಿಮಾನ ನಿಲ್ದಾಣಕ್ಕೆ ತಲುಪಿ ಪ್ರಯಾಣಿಕರಿಗೆ ನೆರವಾಗಿದ್ದಾರೆ. ವಿಮಾನಯಾನ ಸಿಬ್ಬಂದಿಯೊಂದಿಗೆ ಮಾತುಕತೆ ನಡೆಸಿದ್ದು, 2 ವಿಮಾನ ನಿಲ್ದಾಣದ ಲಂಗೇಜ್‌ನಲ್ಲಿ ಪ್ರಯಾಣಿಕರು ತಂಗಲು ಅವಕಾಶ ಮಾಡಿಕೊಟ್ಟಿದೆ

ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗಬಾರದು; ರೈತರಿಗೆ ಸುಪ್ರೀಂ ಸೂಚನೆ

ನವದೆಹಲಿ: ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ದಲ್ಲೆವಾಲ್ ಖಾನೌರಿ



ಗಡಿಯಲ್ಲಿ ರೈತರು ಆಮರಣಾಂತ ಉಪವಾಸ ನಡೆಸುತ್ತಿದ್ದಾರೆ. ಏತನ್ಮಧ್ಯೆ ಸುಪ್ರೀಂ ಕೋರ್ಟ್ ಸೋಮವಾರ ಪಂಜಾಬ್ ರೈತ ನಾಯಕ ಜಗಜಿತ್ ಸಿಂಗ್ ದಲ್ಲೆವಾಲ್ ಅವರಿಗೆ ಹೆದ್ದಾರಿಯನ್ನು ತಡೆಯದಂತೆ ಪ್ರತಿಭಟನಾಕಾರರಿಗೆ ತಿಳಿಹೇಳಲು ಮತ್ತು ಜನರಿಗೆ ತೊಂದರೆಯಾಗದಂತೆ ಪ್ರತಿಭಟನೆಗೆ ಸೂಚನೆ ನೀಡಿದೆ. ದಲ್ಲೆವಾಲ್ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಉಜ್ವಲ್ ಭುಯಾನ್ ಅವರಿದ್ದ ಪೀಠ ವಿಲೇವಾರಿ ಮಾಡಿದೆ. ನ.26 ರಂದು ಪಂಜಾಬ್–ಹರಿಯಾಣ ಗಡಿಯಲ್ಲಿರುವ ಖಾನೌರಿ ಪ್ರತಿಭಟನಾ ಸ್ಥಳದಿಂದ ಜಗಜಿತ್ ದಲ್ಲೆವಾಲ್ ಅವರನ್ನು ತೆರವು ಮಾಡಲಾಗಿತ್ತು. ಈ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಾಲಯ, ಅವರನ್ನು ಬಿಡುಗಡೆ ಮಾಡಿರುವುದನ್ನು ನಾವು ನೋಡಿದ್ದೇವೆ ಮತ್ತು ಆಮರಣಾಂತ ಉಪವಾಸವನ್ನು ಕೊನೆಗೊಳಿಸುವಂತೆ ಅವರು ಶನಿವಾರ ಸಹ ಪ್ರತಿಭಟನಾಕಾರರನ್ನು ಮನವೊಲಿಸಿದ್ದಾರೆ. ರೈತರು ಎತ್ತಿರುವ ಸಮಸ್ಯೆಗಳನ್ನು ನ್ಯಾಯಾಲಯದ ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಮತ್ತು ಪರಿಗಣಿಸಲಾಗುತ್ತಿದೆ ಎಂದು ಪೀಠ ಹೇಳಿದೆ.

ಬಾಂಗ್ಲಾದೇಶದಲ್ಲಿ ಭಾರತೀಯ ಹಿಂದೂ ಯುವಕನ ಮೇಲೆ ಹಲ್ಲೆ

ಢಾಕಾ: ಬಾಂಗ್ಲಾದೇಶದಲ್ಲಿ ಹಿಂದೂಗಳು ಸೇರಿದಂತೆ ಇನ್ನಿತರ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದಾಳಿಗಳ ನಡುವೆ ಕೋಲ್ಕತ್ತಾ ಮೂಲದ ಯುವಕನೋರ್ವ ಢಾಕಾದಲ್ಲಿ ತಾನು ಎದುರಿಸಿದ ಸಂಕಷ್ಟವನ್ನು ಹಂಚಿಕೊಂಡಿದ್ದಾರೆ. ಪಶ್ಚಿಮ ಬಂಗಾಳದ ರಾಜಧಾನಿಯ ಉತ್ತರದ ಅಂಚಿನಲ್ಲಿರುವ ಬೆಲ್ಘಾರಿಯಾ ಪ್ರದೇಶದಿಂದ ಬಂದ ಸಯಾನ್ ಘೋಷ್(22) ಬಾಂಗ್ಲಾದೇಶಕ್ಕೆ ಹೋಗಿ, ಸ್ನೇಹಿತನ ಮನೆಯಲ್ಲಿದ್ದರು. ನಾನು ಮತ್ತು ನನ್ನ ಸ್ನೇಹಿತ ಅಡ್ಡಾಡಲು ಹೊರಟಿದ್ದಾಗ ನಾಲ್ಕೈದು ಯುವಕರ ಗುಂಪು ನನ್ನನ್ನು ಅಡ್ಡಗಟ್ಟಿದರು. ನಾನು ಅವರಿಗೆ ಭಾರತದಿಂದ ಬಂದವನು ಮತ್ತು ಹಿಂದೂ ಎಂದು ಹೇಳಿದಾಕ್ಷಣ ಅವರು ನನಗೆ ಒದೆಯಲು ಮತ್ತು ಗುದ್ದಲು ಪ್ರಾರಂಭಿಸಿದರು. ನನ್ನನ್ನು ಉಳಿಸಲು ಪ್ರಯತ್ನಿಸಿದ ನನ್ನ ಸ್ನೇಹಿತನ ಮೇಲೂ ದಾಳಿ ಮಾಡಿದರು ಎಂದು ಘೋಷ್ ಪಿಟಿಐಗೆ ತಿಳಿಸಿದ್ದಾರೆ. ಎರಡು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನಿರಾಕರಿಸಲಾಯಿತು. ಅಂತಿಮವಾಗಿ ಢಾಕಾ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಗೆ ಹೋದೆವು ಎಂದು ಘೋಷ್ ಹೇಳಿದ್ದಾರೆ. ನನ್ನ ಹಣೆ ಮತ್ತು ತಲೆಯ ಮೇಲೆ ಹಲವಾರು ಹೊಲಿಗೆಗಳನ್ನು ಹಾಕಲಾಗಿದೆ ಮತ್ತು ನನ್ನ ಬಾಯಿಗೆ ಗಾಯವಾಗಿತ್ತು ಎಂದು ಘೋಷ್ ತಾವು ಎದುರಿಸಿದ ಭೀಕರ ಸ್ಥಿತಿಯನ್ನು ಬಿಚ್ಚಿಟ್ಟಿದ್ದಾರೆ.

ಜಾಮೀನು ದೊರೆತ ಬೆನ್ನಲ್ಲೇ ಸೆಂಥಿಲ್ ಬಾಲಾಜಿಗೆ ಸಚಿವ ಸ್ಥಾನ: ಸುಪ್ರೀಂಕೋರ್ಟ್ ಅಚ್ಚರಿ

ನವದೆಹಲಿ: ಉದ್ಯೋಗಕ್ಕಾಗಿ ಲಂಚ ಸ್ವೀಕಾರ ಮಾಡಿದ



ಪ್ರಕರಣದಲ್ಲಿ ಬಂಧನಕ್ಕೀಡಾಗಿದ್ದ ಡಿಎಂಕೆ ನಾಯಕ ಸೆಂಥಿಲ್ ಬಾಲಾಜಿ ಜಾಮೀನು ದೊರೆತ ಕೆಲವೇ ಗಂಟೆಗಳಲ್ಲಿ ಮತ್ತೆ ಸಚಿವ ಸ್ಥಾನ ಪಡೆದಿದ್ದು, ಈ ಕುರಿತು ಸ್ವತಃ ಸುಪ್ರೀಂಕೋರ್ಟ್ ಕೂಡ ಅಚ್ಚರಿ ವ್ಯಕ್ತಪಡಿಸಿದೆ. ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಜಾಮೀನು ಪಡೆದ ಕೂಡಲೇ ಸೆಂಥಿಲ್ ಬಾಲಾಜಿ ಅವರನ್ನು ತಮಿಳುನಾಡಿನಲ್ಲಿ ಸಚಿವರನ್ನಾಗಿ ನೇಮಿಸಿದ್ದು, ಸುಪ್ರೀಂಕೋರ್ಟ್ ಆಶ್ಚರ್ಯ ವ್ಯಕ್ತಪಡಿಸಿದೆ. ನ್ಯಾಯಮೂರ್ತಿಗಳಾದ ಅಭಯ್ ಎಸ್ ಓಕಾ, ಅಗಸ್ಟಿನ್ ಜಾರ್ಜ್ ಮಾಸಿಹ್ ಅವರ ಪೀಠವು ಇಂದಿನ ವಿಚಾರಣೆಯಲ್ಲಿ ಈ ಬಗ್ಗೆ ಅಚ್ಚರಿ ವ್ಯಕ್ತಪಡಿಸಿದೆ. ನಾವು ಜಾಮೀನು ಮಂಜೂರು ಮಾಡಿದೆವು. ನೀವು ಮರುದಿನವೇ ಸಚಿವರಾದಿರಿ. ನಿಮ್ಮ ಈಗಿನ ಹಿರಿಯ ಸಂಪುಟ ಸಚಿವ ಹುದ್ದೆಯಿಂದ ಸಾಕ್ಷಿಗಳು ಒತ್ತಡಕ್ಕೆ ಒಳಗಾಗಿದ್ದಾರೆ ಎಂದು ಯಾರಾದರೂ ಭಾವಿಸಬಹುದಾಗಿದೆ. ಏನಾಗುತ್ತಿದೆ ಇಲ್ಲಿ? ಎಂದು ನ್ಯಾ. ಓಕಾ ಪ್ರಶ್ನಿಸಿದ್ದಾರೆ. ಅಂತೆಯೇ ಸೆಂಥಿಲ್ ಬಾಲಾಜಿಗೆ ಜಾಮೀನು ಮಂಜೂರಾದ ನಂತರ, ಸಾಕ್ಷಿಗಳು ಒತ್ತಡಕ್ಕೆ ಒಳಗಾಗಿದ್ದಾರೆಯೇ ಎಂಬ ಸಂಗತಿ ಕುರಿತು ನಾವು ಪರಿಶೀಲಿಸುವುದಾಗಿಯೂ ಪೀಠ ಹೇಳಿದೆ.

ಫುಟ್ಬಾಲ್ ಪಂದ್ಯದ ವೇಳೆ ಹಿಂಸಾಚಾರಕ್ಕೆ 100ಕ್ಕೂ ಹೆಚ್ಚು ಬಲಿ

ಕೊನಾಕ್ರಿ: ಫುಟ್ಬಾಲ್ ಪಂದ್ಯವೊಂದು ಅಭಿಮಾನಿಗಳ ನಡುವೆ ಹಿಂಸಾತ್ಮಕ ಮಾರಾಮಾರಿಗೆ ಕಾರಣವಾಗಿದ್ದು, ಬಡಿದಾಟದಲ್ಲಿ ನೂರಕ್ಕೂ ಅಧಿಕ ಮಂದಿ ಜೀವ ಕಳೆದುಕೊಂಡ ಘೋರ ದುರಂತ ಗಿನಿ ದೇಶದಲ್ಲಿ ನಡೆದಿದೆ.



ಪಶ್ಚಿಮ ಆಫ್ರಿಕಾದಲ್ಲಿರುವ ದೇಶದ ಎರಡನೇ ಅತೀ ದೊಡ್ಡ ನಗರವಾದ ಎನ್‌ಝೆರೆಕೋರೆಯಲ್ಲಿ ಭಾನುವಾರ ಫುಟ್ಬಾಲ್ ಪಂದ್ಯದ ವೇಳೆ ಈ ಘರ್ಷಣೆ ನಡೆದಿದೆ. ಆಸ್ಪತ್ರೆಯ ಮೂಲೆ ಮೂಲೆಗಳಲ್ಲಿ ಕಣ್ಣು ಹಾಯಿಸಿದ ಕಡೆಯೆಲ್ಲ ದೇಹಗಳನ್ನು ಸಾಲಾಗಿ ಇರಿಸಿರುವುದು ಕಾಣಿಸುತ್ತದೆ. ಶವಾಗಾರಗಳು ಭರ್ತಿಯಾಗಿವೆ. ಗಾಯಾಳುಗಳು ಹಜಾರಗಳಲ್ಲಿ ಮಲಗಿದ್ದಾರೆ ಎಂದು ಆಸ್ಪತ್ರೆಯೊಂದರ ವೈದ್ಯರು ತಿಳಿಸಿದ್ದಾರೆ. ಸುಮಾರು ನೂರು ಮಂದಿ ಸತ್ತಿದ್ದಾರೆ ಎಂದು ಅವರು ಹೇಳಿದ್ದಾರೆ. ಸ್ಥಳೀಯ ಆಸ್ಪತ್ರೆ ಹಾಗೂ ಶವಾಗಾರದಲ್ಲಿ ಶವಗಳು ತುಂಬಿಕೊಂಡಿವೆ. ಆದರೆ ಸಾವು, ನೋವಿನ ನಿಖರವಾದ ಸಂಖ್ಯೆ ಬಹಿರಂಗವಾಗಿಲ್ಲ. ರೆಫರಿಯ ವಿವಾದಾತ್ಮಕ ನಿರ್ಣಯದ ಬಳಿಕ ವಾಗ್ವಾದ ಶುರುವಾಗಿ, ಇದು ವಿಕೋಪಕ್ಕೆ ತಿರುಗಿ, ಅಭಿಮಾನಿಗಳು ಮೈದಾನದ ಒಳಗೆ ನುಗ್ಗಿದ್ದರು. ಫುಟ್ಬಾಲ್ ಆಟದ ಸ್ಟೇಡಿಯಂ ರಣರಂಗವಾಗಿ ಮಾರ್ಪಟ್ಟಿದೆ. ಉದ್ರಿಕ್ತರಾದ ಪ್ರೇಕ್ಷಕರು ಸಂಘರ್ಷಕ್ಕೆ ಇಳಿದರು. ಬೀದಿ ಬೀದಿಗಳಲ್ಲಿ ಮಾರಾಮಾರಿ ನಡೆದಿದ್ದು, ಎನ್‌ಜೆರೆಕೋರೆ ಪೊಲೀಸ್ ಠಾಣೆಗೆ ಬೆಂಕಿ ಹಚ್ಚಲಾಗಿದೆ.

ಅಕಾಲ ವೃಷ್ಟಿಯಿಂದ ಕೃಷಿಕರಿಗೆ ಆತಂಕ


ಮಡಿಕೇರಿಯಲ್ಲಿ ಸೋಮವಾರ ಮೋಡ ಮುಸುಕಿದ ವಾತಾವರಣದೊಂದಿಗೆ ಸುರಿದ ಮಳೆ.

ಮಡಿಕೇರಿ, ಡಿ.2–ಫೆಂಗಲ್ ಚಂಡಮಾರುತದಿಂದ ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಸೋಮವಾರ ಮಳೆಯಾಗಿದೆ. ಮಂಗಳವಾರ ಅಧಿಕ ಮಳೆ ಸುರಿಯಬಹುದು. ಆದ್ದರಿಂದ ಸಾರ್ವಜನಿಕರು ಮುಂಜಾಗ್ರತಾ ಕ್ರಮ ವಹಿಸುವಂತೆ ಜಿಲ್ಲಾಡಳಿತ ಸೂಚಿಸಿದೆ.

ಡಿಸೆಂಬರ್ ತಿಂಗಳ ಅಕಾಲ ವೃಷ್ಟಿಯಿಂದ ಜಿಲ್ಲೆಯ ಕೃಷಿ ವರ್ಗದಲ್ಲಿ ಆತಂಕ ಮನೆ ಮಾಡಿದೆ. ಒಂದೆಡೆ ಭತ್ತ ಫಸಲು ಕಟಾವಿಗೆ ಬಂದಿದ್ದರೆ, ಮತ್ತೊಂದಡೆ ರೋಬಸ್ಟಾ ಕಾಫಿ ಹಣ್ಣಾಗಿ ಕುಯ್ಲಿಗೆ ಬಂದಿದೆ.

ಈ ನಡುವೆ ಮೋಡ ಮುಸುಕಿದ ವಾತಾವರಣ ಮತ್ತು ಅಕಾಲಿಕ ಮಳೆಯಿಂದ ತೋಟಗಾರಿಕಾ ಬೆಳೆಗಳ ಸಹಿತ ಕೃಷಿ ಫಸಲು ಹಾನಿಯಾಗುವ ಎಲ್ಲಾ ಲಕ್ಷಣಗಳಿವೆ. ಈ ಅವಧಿಯಲ್ಲಿ ಮಳೆ ಸುರಿದಲ್ಲಿ ಹಣ್ಣಾಗಿರುವ ಕಾಫಿ ಉದುರುವ ಆತಂಕ ಒಂದು ಕಡೆಯಾದರೆ, ಕುಯ್ಲು ಮಾಡಿರುವ ಕಾಫಿಯನ್ನು ಒಣಗಿಸುವುದೇ ಒಂದು ದೊಡ್ಡ ಸಮಸ್ಯೆಯಾಗಿ ಬೆಳೆಗಾರರನ್ನು ಕಾಡುತ್ತಿದೆ ಅತಿವೃಷ್ಟಿ ಕಾಡುಪ್ರಾಣಿಗಳ ಉಪಟಳ, ಕಾರ್ಮಿಕರ ಕೊರತೆ, ದುಬಾರಿ ನಿರ್ವಹಣೆ ವೆಚ್ಚ ಸಹಿತ ಹಲವು ಸಮಸ್ಯೆಗಳ ನಡುವೆ ಅಳಿದು ಉಳಿದಿರುವ ಫಸಲು ಕೂಡ ಇದೀಗ ಕೈಗೆಟುಕುವ ಅನಿಶ್ಚಿತತೆ ಕಾಡುತ್ತಿದೆ.

ಶಾಲಾ–ಕಾಲೇಜಿಗೆ ರಜೆ

ಫೆಂಗಲ್ ಚಂಡ ಮಾರುತದಿಂದ ಕೊಡಗು ಜಿಲ್ಲೆಯಲ್ಲೂ ವ್ಯಾಪಕ ಮಳೆಯಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ರೆಡ್ ಅಲರ್ಟ್ ಘೋಷಣೆಯಾದ ಕಾರಣ ಜಿಲ್ಲೆಯಾದ್ಯಂತ ಎಲ್ಲಾ ಅಂಗನವಾಡಿ, ಶಾಲಾ–ಕಾಲೇಜುಗಳಿಗೆ ಡಿ.3ರಂದು ಜಿಲ್ಲಾಡಳಿತ ರಜೆ ಘೋಷಿಸಿದೆ. ಆದರೆ, ಪದವಿ ಹಾಗೂ ಸ್ನಾತಕೋತ್ತರ ತರಗತಿಗಳಿಗೆ ರಜೆ ಇಲ್ಲ.

ರೋಮಾಂಚನ ಎತ್ತಿನಗಾಡಿ ಓಟ

ಹೆಬ್ಬಾಲೆ ಗ್ರಾಮದಲ್ಲಿ ತುಂತುರು ಮಳೆ ನಡುವೆ ರಾಜ್ಯ ಮಟ್ಟದ ಸ್ಪರ್ಧೆ


ಹೆಬ್ಬಾಲೆಯಲ್ಲಿ ನಡೆದ ರಾಜ್ಯ ಮಟ್ಟದ ಎತ್ತಿನಗಾಡಿ ಓಟ ಸ್ಪರ್ಧೆ ಪ್ರೇಕ್ಷಕರನ್ನು ರೋಮಾಂಚನಗೊಳಿಸಿತು.

ಕುಶಾಲನಗರ, ಡಿ.2–ತಾಲೂಕಿನ ಗಡಿಗ್ರಾಮ ಹೆಬ್ಬಾಲೆಯಲ್ಲಿ ಗ್ರಾಮದೇವತೆ ಶ್ರೀ ಬನಶಂಕರಿ ಅಮ್ಮನವರ ಜಾತ್ರೋತ್ಸವ ಅಂಗವಾಗಿ ಸೋಮವಾರ ಏರ್ಪಡಿಸಿದ್ದ ರಾಜ್ಯ ಮಟ್ಟದ ಎತ್ತಿನಗಾಡಿ ಓಟದ ಸ್ಪರ್ಧೆ ಪ್ರೇಕ್ಷಕರನ್ನು ರೋಮಾಂಚನಗೊಳಿಸಿತು.

ಹೆಬ್ಬಾಲೆ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಮಾದರಿ ಯುವಕ ಸಂಘದ ಆಶ್ರಯದಲ್ಲಿ ದಿನವಿಡೀ ಸುರಿದ ತುಂತುರು ಮಳೆ ನಡುವೆ ನಡೆದ ಗಾಡಿ ಓಟದಲ್ಲಿ 19ಕ್ಕೂ ಹೆಚ್ಚಿನ ಎತ್ತಿನಗಾಡಿ ಮಾಲೀಕರು ಪಾಲ್ಗೊಂಡಿದ್ದರು. ಕೆ.ಆರ್.ನಗರ, ಸರಗೂರು, ಸಾಲಿಗ್ರಾಮ, ಹಂಪಾಪುರ, ರಾಮನಾಥಪುರ, ಮಲ್ಲಿನಾಥಪುರ ಸೇರಿದಂತೆ ಕೊಡಗು, ಮೈಸೂರು, ಚಿಕ್ಕಮಗಳೂರು, ಹಾಸನ ಜಿಲ್ಲೆ ಗಡಿಗ್ರಾಮಗಳ ಜನರು ಭಾಗವಹಿಸಿದ್ದರು. ಸ್ಪರ್ಧೆಗೆ 100 ಮೀಟರ್ ದೂರ ನಿಗದಿ ಪಡಿಸಲಾಗಿತ್ತು.

ಸುಗ್ಗಿ ಮುನ್ನ ಹಬ್ಬದ ಅಂಗವಾಗಿ ನಡೆಯುವ ಈ ಸ್ಪರ್ಧೆಯಲ್ಲಿ ರೈತಾಪಿ ವರ್ಗದವರು ಗಾಡಿ ಓಟಕ್ಕೆ ಎತ್ತುಗಳು ಹಾಗೂ ಗಾಡಿಗಳನ್ನು ಅಣಿಗೊಳಿಸಿದ್ದರು. ರೋಮಾಂಚಕಾರಿ ಹಾಗೂ ಸಾಹಸಮಯ ಸ್ಪರ್ಧೆ ವೀಕ್ಷಿಸಲು ಸಾವಿರಾರು ಜನರು ಸೇರಿದ್ದರು.

24 ವರ್ಷಗಳಿಂದ ಮಾದರಿ ಯುವಕ ಸಂಘ ಸ್ಪರ್ಧೆ ನಡೆಸಿಕೊಂಡು ಬರುವ ಮೂಲಕ ಗ್ರಾಮೀಣ ಕ್ರೀಡೆ ಬೆಳವಣಿಗೆಗೆ ಒತ್ತು ನೀಡುತ್ತಿದೆ. ಮೈದಾನ ಎರಡು ಕಡೆ ನಿಂತಿದ್ದ ಜನರು ಶಿಳ್ಳೆ ಹೊಡೆಯುತ್ತಾ ಜೋರಾಗಿ ಕೂಗುವ ಮೂಲಕ ಎತ್ತುಗಳಿಗೆ ಹುರಿದುಂಬಿಸುತ್ತಿದ್ದ ದೃಶ್ಯ ಕಂಡು ಬಂದಿತು. ಕೆಲ ಎತ್ತುಗಳು ಓಡುತ್ತ ಜನರತ್ತಾ ನುಗ್ಗಿದವು. ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಲಿಲ್ಲ.

ಸ್ಪರ್ಧೆಯಲ್ಲಿ ಮೊದಲ ಸ್ಥಾನ ಗಳಿಸಿದ ಎತ್ತಿನಗಾಡಿ ಮಾಲೀಕರಿಗೆ 6 ಗ್ರಾಂ ಚಿನ್ನ, ದ್ವಿತೀಯ ಸ್ಥಾನ 5 ಗ್ರಾಂ, ತೃತೀಯ 4 ಗ್ರಾಂ ಹಾಗೂ ನಾಲ್ಕನೇ ಬಹುಮಾನ 2 ಗ್ರಾಂ ಚಿನ್ನವನ್ನು ಬಹುಮಾನ ರೂಪದಲ್ಲಿ ವಿತರಿಸಲಾಯಿತು.

ಎತ್ತಿನಗಾಡಿ ಓಟ ಸ್ಪರ್ಧೆಗೆ ಉದ್ಯಮಿ ಮೋಹನ್ ಲಾಲ್ ಚೌಧರಿ ಚಾಲನೆ ನೀಡಿದರು. ತೀರ್ಪುಗಾರರಾಗಿ ದೈಹಿಕ ಶಿಕ್ಷಣ ಶಿಕ್ಷಕರಾದ ಗಣೇಶ್, ಲೋಹಿತ್ ಕಾರ್ಯ ನಿರ್ವಹಿಸಿದರು.

ಮಾದರಿ ಯುವಕ ಸಂಘದ ಅಧ್ಯಕ್ಷ ಹೆಚ್.ಪಿ.ಚಂದ್ರ ಶೇಖರ್, ಉಪಾಧ್ಯಕ್ಷ ಹೆಚ್.ವಿ.ಪ್ರಸನ್ನ ರೆಡ್ಡಿ, ಕಾರ್ಯದರ್ಶಿ ಹೆಚ್.ಎಲ್.ಪ್ರಜ್ವಲ್, ಸಹ ಕಾರ್ಯದರ್ಶಿ ಹೆಚ್.ಪಿ.ಮನು, ಖಜಾಂಚಿ ಹೆಚ್.ಡಿ. ಅಚ್ಯುತ, ಸಂಘಟನಾ ಕಾರ್ಯದರ್ಶಿ ಹೆಚ್.ಟಿ.ಲಕ್ಷ್ಮಪ್ಪ, ಮಾರ್ಗದರ್ಶಕ ಹೆಚ್.ಜೆ. ಶರತ್, ನಿರ್ದೇಶಕರಾದ ಹೆಚ್.ಇ.ರವಿ, ಸಚಿನ್, ಪುಟ್ಟು ಅಪ್ಪಣ್ಣಾಚಾರ್, ಹೆಚ್.ಜೆ. ಶ್ರೀಧರ್, ಹೆಚ್.ಕೆ.ಸಂತೋಷ್, ಅರುಣ್ ಕುಮಾರ್, ಹೆಚ್.ಎಲ್.ರವಿಚಂದ್ರ, ಬಸವೇಶ್ವರ ಯುವಕ ಸಂಘದ ಅಧ್ಯಕ್ಷ ಪಟೇಲ್ ಹೆಚ್.ಟಿ.ಜಗದೀಶ್, ಶಿಕ್ಷಕ ಹೆಚ್.ಜೆ.ಕುಮಾರ್ ಮತ್ತಿತರರು ಇದ್ದರು.

ವಿಜೃಂಭಣೆಯ ಬನಶಂಕರಿ ಜಾತ್ರೋತ್ಸವ

ಐತಿಹಾಸಿಕ ಹಿನ್ನೆಲೆ ಹೊಂದಿರುವ ಹೆಬ್ಬಾಲೆ ಗ್ರಾಮದೇವತೆ ಶ್ರೀ ಬನಶಂಕರಿ ಅಮ್ಮನವರ ಜಾತ್ರೋತ್ಸವ ಭಾನುವಾರ ರಾತ್ರಿ ವಿಜೃಂಭಣೆಯಿಂದ ನಡೆಯಿತು.

ಬನಶಂಕರಿ, ಬಸವೇಶ್ವರ, ರಾಮಲಿಂಗೇಶ್ವರ ದೇವಸ್ಥಾನ ಸಮಿತಿ ಹಾಗೂ ಗ್ರಾಮಸ್ಥರ ವತಿಯಿಂದ ಕಾರ್ತಿಕ ಮಾಸ ಕೃಷ್ಣ ಪಕ್ಷ ಅಮಾವಾಸೆ ರಾತ್ರಿ ಶಕ್ತಿ ಸ್ವರೂಪಿಣಿ ಬನಶಂಕರಿ ದೇವಿಗೆ ವಿಶೇಷ ಪೂಜೆ ನೆರವೇರಿಸಲಾಯಿತು. ಪ್ರತಿವರ್ಷದಂತೆ ಅಮ್ಮನವರ ಸನ್ನಿಧಿಯಲ್ಲಿ ಬೆಳಗ್ಗೆ 7 ಗಂಟೆಗೆ ಗಣಪತಿ ಪೂಜೆ, ಪುಣ್ಯಾಹಃ ರಕ್ಷಾಬಂಧನ ಧ್ವಜಾರೋಹಣ ನವಗ್ರಹ ಸ್ಥಾಪನೆ, ಮಹಾಮಂಗಳಾರತಿ ಸೇರಿದಂತೆ ವಿವಿಧ ಪೂಜಾ ಕೈಂಕರ್ಯ ದೇವಾಲಯ ಪ್ರಧಾನ ಅರ್ಚಕ ಕೃಷ್ಣಮೂರ್ತಿ ನೇತೃತ್ವದಲ್ಲಿ ನಡೆಸಲಾಯಿತು.

ಅನ್ನದಾನ: ದೇವಸ್ಥಾನ ಸಮಿತಿ ವತಿಯಿಂದ ಅಮ್ಮನವರ ದೇವಸ್ಥಾನದಲ್ಲಿ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ದೇವಸ್ಥಾನ ಸಮಿತಿ ಅಧ್ಯಕ್ಷ ರಮೇಶ್, ಕಾರ್ಯದರ್ಶಿ ಹೆಚ್.ಹೆಚ್.ರಾಜಶೇಖರ್, ಖಜಾಂಚಿ ಸೋಮಣ್ಣ, ಸಮಿತಿ ಪದಾಧಿಕಾರಿಗಳು, ಸದಸ್ಯರ ನೇತೃತ್ವದಲ್ಲಿ ಪೂಜಾ ಕಾರ್ಯ ನೆರವೇರಿದವು.

ಸಂತ ಅನ್ನಮ್ಮ ವಿದ್ಯಾಸಂಸ್ಥೆಯಲ್ಲಿ ಸಾಂಸ್ಕೃತಿಕ ಮೇಳ

ವಿರಾಜಪೇಟೆ, ಡಿ.2–ಪಟ್ಟಣದ ಸಂತ ಅನ್ನಮ್ಮ ವಿದ್ಯಾಸಂಸ್ಥೆಯಲ್ಲಿ ಡಿ.12ರಂದು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಮೇಳ ಆಯೋಜಿಸಲಾಗಿದೆ ಎಂದು ಸಂತ ಅನ್ನಮ್ಮ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ರೆ.ಫಾ.ಮದಲೈಮುತ್ತು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪಠ್ಯದೊಂದಿಗೆ ಪಠ್ಯೇತರ ಚಟುವಟಿಕೆಗಳಿಗೂ ಒತ್ತು ನೀಡುವ ದೃಷ್ಟಿಯಿಂದ ಸಾಂಸ್ಕೃತಿಕ ಮೇಳ ಆಯೋಜಿಸಲಾಗಿದೆ ನೃತ್ಯ, ಲಗೋರಿ, ವಿಜ್ಞಾನ ಮಾದರಿ, ಆಹಾರ ಮೇಳ, ಟ್ರೆಷರ್ ಹಂಟ್, ಕ್ರಿಕೆಟ್ ಹಾಗೂ ರಸಪ್ರಶ್ನೆ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ. ರಸಪ್ರಶ್ನೆ ಸ್ಪರ್ಧೆ ಹೊರತು ಪಡಿಸಿ, ಉಳಿದ ಸ್ಪರ್ಧೆಗಳಲ್ಲಿ ಪ್ರತಿ ತಂಡದಿಂದ ಒಬ್ಬ ಶಿಕ್ಷಕರಿಗೆ ಪಾಲ್ಗೊಳ್ಳುವ ಅವಕಾಶವಿದೆ. ಕ್ರಿಕೆಟ್ ತಂಡದಲ್ಲಿ ಕಡ್ಡಾಯವಾಗಿ 5 ವಿದ್ಯಾರ್ಥಿನಿಯರು ಭಾಗವಹಿಸಬೇಕು ಎಂದರು.

ಸಂತ ಅನ್ನಮ್ಮ ವಿದ್ಯಾಸಂಸ್ಥೆ ವ್ಯವಸ್ಥಾಪಕ ರೆ.ಫಾ.ಜೇಮ್ಸ್ ಡೊಮೆನಿಕ್ ಮಾತನಾಡಿ, ಪ್ರತಿ ಸ್ಪರ್ಧೆಯಲ್ಲಿ ಮೊದಲ ಹಾಗೂ ಎರಡನೇ ಸ್ಥಾನ ಪಡೆದ ತಂಡಗಳಿಗೆ ಆಕರ್ಷಕ ಟ್ರೋಫಿ ನೀಡಲಾಗುವುದು. ಅಲ್ಲದೆ, ಸಮಗ್ರ ಪ್ರಶಸ್ತಿ ಪಡೆದ ತಂಡಕ್ಕೆ ಆಕರ್ಷಕ ಟ್ರೋಫಿ ಹಾಗೂ 25,555 ರೂ.ನಗದು ಬಹುಮಾನ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಭಾಗವಹಿಸುವ ತಂಡಗಳು ಡಿ.7ರೊಳಗಾಗಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಮಾಹಿತಿಗಾಗಿ ಮೊ.ಸಂ: 9844174874 ಅನ್ನು ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಸಂತ ಅನ್ನಮ್ಮ ಪ್ರೌಢಶಾಲೆ ಮುಖ್ಯಶಿಕ್ಷಕ ಬೆನ್ನಿ ಜೋಸೆಫ್, ಕಾರ್ಯಕ್ರಮದ ಸಂಘಟಕರಾದ ಡಾ. ಹೇಮಂತ್ ಕುಮಾರ್, ನೋಹ ವಿವೇಕ್ ಹಾಗೂ ಶರತ್‌ಶೆಟ್ಟಿ ಉಪಸ್ಥಿತರಿದ್ದರು.

ಲಿಂಗಾದಾರಿತ ದೌರ್ಜನ್ಯ ನಿವಾರಣೆ ಶಿಬಿರ...


ಮಡಿಕೇರಿಯ ಮಾಲ್ದಾರೆ ಕೃಷಿ ಪತ್ತಿನ ಸಹಕಾರ ಸಂಘದ ಸಮುದಾಯ ಭವನದಲ್ಲಿ ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯಿತಿ, ಕಾನೂನು ಸೇವಾ ಪ್ರಾಧಿಕಾರ, ಮಹಿಳೋದಯ ಮಹಿಳಾ ಒಕ್ಕೂಟ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಲಿಂಗಾದಾರಿತ ದೌರ್ಜನ್ಯ ನಿವಾರಣೆ ಶಿಬಿರದಲ್ಲಿ ಓಡಿಪಿ ಸಂಸ್ಥೆ ಮಹಿಳೆಯರು ಭಾಗವಹಿಸಿದ್ದರು.

ಡಿ.5ರಿಂದ ತಲಕಾವೇರಿ, ಭಗಂಡೇಶ್ವರ ದೇವಾಲಯದಲ್ಲಿ ವಿವಿಧ ಪೂಜೆ

ಮಡಿಕೇರಿ, ಡಿ.2–ಶ್ರೀ ಭಗಂಡೇಶ್ವರ ಹಾಗೂ ತಲಕಾವೇರಿ ದೇವಾಲಯದಲ್ಲಿ ಪ್ರತಿ ವರ್ಷದಂತೆ ಶ್ರೀ ಉಚ್ಚಿಲ ನೀಲೇಶ್ವರ ಪದ್ಮನಾಭ ತಂತ್ರಿ ನೇತೃತ್ವದಲ್ಲಿ ಡಿ.5ರಿಂದ 8 ರವರೆಗೆ ಸಂಪ್ರೋಕ್ಷಣೆ ಕಾರ್ಯಕ್ರಮ ನಡೆಯಲಿದೆ.

5ರಂದು ತಲಕಾವೇರಿಯಲ್ಲಿ ಬೆಳಗ್ಗೆ 7.30ಕ್ಕೆ ಗಣಹೋಮ, ಸಂಪ್ರೋಕ್ಷಣೆ, ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ. 6ರಂದು ಭಗಂಡೇಶ್ವರ ದೇವಾಲಯದಲ್ಲಿ ಬೆಳಗ್ಗೆ 7.30ಕ್ಕೆ ಗಣಪತಿ ಹೋಮ, ಸಂಪ್ರೋಕ್ಷಣೆ, ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ, ಪ್ರಸಾದ ವಿತರಣೆ. ರಾತ್ರಿ ಭೂತ ಬಲಿ, ಭಗಂಡೇಶ್ವರ ಉತ್ಸವ ನಡೆಯಲಿದೆ. 7ರಂದು ಸುಬ್ರಹ್ಮಣ್ಯ ದೇವರಿಗೆ ಬೆಳಗ್ಗೆ 7.30ಕ್ಕೆ ಗಣಹೋಮ, ಪಂಚಾಮೃತ ಅಭಿಷೇಕ, ಸಂಪ್ರೋಕ್ಷಣೆ, ಮಧ್ಯಾಹ್ನ ಪ್ರಸಾದ ವಿತರಣೆ, ರಾತ್ರಿ ಉತ್ಸವ ನಡೆಯಲಿದೆ.

8ರಂದು ಬೆಳಗ್ಗೆ 7.30ಕ್ಕೆ ಮಹಾವಿಷ್ಣುವಿಗೆ ಗಣಹೋಮ, ಶುದ್ಧಿ ಕಲಶಾಭಿಷೇಕ, ಮಧ್ಯಾಹ್ನ ಮಹಾಪೂಜೆ ಹಾಗೂ ರಾತ್ರಿ ಉತ್ಸವ ನಡೆಯಲಿದೆ ಎಂದು ಭಾಗಮಂಡಲ ಭಗಂಡೇಶ್ವರ–ತಲಕಾವೇರಿ ಮತ್ತು ಸಮೂಹ ದೇವಾಲಯಗಳ ಕಾರ್ಯನಿರ್ವಾಹಣಾಧಿಕಾರಿ ಎನ್.ಜಿ.ಚಂದ್ರಶೇಖರ್ ತಿಳಿಸಿದ್ದಾರೆ.

ಡಿ.5, ಹಾಸನದಲ್ಲಿ ಸ್ವಾಭಿಮಾನಿ ಸಮಾವೇಶ

ಮಡಿಕೇರಿ, ಡಿ.2–ಶೋಷಿತ ಸಮುದಾಯಗಳ ಪರ ಗಟ್ಟಿ ಧ್ವನಿಯಾಗಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಕ್ಕಿಳಿಸಲು ವಿರೋಧ ಪಕ್ಷಗಳು ಹವಣಿಸುತ್ತಿವೆ. ವಿರೋಧ ಪಕ್ಷಗಳ ಷಡ್ಯಂತ್ರವನ್ನು ಜನರ ಮುಂದೆ ತರುವ ಮೂಲಕ ಜಾಗೃತಿ ಮೂಡಿಸಿ ಮುಖ್ಯಮಂತ್ರಿಗಳ ಕೈ ಬಲಪಡಿಸುವ ಚಿಂತನೆಯಡಿ ಡಿ.5ರಂದು ಹಾಸನದಲ್ಲಿ 'ಸ್ವಾಭಿಮಾನಿ ಸಮಾವೇಶ' ನಡೆಯಲಿದೆ ಎಂದು ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಂ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 4 ದಶಕಗಳಿಗಿಂತ ಹೆಚ್ಚಿನ ಕಾಲ ನಿಷ್ಕಳಂಕ ರಾಜಕಾರಣ ಮಾಡುವ ಮೂಲಕ ಸಿದ್ದರಾಮಯ್ಯ ತಮ್ಮದೇ ಛಾಪು ಮೂಡಿಸಿದ್ದಾರೆ ಹಿಂದುಳಿದ, ದಲಿತ, ಶೋಷಿತ ಸಮುದಾಯದ ಶಕ್ತಿಯಾಗಿ ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. 2ನೇ ಬಾರಿ ಸಿಎಂ ಆದ ಬಳಿಕ ವಿವಿಧಯೋಜನೆಗಳ ಮೂಲಕ ಸಮಾಜದ ಎಲ್ಲಾ ಜನರ ಅಭ್ಯುದಯಕ್ಕೆ ಸಿದ್ದರಾಮಯ್ಯ ಶ್ರಮಿಸುತ್ತಿದ್ದಾರೆ. ಅವರ ಅಸ್ತಿತ್ವಕ್ಕೆ ಧಕ್ಕೆ ಉಂಟು ಮಾಡಲು ವಿರೋಧ ಪಕ್ಷಗಳು ಮುಡಾ, ವಾಲ್ಮೀಕಿ ಪ್ರಕರಣಗಳನ್ನು ಮುಂದಿಟ್ಟು ಷಡ್ಯಂತ್ರ ರೂಪಿಸುತ್ತಿವೆ ಎಂದು ಆರೋಪಿಸಿದರು.

5 ಲಕ್ಷ ಜನ ಭಾಗಿ: ಸ್ವಾಭಿಮಾನಿ ಸಮಾವೇಶದಲ್ಲಿ 5 ಲಕ್ಷಕ್ಕೂ ಹೆಚ್ಚು ಜನ ಪಾಲ್ಗೊಳ್ಳುವ ವಿಶ್ವಾಸವಿದೆ. ಕೊಡಗು ಜಿಲ್ಲೆಯಿಂ ಸಿದ್ದರಾಮಯ್ಯ ಕೈ ಬಲಪಡಿಸಲು ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಬೇಕೆಂದು ಮನವಿ ಮಾಡಿದರು.

ಇದೇ ವೇಳೆ ಸ್ವಾಭಿಮಾನಿ ಸಮಾವೇಶದ ಪೋಸ್ಟರ್ ಅನ್ನು ಅಹಿಂದ ಮುಖಂಡರು ಬಿಡುಗಡೆಗೊಳಿಸಿದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ಜೆಜೆಆನಂದ, ಮೈಸೂರು ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷ ಯೋಗೇಶ್ ಉಪ್ಪಾರ, ಮೈಸೂರು ನಗರ ಕಾಂಗ್ರೆಸ್ ಹಿಂದುಳಿದ ವರ್ಗಗಳ ಅಧ್ಯಕ್ಷ ಎನ್.ಆರ್.ನಾಗೇಶ್, ಮೈಸೂರು ಜಿಲ್ಲಾ ಮಡಿವಾಳ ಸಂಘದ ಅಧ್ಯಕ್ಷ ರವಿನಂದನ್, ಲೋಕೇಶ್ ಕುಮಾರ್ ಉಪಸ್ಥಿತರಿದ್ದರು.



ಸುದ್ದಿಗೋಷ್ಠಿಯಲ್ಲಿ ಅಹಿಂದ ಮುಖಂಡರು ಸ್ವಾಭಿಮಾನಿ ಸಮಾವೇಶದ ಪೋಸ್ಟರ್ ಬಿಡುಗಡೆಗೊಳಿಸಿದರು.

ಚಾ.ನಗರ ಜಿಲ್ಲೆಯಲ್ಲಿ ಮಳೆಯೊಂದಿಗೆ ಶೀತ ಗಾಳಿ

• ಜನಜೀವನ ಅಸ್ತವ್ಯಸ್ತ, ವಾಹನ ಸವಾರರ ಪರದಾಟ • ಅಲ್ಲಲ್ಲಿ ವಿದ್ಯುತ್ ಸಂಪರ್ಕ ಕಡಿತ

ಚಾಮರಾಜನಗರ, ಡಿ.2–ಫೆಂಗಲ್ ಚಂಡ ಮಾರುತ ಪರಿಣಾಮದಿಂದ ಜಿಲ್ಲಾದ್ಯಂತ ಭಾನುವಾರ ಸಂಜೆಯಿಂದ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತವಾಗಿದೆ.

ಚಾಮರಾಜನಗರ, ಹನೂರು, ಕೊಳ್ಳೇಗಾಲ, ಯಳಂದೂರು ಹಾಗೂ ಗುಂಡ್ಲುಪೇಟೆ ತಾಲೂಕಿನಾದ್ಯಂತ ಮಳೆ ಬಿಟ್ಟು ಬಿಡದೆ ಸುರಿಯುತ್ತಿದ್ದು, ಚಳಿ ವಾತಾವರಣ ನಿರ್ಮಾಣವಾಗಿದೆ ಮಳೆಯಿಂದ ವಾಹನ ಸವಾರರು ಪರದಾಟ ನಡೆಸುತ್ತಿದ್ದು, ವಿದ್ಯುತ್ ಸಂಪರ್ಕ ಕೂಡ ಅಲ್ಲಲ್ಲಿ ಕಡಿತವಾಗಿದೆ. ಮಳೆ ನಡುವೆ ಶೀತ ಗಾಳಿಯೂ ಬೀಸುತ್ತಿದ್ದು, ಜನರು ಮನೆಯಿಂದ ಹೊರಬರಲಾಗದ ಸ್ಥಿತಿ ನಿರ್ಮಾಣವಾಗಿದೆ.

ಜಮೀನುಗಳಿಗೆ ತೆರಳಲು ಪರದಾಟ: ಧಾರಾಕಾರ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ರಸ್ತೆಗಳಲ್ಲಿ ನೀರು ನದಿಯಂತೆ ಹರಿಯುತ್ತಿದ್ದು, ರೈತರು ಜಮೀನುಗಳಿಗೆ ತೆರಳಲು ಪರದಾಡುವಂತಾಗಿದೆ. ಇನ್ನೂ 3–4 ದಿನ ಮಳೆ ಮುಂದುವರಿಯುವ ಸಾಧ್ಯತೆಯಿದ್ದು, ಜನತೆ ಬಹಳ ಎಚ್ಚರಿಕೆ ವಹಿಸುವಂತೆ ಹವಾಮಾನ ಇಲಾಖೆ ಸೂಚನೆ ನೀಡಿದೆ.


ಚಾಮರಾಜನಗರದಲ್ಲಿ ಮಳೆಯಿಂದ ಜನರು ಛತ್ರಿ ಹಿಡಿದು ಸಂಚರಿಸುತ್ತಿರುವುದು.

ರಸ್ತೆ ಸಂಚಾರ ಸ್ಥಗಿತ: ಚಂಡಮಾರುತದ ಅಬ್ಬರಕ್ಕೆ ಮಲೆಮಹದೇಶ್ವರಬೆಟ್ಟ ರಸ್ತೆಯ ಆನೆತಲೆದಿಂಬ ಎಂಬಲ್ಲಿ ಮರಬಿದ್ದು ತಡರಾತ್ರಿ ನಾಲ್ಕು ತಾಸು ವಾಹನ ಸಂಚಾರ ಅಸ್ತವ್ಯಸ್ತವಾಗಿತ್ತು. ಮಹದೇಶ್ವರಬೆಟ್ಟ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿ, ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು. ಅಮಾವಾಸ್ಯೆ ಹಿನ್ನೆಲೆ ಸಹಸ್ರಾರು ಭಕ್ತರು ದೇಗುಲಕ್ಕೆ ಆಗಮಿಸಿದ್ದರು.

ಅತ್ಯಧಿಕ ಮಳೆ ದಾಖಲು: ಜಿಲ್ಲೆಯ ಬಹುತೇಕ ಕಡೆ ಅಲ್ಲಲ್ಲಿ ಬಿರುಗಾಳಿ ಸಹಿತ ಭಾರಿ ಮಳೆಯಾಗಿದೆ. ಸೋಮವಾರ ಬೆಳಗ್ಗೆ 7.30ಕ್ಕೆ ಹನೂರು ತಾಲೂಕಿನ ಪೊನ್ನಾಚಿಯಲ್ಲಿ ದಾಖಲೆಯ 94 ಮಿ.ಮೀ ಸುರಿದಿದೆ.

ಡಿಕೆಡಿ ಗ್ರ್ಯಾಂಡ್ ಫಿನಾಲೆ ರದ್ದು: ಕನ್ನಡದ ಜನಪ್ರಿಯ ರಿಯಾಲಿಟಿ ಶೋಗಳಲ್ಲಿ ಒಂದಾಗಿರುವ 'ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್' ಕಾರ್ಯಕ್ರಮದ ಗ್ರ್ಯಾಂಡ್ ಫಿನಾಲೆಯನ್ನು ನಗರದ ಡಾ.ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ಡಿ.1ರ ಸಂಜೆ ಆಯೋಜಿಸಲಾಗಿತ್ತು. ಇದಕ್ಕಾಗಿ ಎಲ್ಲಾ ಸಿದ್ಧತೆ ಪೂರ್ಣಗೊಳಿಸಿ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿತ್ತು. ಆದರೆ, ಭಾನುವಾರ ಸಂಜೆ 6 ಗಂಟೆಯಿಂದ ಆರಂಭವಾದ ಮಳೆ ಸೋಮವಾರ ಮಧ್ಯಾಹ್ನದವರೆಗೂ ನಿರಂತರವಾಗಿ ಸುರಿದ ಪರಿಣಾಮ ಕಾರ್ಯಕ್ರಮವನ್ನು ರದ್ದುಗೊಳಿಸಲಾಯಿತು.

ಶಾಲಾ–ಕಾಲೇಜುಗಳಿಗೆ ರಜೆ ಘೋಷಣೆ

ಜಿಲ್ಲೆಯಲ್ಲಿ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿರುವ ಹಿನ್ನೆಲೆಯಲ್ಲಿ ಮಳೆ ಮುಂದುವರೆದಿದ್ದು, ಮಂಗಳವಾರವೂ ಜಿಲ್ಲಾದ್ಯಂತ ಅಂಗನವಾಡಿ, ಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ಜಿಲ್ಲಾಧಿಕಾರಿ ಶಿಲ್ಪನಾಗ್ ರಜೆ ಘೋಷಿಸಿದ್ದಾರೆ.

ಮನೆಯಿಂದ ಹೊರಬರಲಾಗದ ಸ್ಥಿತಿ


ಬೇಗೂರಿನಲ್ಲಿ ಮಳೆಯಿಂದ ಜನಜೀವನ ಅಸ್ತವ್ಯಸ್ತಗೊಂಡಿತು.

ಬೇಗೂರು: ಗುಂಡ್ಲುಪೇಟೆ ತಾಲೂಕಿನ ಬೇಗೂರು ಸುತ್ತಮುತ್ತಲ ಗ್ರಾಮಗಳಲ್ಲಿ ಸತತ ಮಳೆ ಸುರಿಯುತ್ತಿದ್ದು, ಜನ ಮನೆಯಿಂದ ಹೊರಬರದಂತಾಗಿದೆ.

ಭಾನುವಾರ ರಾತ್ರಿ 9 ಗಂಟೆ ನಂತರ ಪ್ರಾರಂಭವಾದ ಮಳೆ ಕೆಲ ಸಮಯ ಜೋರಾಗಿ ಸುರಿಯಿತು. ಆಗಾಗಿ ಕೆಲಸ ಕಾರ್ಯಗಳಿಗೆ ತೆರಳುವ ಗ್ರಾಮಸ್ಥರು ಛತ್ರಿ ಹಿಡಿದು ಸಂಚರಿಸುವಂತಾಗಿದೆ. ಗ್ರಾಮೀಣ ಪ್ರದೇಶದ ರಸ್ತೆಗಳು ಕೆಸರು ಗದ್ದೆಯಂತಾಗಿದೆ.

ವ್ಯಾಪಾರಿಗಳಿಗೆ ನಷ್ಟ: ಮಳೆಯಿಂದ ಬೀದಿಬದಿ ವ್ಯಾಪಾರಿಗಳು, ಹೋಟೆಲ್, ಕೈಗಾಡಿ, ಸಣ್ಣಪುಟ್ಟ ಅಂಗಡಿಗಳಿಗೆ ವ್ಯಾಪಾರಿಗಳೇ ಬಾರದೆ ನಷ್ಟ ಉಂಟಾಗಿದೆ.

ಡಿ.7, ಕೊಳ್ಳೇಗಾಲಕ್ಕೆ ಸಿಎಂ ಭೇಟಿ: ಸ್ಥಳ ಪರಿಶೀಲನೆ


ಮುಖ್ಯಮಂತ್ರಿ ಸಿದ್ದರಾಮಯ್ಯ ಡಿ.7ರಂದು ಕೊಳ್ಳೇಗಾಲಕ್ಕೆ ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ, ಡಿಸಿ ಶಿಲ್ಪನಾಗ್ ಅಧಿಕಾರಿಗಳೊಂದಿಗೆ ಸೋಮವಾರ ಸ್ಥಳ ಪರಿಶೀಲಿಸಿದರು.

ಕೊಳ್ಳೇಗಾಲ, ಡಿ.2–ಮುಖ್ಯಮಂತ್ರಿ ಸಿದ್ದರಾಮಯ್ಯ ಡಿ.7ರಂದು ತಾಲೂಕಿನ ಸತ್ತೇಗಾಲ ಹಾಗೂ ಯಳಂದೂರಿನಲ್ಲಿ ನಡೆಯಲಿರುವ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿರುವ ಹಿನ್ನೆಲೆಯಲ್ಲಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಂ.ಆರ್.ಮಂಜುನಾಥ್, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಅವರು ಅಧಿಕಾರಿಗಳೊಂದಿಗೆ ಸೋಮವಾರ ಸ್ಥಳ ಪರಿಶೀಲಿಸಿ, ಸಭೆ ನಡೆಸಿದರು.

ಸತ್ತೇಗಾಲ ಗ್ರಾಮದ ಲಕ್ಷ್ಮಮ್ಮ, ಸೊಸಯ್ಯನ ಸಿದ್ದಯ್ಯ ಸರ್ಕಾರಿ ಶಾಲೆಯಲ್ಲಿ ಸಭೆ ನಡೆಸಿದ ಶಾಸಕರು ಹಾಗೂ ಜಿಲ್ಲಾಧಿಕಾರಿ ದಾನಿಗಳ ಸಹಕಾರದಲ್ಲಿ ನೂತನವಾಗಿ ನಿರ್ಮಾಣಗೊಂಡಿರುವ ಸರ್ಕಾರಿ ಶಾಲೆಗಳ 12 ಕೊಠಡಿಗಳನ್ನು ಮುಖ್ಯಮಂತ್ರಿ ಉದ್ಘಾಟಿಸಲಿದ್ದು, ಈ ಸಂಬಂಧ ಅಗತ್ಯ ಸಿದ್ಧತೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಮುಖ್ಯಮಂತ್ರಿಗಳು ಗ್ರಾಮಕ್ಕೆ ಆಗಮಿಸುವ ವೇಳೆ ಸ್ವಾಗತ, ಶಾಲಾ ಆವರಣದಲ್ಲಿ ಪೂರಕವಾಗಿ ಕೈಗೊಳ್ಳಬೇಕಿರುವ ಸಿದ್ಧತೆ ಹಾಗೂ ರೂಪುರೇಷೆ ಕುರಿತು ಎಲ್ಲವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು. ಶಾಲೆ ಮುಂಭಾಗ ರಸ್ತೆಯನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಬಳಿಕ ಸತ್ತೇಗಾಲ ಗ್ರಾಮದಲ್ಲಿ ನಡೆಯಲಿರುವ ಸಮಾರಂಭ ಸ್ಥಳವನ್ನು ಪರಿಶೀಲಿಸಿ ವೇದಿಕೆ ನಿರ್ಮಾಣ, ಆಸನಗಳ ವ್ಯವಸ್ಥೆ, ವಾಹನ ನಿಲುಗಡೆ ಸಂಬಂಧ ಅಗತ್ಯ ಸೂಚನೆ ನೀಡಿದರು. ನಂತರ ಕೊಳ್ಳೇಗಾಲಕ್ಕೆ ಭೇಟಿ ನೀಡಿದ ಶಾಸಕ ಎ.ಆರ್.ಕೃಷ್ಣಮೂರ್ತಿ ಹಾಗೂ ಅಧಿಕಾರಿಗಳು ಮುಖ್ಯಮಂತ್ರಿಗಳು ಭಾಗವಹಿಸಲಿರುವ ಡಾ.ರಾಜೇಂದ್ರಸ್ವಾಮೀಜಿ ಜಯಂತೋತ್ಸವ ಕಾರ್ಯಕ್ರಮ ನಡೆಯುವ ಸರ್ಕಾರಿ ನ್ಯಾಷನಲ್ ಹಿರಿಯ ಪ್ರಾಥಮಿಕ ಶಾಲಾ ಆವರಣ ಪರಿಶೀಲಿಸಿದರು.

ಬಳಿಕ ಯಳಂದೂರಿಗೆ ಭೇಟಿ ನೀಡಿ, ಮುಖ್ಯಮಂತ್ರಿಗಳು ಶಂಕುಸ್ಥಾಪನೆ ನೆರವೇರಿಸಲಿರುವ ತಾಲೂಕು ಮಟ್ಟದ 100 ಹಾಸಿಗೆಗಳ ಆಸ್ಪತ್ರೆ ನಿರ್ಮಾಣ ಸಂಬಂಧ ಪರಿಶೀಲನೆ ನಡೆಸಿದರು. ಯಳಂದೂರು ಸರ್ಕಾರಿ ಪದವಿಪೂರ್ವ ಕಾಲೇಜಿನ ಮೈದಾನದಲ್ಲಿ ಕಾರ್ಯಕ್ರಮ ಆಯೋಜನೆಗೆ ಅಗತ್ಯ ಸೂಚನೆ ನೀಡಿದರು.

ಉಪವಿಭಾಗಾಧಿಕಾರಿ ಬಿ.ಆರ್.ಮಹೇಶ್, ಶಾಲಾ ನಿರ್ಮಾಣ ದಾನಿ ನಿವೃತ್ತ ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಸ್.ಮರಿಸ್ವಾಮಿ, ಬಿಆರ್‌ಟಿ ಉಪಅರಣ್ಯ ಸಂರಕ್ಷಣಾಧಿಕಾರಿ ಶ್ರೀಪತಿ, ತಹಸೀಲ್ದಾರ್‌ಗಳಾದ ಬಸವರಾಜು, ಜಯಪ್ರಕಾಶ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆಂಪರಾಜು, ಎಸ್‌ಡಿಎಂಸಿ ಅಧ್ಯಕ್ಷ ಕಾಂತರಾಜು, ಕೊಳ್ಳೇಗಾಲ ನಗರಸಭಾ ಪೌರಾಯುಕ್ತ ರಮೇಶ್, ಇನ್ನಿತರ ಅಧಿಕಾರಿಗಳು ಇದ್ದರು.

ಮುಂಜಾಗ್ರತಾ ಕ್ರಮ ವಹಿಸಲು ಜಿಲ್ಲಾಧಿಕಾರಿ ಮನವಿ

ಚಾಮರಾಜನಗರ, ಡಿ.2–ಫೆಂಗಲ್ ಚಂಡ ಮಾರುತ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಡಿ.3ರಂದು ಹಳದಿ ಮುನ್ಸೂಚನೆ (ಯೆಲ್ಲೋ ಅಲರ್ಟ್) ಹಾಗೂ ಡಿ.4ರಂದು ಹೆಚ್ಚು ಮಳೆಯಾಗುವ ಹಿನ್ನೆಲೆಯಲ್ಲಿ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಮುಂಜಾಗ್ರತಾ ಕ್ರಮವಹಿಸಬೇಕಿದ್ದು, ಸಾರ್ವಜನಿಕರು ಮಳೆ ಕಡಿಮೆಯಾಗುವವರೆಗೆ ಮುಂಜಾಗ್ರತಾ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿ ಶಿಲ್ಪನಾಗ್ ಮನವಿ ಮಾಡಿದ್ದಾರೆ.

ಸಾರ್ವಜನಿಕರು ನದಿ ಅಥವಾ ತಗ್ಗು ಪ್ರದೇಶಗಳಿಗೆ ತೆರಳದಂತೆ ಕಟ್ಟೆಚ್ಚರವಹಿಸಬೇಕು. ಜಾನುವಾರುಗಳನ್ನು ಶುಚಿಗೊಳಿಸಲು ಅಥವಾ ಬಟ್ಟೆ ತೊಳೆಯಲು ಹಳ್ಳ, ಕೆರೆ–ಕಟ್ಟೆಗಳಿಗೆ ತೆರಳಬಾರದು. ಗಣಿಗಾರಿಕೆ ಪ್ರದೇಶಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರು ಅಗತ್ಯ ಮುಂಜಾಗ್ರತಾ ಕ್ರಮ ವಹಿಸಬೇಕು.

ಮಳೆಯಿಂದಾಗಿ ಗುಡ್ಡ ಕುಸಿತ ಉಂಟಾಗುವ ಸಂಭವವಿರುವುದರಿಂದ ಎಚ್ಚರವಹಿಸಬೇಕು. ಶಿಥಿಲ ಮನೆಗಳಲ್ಲಿ ವಾಸವಾಗಿರುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ. ವಿದ್ಯುತ್ ಕಂಬ, ಟ್ರಾನ್ಸ್‌ಫಾರ್ಮರ್ ಬಳಿ ತೆರಳಬಾರದು. ವಿದ್ಯುತ್ ತಂತಿಗಳು ಬಾಗಿದ್ದಲ್ಲಿ ಅಥವಾ ಬಿದ್ದು ಹೋಗಿದ್ದಲ್ಲಿ ಕೂಡಲೇ ಮಾಹಿತಿ ನೀಡಬೇಕು. ಮಾಹಿತಿಗಾಗಿ ಜಿಲ್ಲಾ ವಿಪತ್ತು ನಿರ್ವಹಣಾ ಕಂಟ್ರೋಲ್ ರೂಂ: ದೂ.ಸಂ: 08226–223160/61/63 ವಾಟ್ಸ್‌ಆ್ಯಪ್ ಮೊ.ಸಂ: 9740942901 ಅನ್ನು ಸಂಪರ್ಕಿಸಬಹುದು ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ನೆಲಕಚ್ಚಿದ ರಾಗಿ, ತೊಗರಿ ಫಸಲು


ಹನೂರು, ಡಿ.2–ಮಹದೇಶ್ವರಬೆಟ್ಟದ ಕಾಡಂಚಿನ ಗ್ರಾಮವಾದ ಪಡಸಲನತ್ತ ಗ್ರಾಮದಲ್ಲಿ ನಿರಂತರ ಮಳೆಯಿಂದ ರೈತರ ಜಮೀನುಗಳಲ್ಲಿ ಬೆಳೆಯಲಾಗಿದ್ದ ರಾಗಿ, ತೊಗರಿ ಫಸಲು ನೆಲಕಚ್ಚಿದೆ.

ಮಹದೇಶ್ವರಬೆಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಲ್ಲಿ ಕಳೆದ ಎರಡು ವರ್ಷಗಳಿಂದ ಸಮರ್ಪಕ ಮಳೆಯಾಗದ ಹಿನ್ನೆಲೆಯಲ್ಲಿ ಬರಗಾಲದಿಂದ ರೈತರು ತತ್ತರಿಸಿದ್ದರು. ಆದರೆ, ಈ ಬಾರಿ ಉತ್ತಮ ಬೆಳೆ ನಿರೀಕ್ಷೆಯಲ್ಲಿದ್ದರು. ಫೆಂಗಲ್ ಚಂಡಮಾರುತದಿಂದ ಪಡಸಲನತ್ತ ಗ್ರಾಮದ ರೈತರ ರಾಗಿ ಹಾಗೂ ತೊಗರಿ ಬೆಳೆ ಸಂಪೂರ್ಣವಾಗಿ ನೆಲೆ ಕಚ್ಚಿದೆ.

ರೈತ ನಾಗರಾಜು ಸೇರಿದ ಎರಡೂವರೆ ಎಕರೆಯ ರಾಗಿ, ತೊಗರಿ ಫಸಲು ಕೈಗೆ ಬಂದ ತುತ್ತು ಬಾಯಿಗೆ ಬಾರದ ರೀತಿ ಆಗಿದೆ. ಇದರಿಂದ ಉತ್ತಮ ಫಸಲಿನ ಲಾಭದ ನಿರೀಕ್ಷೆಯಲ್ಲಿದ್ದ ಇವರಿಗೆ ಬರಸಿಡಿಲು ಬಡಿದಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಪರಿಹಾರ ನೀಡಬೇಕೆಂದು ರೈತ ನಾಗರಾಜು ಮನವಿ ಮಾಡಿದ್ದಾರೆ.


ಪಡಸಲನತ್ತ ಗ್ರಾಮದ ರೈತ ನಾಗರಾಜು ಸೇರಿದ ರಾಗಿ ಬೆಳೆ ಸಂಪೂರ್ಣವಾಗಿ ನೆಲೆ ಕಚ್ಚಿರುವುದು.

ಸುವರ್ಣಾವತಿಯಿಂದ 200 ಕ್ಯೂಸೆಕ್ ನೀರು ಬಿಡುಗಡೆ


ಸುವರ್ಣಾವತಿ ಜಲಾಶಯದಿಂದ ಸೋಮವಾರ ನೀರನ್ನು ಹೊರಬಿಟ್ಟಿರುವುದು.

ಚಾಮರಾಜನಗರ: ಸುವರ್ಣಾವತಿ ಜಲಾಶಯದಿಂದ 200 ಕ್ಯೂಸೆಕ್ ನೀರನ್ನು ಸೋಮವಾರ ಹೊರಬಿಡಲಾಗಿದೆ.

ಮಳೆ ಹೆಚ್ಚು ಮುಂದುವರೆದಲ್ಲಿ ಹೊರಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಳ ಮಾಡಲಾಗುವುದು. ಹೀಗಾಗಿ ಸುವರ್ಣಾವತಿ ಜಲಾಶಯ ಯೋಜನೆ ಅಚ್ಚುಕಟ್ಟು ಪ್ರದೇಶ ಹಾಗೂ ನದಿಪಾತ್ರದ ರೈತರು, ಸುತ್ತಮುತ್ತಲ ಗ್ರಾಮಸ್ಥರು ಮುನ್ನೆಚ್ಚರಿಕೆ ವಹಿಸಬೇಕು. ಆಸ್ತಿ–ಪಾಸ್ತಿ ಮತ್ತು ಜಾನುವಾರುಗಳ ಬಗ್ಗೆ ನಿಗಾ ವಹಿಸಬೇಕೆಂದು ಕಾವೇರಿ ನೀರಾವರಿ ನಿಗಮದ ಕಬಿನಿ ನಾಲೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

ನಾಳೆ 'ಅರ್ಜುನ'ನ ನೆನಪು



ಮೈಸೂರು, ಡಿ.2– ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಮೃತಪಟ್ಟ 'ಅರ್ಜುನ' ಆನೆ ವರ್ಷದ ನೆನಪು ಕಾರ್ಯಕ್ರಮವನ್ನು ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.

ಎ.ಪಿ.ನಾಗೇಶ್ ನೇತೃತ್ವದ ಮೈಸೂರು ಕಲ್ಚರಲ್ ಅಸೋಸಿಯೇಷನ್ ವತಿಯಿಂದ ಜೆಎಲ್‌ಬಿ ರಸ್ತೆಯ ಇಂಜಿನಿಯರುಗಳ ಸಂಸ್ಥೆ ಸಭಾಂಗಣದಲ್ಲಿ ಡಿ.4ರಂದು ಬೆಳಗ್ಗೆ 10.30ಕ್ಕೆ ನಡೆಯಲಿರುವ ಈ ಕಾರ್ಯಕ್ರಮವನ್ನು ನಿವೃತ್ತ ಅರಣ್ಯಾಧಿಕಾರಿ ಟಿ.ಬಾಲಚಂದ್ರ ಉದ್ಘಾಟಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಪಶು ವೈದ್ಯಾಧಿಕಾರಿ ಡಾ.ನಾಗರಾಜ್ ಹಾಗೂ ಅರ್ಜುನನ ಮಾವುತರಾಗಿದ್ದ ಬಳ್ಳೆ ಶಿಬಿರದ ಸಣ್ಣಪ್ಪ ಅವರನ್ನು ಸನ್ಮಾನಿಸಲಾಗುವುದು. 'ಅರ್ಜುನ' ಕೃತಿಯ ಲೇಖಕ ಐತಿಚಂಡ ರಮೇಶ್ ಉತ್ತಪ್ಪನವರು ಅರ್ಜುನನ ಕುರಿತು ಮಾತನಾಡಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಮೈಸೂರು ನಗರ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಮ್ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದು, ಮೈಸೂರು ಕಲ್ಚರಲ್ ಅಸೋಸಿಯೇಷನ್ ಅಧ್ಯಕ್ಷ ಎ.ಪಿ.ನಾಗೇಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ರಾಜಯೋಗಿನಿ ಬ್ರಹ್ಮಕುಮಾರಿ ಸೀತಾ ಲಕ್ಷ್ಮೀ ಬೆಹೆಂಜಿಯವರಿಗೆ ಶ್ರದ್ಧಾಂಜಲಿ



ರಾಜಯೋಗಿನಿ ಬ್ರಹ್ಮಾಕುಮಾರಿ ಸೀತಾ ಲಕ್ಷ್ಮೀ ಬೆಹೆಂಜಿಯವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಡಿ.2(ಎಸ್‌ಪಿಎನ್) ಇತ್ತೀಚೆಗೆ ನಿಧನರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಸೀತಾ ಲಕ್ಷ್ಮೀ ಬೆಹೆಂಜಿಯವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಹುಣಸೂರು ರಸ್ತೆಯಲ್ಲಿರುವ ರಾಜಯೋಗ ರಿಟ್ರೀಟ್ ಸೆಂಟರ್‌ನಲ್ಲಿ ಏರ್ಪಡಿಸಿದ್ದ ಮೈಸೂರು ಗಾಯತ್ರಿಪುರಂ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ ಸೇವಾ ಕೇಂದ್ರದ ಮುಖ್ಯ ಸಂಚಾಲಕಿ ರಾಜಯೋಗಿನಿ ಬ್ರಹ್ಮಾಕುಮಾರಿ ಸೀತಾ ಲಕ್ಷ್ಮೀ ಬೆಹೆಂಜಿಯವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು ಉಪವಲಯದ ಮುಖ್ಯ ಸಂಚಾಲಕಿ ರಾಜ ಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ ಪುಷ್ಪ ನಮನ ಸಲ್ಲಿಸಿ ಮಾತನಾಡಿ, ಸೀತಕ್ಕ ರವರು ಇಳಿ ವಯಸ್ಸಿನಲ್ಲೂ ಸಮಯಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಿದ್ದರು. ಇದು ಇಂದಿನ ಯುವ ಬ್ರಹ್ಮಾಕುಮಾರ– ಕುಮಾರಿಯರಿಗೆ ಪ್ರೇರಣೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಯೋಗ ಭವನದ ನಾಗರಾಜ್ ಬಾಯ್, ಪ್ರಾಣೇಶ್ ಬಾಯ್, ಪ್ರಾಂಶುಪಾಲ ರಂಗನಾಥ ಶಾಸ್ತ್ರೀಜಿ, ಬಿಕೆ ಶಾರದಾಜಿ, ಬಿಕೆ ಲಲಿತಮಣೀಜೀ, ಅಮೃತಕ್ಕ, ಮೋಹನಕ್ಕ, ನಾಗಶ್ರೀ ಅಕ್ಕ, ಪ್ರಭಾಮಣೀಜೀ, ಸ್ವಾಮಿ ವಿವೇಕಾನಂದ, ಸದ್ಭಾವನಾ ರಾಜ್ಯ ಪ್ರಶಸ್ತಿ ಪುರಸ್ಕೃತೆ ರಾಜ ಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜೀ, ರಮಾಜಿ, ಬಿಕೆ ಆರಾಧ್ಯ ಹಾಜರಿದ್ದು ನುಡಿನಮನ ಸಲ್ಲಿಸಿದರು.

ಅರಣ್ಯ ಅಪರಾಧ ಪತ್ತೆಗೆ ಬಂಡೀಪುರದಲ್ಲಿ 'ಪತ್ತೆದಾರಿ ಶ್ವಾನ' ತರಬೇತಿ ಕೇಂದ್ರ ಆರಂಭ

- ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶದ ಕಾವಲಿಗಾಗಿ ಶ್ವಾನಗಳಿಗೆ ತರಬೇತಿ
- ಅರಣ್ಯ ಇಲಾಖೆ ವತಿಯಿಂದಲೇ ಟ್ರ್ಯಾಕರ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರ ಸ್ಥಾಪನೆ
- ಬೆಲ್ಜಿಯನ್ ಮೆಲಿನೊಯಿಸ್ ತಳಿಯ ಶ್ವಾನ ಮರಿಗಳಿಗೆ 10 ತಿಂಗಳ ತರಬೇತಿ



ಟ್ರ್ಯಾಕರ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರವನ್ನು ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ಉದ್ಘಾಟಿಸಿದರು.



ತರಬೇತಿಗಾಗಿ ತುದಿರುವ ಬೆಲ್ಜಿಯನ್ ಮೆಲಿನೊಯಿಸಿ ತಳಿಯ ಶ್ವಾನ ಮರಿಗಳೊಂದಿಗೆ ಪಾಲಕ ಸಿಬ್ಬಂದಿ ಕಾಣಬಹುದು.

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಡಿ.2– ರಾಜ್ಯದ ಐದು ಹುಲಿ ಸಂರಕ್ಷಿತ ಪ್ರದೇಶಗಳಲ್ಲಿನ ಅರಣ್ಯ ಅಪರಾಧ ಪತ್ತೆ ಹಾಗೂ ತಡೆಗಾಗಿ ಅರಣ್ಯ ಇಲಾಖೆ 'ಪತ್ತೆಧಾರಿ ಶ್ವಾನ'ಗಳ ಮೊರೆ ಹೋಗಲು ನಿರ್ಧರಿಸಿದ್ದು, ಬಂಡೀಪುರದ ಮೇಲುಕಾಮನಹಳ್ಳಿಯಲ್ಲಿ ಟ್ರ್ಯಾಕರ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರ ಆರಂಭಿಸಿ ಈ ಶ್ವಾನ ಮರಿಗಳಿಗೆ ತರಬೇತಿ ಆರಂಭಿಸಿದೆ.

ಕರ್ನಾಟಕ ಅರಣ್ಯ ಇಲಾಖೆಯ ಪೈಲೆಟ್ ಪ್ರಾಜೆಕ್ಟ್ ಆಗಿರುವ ಟ್ರ್ಯಾಕರ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರವು ಅರಣ್ಯ ಇಲಾಖೆಯು ಪತ್ತೆಧಾರಿ ಶ್ವಾನಗಳನ್ನು ಸಜ್ಜುಗೊಳಿಸಲು ಮುಂದಾಗಿದೆ. ಇದು ವರೆಗೂ ಅರಣ್ಯ ಇಲಾಖೆ ಪತ್ತೆಧಾರಿ ಶ್ವಾನಗಳ ತಯಾರಿಗೆ ಹರಿಯಾಣದಲ್ಲಿರುವ ಇಂಡೋ–ಟಿಬೆಟ್ ಬಾರ್ಡರ್ ಪೊಲೀಸ್ ಫೋರ್ಸ್ ಮೊರೆ ಹೋಗುತ್ತಿತ್ತು. ಆದರೆ, ಇದೀಗ ಅರಣ್ಯ ಇಲಾಖೆಯು ತಮಗೆ ಬೇಕಾದ ಪತ್ತೆಧಾರಿ ಶ್ವಾನವನ್ನು ಸಜ್ಜುಗೊಳಿಸುವುದಕ್ಕಾಗಿ ತರಬೇತಿ ಕೇಂದ್ರ ಸ್ಥಾಪಿಸಿದೆ.

ರಾಜ್ಯ ಮೊಟ್ಟ ಮೊದಲ ಹುಲಿ ಸಂರಕ್ಷಿತ ಪ್ರದೇಶದ ಹೆಗ್ಗಳಿಕೆ ಹೊಂದಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಆಡಳಿತ ವಿಭಾಗ ಹಾಗೂ ಸಫಾರಿ ಕೇಂದ್ರ ವಿರುವ ಮೇಲುಕಾಮನಹಳ್ಳಿ ಬಳಿ ಟ್ರ್ಯಾಕರ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರ ಸ್ಥಾಪಿಸಿದೆ. ರಾಜ್ಯದಲ್ಲಿ ಪ್ರಸ್ತುತ ಐದು ಹುಲಿ ಸಂರಕ್ಷಿತ ಪ್ರದೇಶವಿದ್ದು, ಒಂದೊಂದು ಹುಲಿ ಸಂರಕ್ಷಿತ ಪ್ರದೇಶಕ್ಕೂ ತಲಾ ಎರಡು ಶ್ವಾನದಂತೆ ಒಟ್ಟು 10 ಮರಿಗಳಿಗೆ ತರಬೇತಿ ನೀಡಲು ಬೇಕಾದ ಸೌಲಭ್ಯ ಕಲ್ಪಿಸಲಾಗಿದೆ. ತರಬೇತಿ ಕೇಂದ್ರದಲ್ಲಿ ಒಟ್ಟು 12 ಶ್ವಾನಗಳಿರಿಸಲು ಕೊಠಡಿ(ಕೆನಲ್) ಹಾಗೂ ಒಂದು ಸ್ಟೋರ್ ರೂಮ್ ಹೊಂದಿದೆ.

ಬೆಲ್ಜಿಯನ್ ಮಲಿನೊನಿಸ್ ತಳಿ: ಪತ್ತೆಧಾರಿ ಶ್ವಾನ ದಳಕ್ಕೆ ಜರ್ಮನ್ ಶೆಫರ್ಡ್ ಹಾಗೂ ಬೆಲ್ಜಿಯನ್ ಮಲಿನೊಯಿಸ್ ತಳಿಯ ಶ್ವಾನಗಳು ಸೂಕ್ತವಾಗಿದ್ದು, ಕರ್ನಾಟಕ ಅರಣ್ಯ ಇಲಾಖೆ ಟ್ರ್ಯಾಕರ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರದಲ್ಲಿ ಮೊದಲ ಹಂತದ ತರಬೇತಿಯಲ್ಲಿ ಬೆಲ್ಜಿಯನ್ ಶೆಫರ್ಡ್ ಎಂದು ಕರೆಯುವ ಬೆಲ್ಜಿಯನ್ ಮಲನೊಯಿಸ್ ತಳಿಯ 10 ಮರಿಗಳನ್ನು ತರಲು ಸಂಸ್ಥೆಯೊಂದಕ್ಕೆ ಜವಾಬ್ದಾರಿ ವಹಿಸಿತ್ತು. ಆ ಸಂಸ್ಥೆ ತಂದಿದ್ದ 10 ಮರಿಗಳಲ್ಲಿ ಎರಡು ಮರಿಗಳನ್ನು ಕೆಲ ಕಾರಣದಿಂದ ತಿರಸ್ಕರಿಸಿ, 8 ಮರಿಗಳಿಗೆ ತರಬೇತಿ ನೀಡಲಾಗುತ್ತಿದ್ದು, ಇನ್ನು ಒಂದು ವಾರದಲ್ಲಿ ಮತ್ತೆರಡು ಮರಿಗಳು ತರಬೇತಿ ಕೇಂದ್ರ ಪ್ರವೇಶಿಸಲಿವೆ. ಶ್ವಾನ ಮರಿಗಳಿಗೆ ಒಟ್ಟು 10 ತಿಂಗಳು ತರಬೇತಿ ನೀಡಲು ಉದ್ದೇಶಿಸಲಾಗಿದೆ. ಬೆಂಗಳೂರಿನ ಅಮೃತ್ ಡಾಗ್ ಗುರು ಸರ್ವಿಸ್ ಸಂಸ್ಥೆಯ ಸಮರ್ಥ್ ನೇತೃತ್ವದಲ್ಲಿ ಶ್ವಾನ ಮರಿಗಳಿಗೆ ಅರಣ್ಯ ಅಪರಾಧ ಪತ್ತೆಹಚ್ಚುವಿಕೆಗೆ ಸಂಬಂಧಿಸಿದಂತೆ ತರಬೇತಿ ನೀಡಲಾಗುತ್ತದೆ.

> **ಬಂಡೀಪುರದ ರಾಣಾ**
>
> ಈ ಹಿಂದೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿದ್ದ ಜರ್ಮನ್ ಶೆಫರ್ಡ್ ತಳಿಯ ಪತ್ತೆಧಾರಿ ಶ್ವಾನ 'ರಾಣ' ತನ್ನ ಧೈರ್ಯ ಕಾರ್ಯದಿಂದ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಹತ್ತಾರು ಬೇಟೆಗಾರರು, ಗಂಧದ ಮರ ಕಳ್ಳರು, ಮರಗಳ್ಳರು, ಅರಣ್ಯಕ್ಕೆ ಬೆಂಕಿ ಇಟ್ಟವರನ್ನು ವಾಸನೆ ಗ್ರಹಿಕೆ ಮೂಲಕ ಪತ್ತೆ ಮಾಡಿತ್ತು. ಅಲ್ಲದೆ, ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಟೀ ಎಸ್ಟೇಟ್‌ನಲ್ಲಿ ಜನರ ಮೇಲೆರಗಿ ಕೊಂದು ಹಾಕುತ್ತಿದ್ದ ಹುಲಿಯ ಜಾಡನ್ನು ಪತ್ತೆ ಮಾಡಿತ್ತು. 8 ವರ್ಷ ಯಶಸ್ವಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದ ರಾಣ ಒಂದೂವರೆ ವರ್ಷದ ಹಿಂದೆ ಮೃತಪಟ್ಟಿತ್ತು. ಪ್ರಸ್ತುತ ರಾಣನ ಸ್ಥಾನ ತುಂಬಲು 'ದ್ರೋಣ' ಪತ್ತೆದಾರಿ ಶ್ವಾನ ಕಾರ್ಯ ನಿರ್ವಹಿಸುತ್ತಿದೆ.

ತಲಾ ಇಬ್ಬರು ಸಿಬ್ಬಂದಿ: ಪ್ರಸ್ತುತ ತರಬೇತಿ ನೀಡುತ್ತಿರುವ ಶ್ವಾನ ಮರಿಗಳನ್ನು ಬಂಡೀಪುರ, ನಾಗರಹೊಳೆ, ಬಿಳಿಗಿರಿ ರಂಗನಾಥ ಹುಲಿ ಸಂರಕ್ಷಿತ ಪ್ರದೇಶ, ಭದ್ರಾ ಹಾಗೂ ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೆ ತಲಾ ಎರಡು ಶ್ವಾನಗಳನ್ನು ನಿಯೋಜಿಸಲಾಗುತ್ತದೆ. ಅದಕ್ಕಾಗಿ ಪ್ರತಿ ಹುಲಿ ಸಂರಕ್ಷಿತ ಪ್ರದೇಶದಿಂದ ಪತ್ತೆಧಾರಿ ಶ್ವಾನಗಳನ್ನು ನಿರ್ವಹಣೆ ಮಾಡಲು ಒಂದೊಂದು ಶ್ವಾನಕ್ಕೆ ಇಬ್ಬರು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. 10 ಶ್ವಾನ ಮರಿಗಳೊಂದಿಗೆ ಒಟ್ಟು 20 ಸಿಬ್ಬಂದಿ ತರಬೇತಿ ಪಡೆದುಕೊಳ್ಳಲು ಆಗಮಿಸಿದ್ದಾರೆ.

ಟ್ರ್ಯಾಕರ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರ ಉದ್ದೇಶ: ಬಂಡೀಪುರದ ಮೇಲುಕಾಮನಹಳ್ಳಿಯಲ್ಲಿ ಸ್ಥಾಪಿಸಿರುವ ಟ್ರ್ಯಾಕರ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರ ಅರಣ್ಯ ಅಪರಾಧ ಪತ್ತೆಗಾರಿಕೆಯ ಪ್ರಮುಖ ಉದ್ದೇಶ ಹೊಂದಿದೆ. ಅರಣ್ಯ ಅಪರಾಧಿಗಳ ಪತ್ತೆ, ಮಾನವ–ಪ್ರಾಣಿ ಸಂಘರ್ಷ ತಡೆ, ಬೇಸಿಗೆ ವೇಳೆ ಅರಣ್ಯಕ್ಕೆ ಬೆಂಕಿ ಹಾಕುವವರ ಪತ್ತೆ ಮಾಡುವುದೂ ಸೇರಿದಂತೆ ಇನ್ನಿತರ ಅಪರಾಧ ಕೃತ್ಯ ನಡೆಸಿದವರನ್ನು ಸುಲಭವಾಗಿ ಪತ್ತೆ ಮಾಡುವ ನಿಟ್ಟಿನಲ್ಲಿ ಪತ್ತೆಧಾರಿ ಶ್ವಾನಗಳನ್ನು ಬಳಸಿಕೊಳ್ಳಲಾಗುತ್ತದೆ. ಈ ಉದ್ದೇಶದಿಂದ ಟ್ರ್ಯಾಕರ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರ ಪ್ರಮುಖ ಪಾತ್ರವಹಿಸುತ್ತದೆ.

ತರಬೇತಿ ಕೇಂದ್ರ ಉದ್ಘಾಟನೆ: ಟ್ರ್ಯಾಕರ್ ಡಾಗ್ ಸ್ಕ್ವಾಡ್ ತರಬೇತಿ ಕೇಂದ್ರವನ್ನು ಸೋಮವಾರ ಬೆಳಗ್ಗೆ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್ ಕುಮಾರ್, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಎಸ್.ಪ್ರಭಾಕರನ್, ಎಸಿಎಫ್ ಎನ್.ಪಿ.ನವೀನ್ ಕುಮಾರ್, ಆರ್‌ಎಫ್‌ಓ ಬಿ.ಎಂ.ಮಲ್ಲೇಶ್, ಶ್ವಾನ ತರಬೇತಿದಾರ ಅಮೃತ್ ಶ್ರೀಧರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಹೆಣ್ಣಿಗೆ ಸಹನೆ ಇರುವುದರಿಂದಲೇ ಎಲ್ಲಾ ಕ್ಷೇತ್ರದಲ್ಲಿ ಸಕ್ರೀಯರಾಗಿದ್ದಾರೆ

ಮೈಸೂರು ಜಿಪಂ ಸಿಇಓ ಗಾಯತ್ರಿ ಪ್ರಶಂಸೆ

ಮೈಸೂರು, ಡಿ.2(ಎಂಕೆ)– ಹೆಣ್ಣಿಗೆ ಸಹನೆಯ ಶಕ್ತಿ ಹೆಚ್ಚಿದ್ದು, ಎಲ್ಲಾ ಕ್ಷೇತ್ರದಲ್ಲೂ ಸಕ್ರೀಯವಾಗಿ ತೊಡಗಿಕೊಳ್ಳುತ್ತಿದ್ದಾರೆ ಎಂದು ಜಿಪಂ ಸಿಇಓ ಕೆ.ಎಂ.ಗಾಯತ್ರಿ ಅಭಿವ್ಯಕ್ತಪಡಿಸಿದರು.

ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಸಂಚಲನ ಮೈಸೂರು ವತಿಯಿಂದ ಆಯೋಜಿಸಿರುವ ಮಹಿಳಾ ನಾಟಕೋತ್ಸವ ಹಾಗೂ ಸ್ತ್ರೀ ಆಧಾರಿತ ವರ್ಣಚಿತ್ರಗಳ ಪ್ರದರ್ಶನ 'ಚಿನ್ ಅಪ್'ಗೆ ಸೋಮವಾರ ಚಾಲನೆ ನೀಡಿ ಮಾತನಾಡಿದ ಅವರು, ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ತೊಡಗಿಸಿಕೊಳ್ಳುತ್ತಿದ್ದು, ಎಲ್ಲೆಡೆ ಸಕ್ರೀಯರಾಗಿದ್ದಾರೆ. ಹೆಣ್ಣು ಕುಟುಂಬ ಮತ್ತು ತಾನು ಪ್ರತಿನಿಧಿಸುವ ಕ್ಷೇತ್ರವೆರಡನ್ನೂ ಸುಲಲಿತವಾಗಿ ನಿಭಾಯಿಸಬಲ್ಲಳು. ಪುರುಷರೂ ಅವರ ಕೆಲಸಗಳಿಗೆ ಬೆನ್ನೆಲುಬಾಗಿ ನಿಂತು ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು.



ಮಹಿಳಾ ನಾಟಕೋತ್ಸವದಲ್ಲಿ ಹಿರಿಯ ರಂಗಕರ್ಮಿಗಳಾದ ಇಂದಿರಾ ನಾಯರ್ ಹಾಗೂ ಕೆ ಆರ್ ಸುಮತಿ ಅವರಿಗೆ ರಂಗ ಗೌರವ ನೀಡಿ ಅಭಿನಂದಿಸಲಾಯಿತು. ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಂಚಲನ ಮೈಸೂರು ತಂಡದ ದೀಪಕ್ ಮೈಸೂರು ಉಪಸ್ಥಿತರಿದ್ದರು.

ಮಹಿಳಾ ನಾಟಕೋತ್ಸವ ಆಯೋಜನೆ ಮಾದರಿ ನಡೆಯಾಗಿದ್ದು, ಈ ರೀತಿಯ ಕಾರ್ಯಕ್ರಮಗಳ ಮೂಲಕ ಮಹಿಳೆಯರನ್ನು ಪ್ರೋತ್ಸಾಹಿಸಲು ಸಾಧ್ಯ. ನಾಟಕ ರಂಗವು ಮಹಿಳೆಯರ ಮೇಲಾಗುವ ಶೋಷಣೆ ಕುರಿತ ಅನೇಕ ಸಮಸ್ಯೆಗಳನ್ನು ಜನರಿಗೆ ಮನದಟ್ಟಾಗುವಂತೆ ವಿವರಿಸಿದೆ ನಾಟಕೋತ್ಸವದಲ್ಲಿ ಯುವತಿಯರಿಗೆ ಸ್ಫೂರ್ತಿಯಾಗಬಲ್ಲ ಸಂದೇಶವುಳ್ಳ ನಾಟಕಗಳು ಹೆಚ್ಚು ಪ್ರದರ್ಶನವಾಗಲಿ ಎಂದು ಹಾರೈಸಿದರು.

ಮೈಸೂರು ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು ಮಾತನಾಡಿ, ಮನಸ್ಸಿನಲ್ಲಿ ಉಳಿದ ಆಲೋಚನೆಗಳನ್ನು ಚಿತ್ರಕಲೆ ಹಾಗೂ ನಾಟಕದ ಮೂಲಕ ಜನರಿಗೆ ತಲುಪಿಸಲು ಸಾಧ್ಯ. ಯುವ ಸಮುದಾಯ ಜಗತ್ತನ್ನು ವಿಸ್ತಾರವಾಗಿ ಕಾಣುತ್ತದೆ. ಹೀಗಾಗಿ ಸಮಾಜದಲ್ಲಿರುವ ಸಮಸ್ಯೆಗಳ ಬಗ್ಗೆ ಕಲೆಗಳ ಮೂಲಕ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ರಂಗ ಗೌರವ: ಇದೇ ವೇಳೆ ಹಿರಿಯ ರಂಗಕರ್ಮಿಗಳಾದ ಇಂದಿರಾ ನಾಯರ್ ಹಾಗೂ ಕೆ.ಆರ್.ಸುಮತಿ ಅವರಿಗೆ ರಂಗ ಗೌರವ ನೀಡಿ ಅಭಿನಂದಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಸಂಚಲನ ಮೈಸೂರು ತಂಡದ ದೀಪಕ್ ಮೈಸೂರು, ಕಲಾವಿದೆ ಪಾವನ ಉಪಸ್ಥಿತರಿದ್ದರು.

> **'ಮೈ ತೆನ್ನು ಫಿರ್ ಮಿಲಾಂಗಿ' ನಾಟಕ ಪ್ರದರ್ಶನ...**
>
> ಸಭಾ ಕಾರ್ಯಕ್ರಮದ ಬಳಿಕ ನಟರಾಜ್ ಹೊನ್ನವಳ್ಳಿ ರಂಗ ಪಠ್ಯ ಮತ್ತು ನಿರ್ದೇಶನದ 'ಮೈ ತೆನ್ನು ಫಿರ್ ಮಿಲಾಂಗಿ' ಏಕವ್ಯಕ್ತಿ ಪ್ರಯೋಗವನ್ನು ಚಾಮರಾಜನಗರದ ಶಾಂತಲಾ ಕಲಾವಿದರು ಪ್ರದರ್ಶಿಸಿದರು. ನಾಳೆ(ಡಿ.3) ಶಶಿ ಥಿಯೇಟರ್ ಪ್ರಸ್ತುತಪಡಿಸುವ 'ಉರಿಯ ಉಯ್ಯಾಲೆ' ನಾಟಕ ಪ್ರದರ್ಶನಗೊಳ್ಳಲಿದೆ.

ದಸರಾ ವಸ್ತುಪ್ರದರ್ಶನದಲ್ಲಿ ರಂಜಿಸಿದ ಮಿಮಿಕ್ರಿ ಹಾಸ್ಯೋತ್ಸವ



ದಸರಾ ವಸ್ತುಪ್ರದರ್ಶನದಲ್ಲಿ ನಡೆದ ಮಿಮಿಕ್ರಿ ಹಾಸ್ಯೋತ್ಸವ ಕಾರ್ಯಕ್ರಮದಲ್ಲಿ ಕಲಾವಿದರನ್ನು ಅಭಿನಂದಿಸಲಾಯಿತು.

ಮೈಸೂರು, ಡಿ.2(ಎಂಕೆ)– ಮೈಸೂರು ದಸರಾ ವಸ್ತುಪ್ರದರ್ಶನದ ಪಿ.ಕಾಳಿಂಗ ರಾವ್ ಗಾನಮಂಟಪದಲ್ಲಿ ಮಿಮಿಕ್ರಿ ಹಾಸ್ಯೋತ್ಸವ ಕಾರ್ಯಕ್ರಮ ನಡೆಯಿತು.

ಮೆಲ್ಲಹಳ್ಳಿ ರಾಜೇಶ್.ಸಿ ಗೌಡ ನೇತೃತ್ವದಲ್ಲಿ ನಡೆದ ಮಿಮಿಕ್ರಿ ಹಾಸ್ಯೋತ್ಸವದಲ್ಲಿ ಖ್ಯಾತ ಮಿಮಿಕ್ರಿ ಕಲಾವಿದ ಗೋಪಿ, ಖ್ಯಾತನಾಮರ ಧ್ವನಿ ಅನುಕರಿಸಿ ಹಾಸ್ಯದ ಹೊನಲು ಹರಿಸಿದರೆ, ಇತರ ಕಲಾವಿದರು ಸಾಹಸ ಸಿಂಹ ವಿಷ್ಣುವರ್ಧನ್, ಕರಾಟೆ ಕಿಂಗ್ ಶಂಕರ್ ನಾಗ್, ರೆಬಲ್‌ಸ್ಟಾರ್ ಅಂಬರೀಶ್ ಇನ್ನಿತು ಜನಪ್ರಿಯ ಕಲಾವಿದರಂತೆ ನಟಿಸಿ, ಭರಪೂರ ಮನರಂಜನೆ ನೀಡಿದರು.


ಕಲಾವಿದರಾದ ಡಿಂಗ್ರಿ ನಾಗರಾಜ್, ರೇಖಾದಾಸ್, ಸಿಲ್ಲಿಲಲ್ಲಿ ಗೌಡ್ರು, ಜ್ಯೂನಿಯರ್ ಮಾಲಾಶ್ರೀ ಮಂಜುಳ, ಜ್ಯೂನಿಯರ್ ರಕ್ಷಿತಾ (ಲತಾ), ಜ್ಯೂನಿಯರ್ ವಿಷ್ಣುವರ್ಧನ್ ಲಕ್ಷ್ಮಣ್, ಜ್ಯೂನಿಯರ್ ಅಂಬರೀಶ್ ಸುರೇಶ್, ಜ್ಯೂನಿಯರ್ ಶಂಕರನಾಗ್, ನಿರೂಪಕರಾದ ಶಿವಮೊಗ್ಗ ಭಾಸ್ಕರ್, ಅಜಯ್ ಶಾಸ್ತ್ರಿ ಹಾಗೂ ಕಲಾವಿದೆಯರಾದ ವಿದ್ಯಶ್ರೀ, ಅಕ್ಷತಾ, ಅರ್ಪಿತಾ, ವರ್ಷ ನಂದಿನಿ, ಶಿಲ್ಪಾ, ಪ್ರಶಾಂತ್, ಅಭಿಲಾಷ್, ಐಶ್ವರ್ಯ ಮತ್ತು ಸಂಜನಾ ಹಾಸ್ಯ ಚಟಾಕಿ ಹಾರಿಸಿ ನೆರೆದಿದ್ದವರ ಗಮನ ಸೆಳೆದರು.

ಇದೇ ವೇಳೆ ಕಲಾವಿದರನ್ನು ಅಭಿನಂದಿಸಿದ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಮಾತನಾಡಿ, ಪ್ರತಿಯೊಂದು ಜೀವಕ್ಕೂ ಆರೋಗ್ಯ ಎನ್ನುವುದು ಬಹಳ ಮುಖ್ಯ. ಒತ್ತಡದ ಬದುಕಿನಲ್ಲಿ ನೆಮ್ಮದಿ, ಆರೋಗ್ಯ ಕಾಪಾಡಿಕೊಳ್ಳದೇ ದೇಹವನ್ನು ಹದಗೆಡಿಸಿಕೊಂಡು ಔಷಧಿ, ವಿಮೆ, ಲ್ಯಾಬ್ ಟೆಸ್ಟ್ ಎನ್ನುವ ಬದಲು ಪ್ರತಿದಿನ ಧ್ಯಾನ, ಸಂಗೀತ, ಕ್ರೀಡೆ ಚಟುವಟಿಕೆಯಲ್ಲಿ ಭಾಗವಹಿಸಬೇಕು. ಹಿರಿಯರು ಮಕ್ಕಳೊಂದಿಗೆ ಸಮಯ ಕಳೆಯಬೇಕು. ಹಾಸ್ಯಕ್ಕೆ ನಮ್ಮ ಮಾನಸಿಕ ಒತ್ತಡವನ್ನು ದೂರಮಾಡುವ ಶಕ್ತಿಯಿದೆ ಎಂದರು.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ಕೆ.ರುದ್ರೇಶ್, ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ರಘುರಾಜೇ ಅರಸ್, ಕಾರ್ಯಾಧ್ಯಕ್ಷ ಮಲ್ಲೇಶ್, ಉಪಾಧ್ಯಕ್ಷರಾದ ಸಯ್ಯದ್ ಅಶ್ರತುಲ್ಲಾ, ಗಯಾಜ್ ಅಹಮದ್, ಮಲ್ಲಿಕಾರ್ಜುನ ಮಲ್ಲಿಕ್, ರಾಜೇಶ್.ಸಿ ಗೌಡ, ಫಾಸಿಲ್ ಖಾನ್, ಫೈರೋಜ್ ಖಾನ್, ಪದ್ಮನಾಭನ್ ಗುಂಡಾ, ಮಹೇಂದ್ರ ಕಾಗಿನಲೆ, ರಂಗಸ್ವಾಮಿ ಪಾಪು, ಸದಸ್ಯರಾದ ಮಹೇಶ್, ಚಂದ್ರಕಲಾ, ಕೋಮಲಾ, ವಿಜಯಲಕ್ಷ್ಮಿ ಮತ್ತಿತರರಿದ್ದರು.

ಯುವ ಜನತೆ ನಿರಂತರವಾಗಿ ಕನ್ನಡ ಬಳಸುವುದು ಅವಶ್ಯ

ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಕಾಳಚನ್ನೇಗೌಡ ಅಭಿಮತ



'ಕನ್ನಡ ಭಾಷೆಯ ಬಿಕ್ಕಟ್ಟು ಮತ್ತು ಪರಿಹಾರಗಳು' ವಿಷಯ ಕುರಿತು ಸಂವಾದ ಕಾರ್ಯಕ್ರಮವನ್ನು ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಕೆ.ಕಾಳಚನ್ನೇಗೌಡ ಉದ್ಘಾಟಿಸಿದರು.

ಮೈಸೂರು, ಡಿ.2– ಕನ್ನಡ ಭಾಷೆ ಬೇರೆಲ್ಲ ಭಾಷೆಗಿಂತ ವಿಶಿಷ್ಟವಾದುದು. ಇಂದಿನ ಯುವಜನತೆ ಕನ್ನಡ ಕಲಿತು ಸಂವಹನದಲ್ಲಿ ನಿರಂತರ ಬಳಕೆ ಮಾಡಬೇಕು ಎಂದು ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಕೆ.ಕಾಳಚನ್ನೇಗೌಡ ಹೇಳಿದರು.

ಮೈಸೂರು ಬೋಗಾದಿ ಕ್ರಿಯಾ ಶೈಕ್ಷಣಿಕ ಸಂಪನ್ಮೂಲ ಕೇಂದ್ರದಲ್ಲಿ ಕ್ರಿಯಾ ಅಭಿವ್ಯಕ್ತಿ ಸಂಸ್ಥೆಯಿಂದ ರಾಜ್ಯೋತ್ಸವ ಅಂಗವಾಗಿ ಏರ್ಪಡಿಸಿದ್ದ 'ಕನ್ನಡ ಭಾಷೆಯ ಬಿಕ್ಕಟ್ಟು ಮತ್ತು ಪರಿಹಾರಗಳು' ವಿಷಯ ಕುರಿತು ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ತಲೆಮಾರು ಕನ್ನಡನಾಡು ರೂಪುಗೊಂಡ ಬಗೆ ಅರಿಯಬೇಕು ಎಂದರು.

ಸಾಹಿತಿ ಸತೀಶ್ ಟಿ.ಜವರೇಗೌಡ ಮಾತನಾಡಿ, ಸಾಹಿತ್ಯ ಎನ್ನುವುದು ಲಿಖಿತ ರೂಪದಲ್ಲಿ ನಮ್ಮಗಿಷ್ಟದ ಭಾಷೆಯಲ್ಲಿ ದಾಖಲಿಸಿ ಮುಂದಿನ ತಲೆಮಾರಿಗೆ ಪರಿಚಯಿಸುವ ವಿಧಾನ. ಇದರಿಂದ ಭಾಷೆಯ ಬೆಳವಣಿಗೆಗೆ ಉತ್ತಮ ಕೊಡುಗೆ ನೀಡಿದಂತಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ವೇದಿಕೆಯಲ್ಲಿ ಬರಹಗಾರ ನೀ.ಗೂ.ರಮೇಶ್, ಪ್ರಾಧ್ಯಾಪಕ ಪಿ.ಎನ್.ಹೇಮಚಂದ್ರ, ಕ್ರಿಯಾ ಸಂಸ್ಥಾಪಕ ಪ್ರಸನ್ನ ಕುಮಾರ್ ಕೆರಗೋಡು, ಸಂಯೋಜಕ ಎಸ್.ಮಂದಾರ, ಬಿ.ಕುಮಾರ್, ಲೋಕೇಶ್, ಬಿ.ಪುನೀತ್ ಕುಮಾರ್, ರಾಜೇಶ್ವರಿ, ವೀಣಾ, ಆರ್.ಭರತ್, ಜೆ.ನಂದಿನಿ, ಸಿದ್ದಪ್ಪ, ಶಾಲಿನಿ, ರಾಜೀವ್ ಶರ್ಮ, ಸುಪ್ರಿಯಾ ಶಿವಣ್ಣ ಪಾಲ್ಗೊಂಡಿದ್ದರು.

ತಳ ಸಮುದಾಯದ ಆಶಾಕಿರಣ ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಸಿ ಡಿ.5ರ ಸಮಾವೇಶಕ್ಕೆ ಭಾರೀ ಸಂಖ್ಯೆಯಲ್ಲಿ ಬನ್ನಿ

ಕರ್ನಾಟಕ ಶೋಷಿತ ಸಮುದಾಯಗಳ ಒಕ್ಕೂಟ ಮನವಿ

ಮೈಸೂರು, ಡಿ.2(ಎಸ್‌ಪಿಎಸ್)– ತಳ ಸಮುದಾಯದ ಆಶಾಕಿರಣ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿಜೆಪಿ–ಜೆಡಿಎಸ್ ಪಕ್ಷದ ಮುಖಂಡರ ಅಪಪ್ರಚಾರ ವಿರೋಧಿಸಿ ಹಾಸನದಲ್ಲಿ ಡಿ.5ರಂದು ನಡೆಯುವ ಸ್ವಾಭಿಮಾನಿ ಸಮಾವೇಶಕ್ಕೆ ಮೈಸೂರು ವಿಭಾಗದ ಜಿಲ್ಲೆಗಳ ಸಿದ್ದರಾಮಯ್ಯ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಕರ್ನಾಟಕ ಶೋಷಿತ ಸಮದಾಯಗಳ ಒಕ್ಕೂಟ ಸೋಮವಾರ ಮನವಿ ಮಾಡಿದೆ.



ಜಲದರ್ಶಿನಿ ಸರ್ಕಾರಿ ಅತಿಥಿಗೃಹದಲ್ಲಿ ಹಾಸನದಲ್ಲಿ ಡಿ.5ರಂದು ನಡೆಯುವ ಸ್ವಾಭಿಮಾನಿ ಸಮಾವೇಶ ಕುರಿತು ಕರ್ನಾಟಕ ಶೋಷಿತ ಸಮುದಾಯ ಒಕ್ಕೂಟದ ಮುಖಂಡರು ಸಭೆ ನಡೆಸಿದರು.

ಮೈಸೂರು ಜಲದರ್ಶಿನಿ ಸರ್ಕಾರಿ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಒಕ್ಕೂಟದ ಸಂಚಾಲಕ ಮಾವಳ್ಳಿ ಶಂಕರ್, ಪ್ರಸ್ತುತ ಶೋಷಿತ ಸಮಾಜದ ನಾಯಕತ್ವಕ್ಕೆ ಸಂಕಷ್ಟ ಎದುರಾಗಿದೆ. ಪ್ರಜಾಪ್ರಭುತ್ವ ವಿರೋಧಿಗಳಿಗೆ ಸೆಡ್ಡು ಹೊಡೆಯುವ ಸಿದ್ಧಾಂತ ಅಳವಡಿಸಿಕೊಂಡಿರುವ ಕಾಂಗ್ರೆಸ್ ಪಕ್ಷವನ್ನು ತಳ ಸಮುದಾಯ ಬೆಂಬಲಿಸಬೇಕಾಗಿದೆ ಎಂದರು.

ದೇಶದ ಸಂವಿಧಾನ ಉಳಿಯಬೇಕು. ತಳ ಸಮುದಾಯದ ನಾಯಕತ್ವ ಗಟ್ಟಿಯಾಗಬೇಕು. ಪ್ರಜಾಪ್ರಭುತ್ವ ಉಳಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಬೆಂಬಲಿಸಬೇಕಾಗಿದೆ. ಹಾಗಾಗಿ ಹಾಸನದಲ್ಲಿ ಡಿ.5 ರಂದು ನಡೆಯುವ ಬೃಹತ್ ಸಮಾವೇಶಕ್ಕೆ ಎಸ್ಸಿ, ಎಸ್ಟಿ, ಒಬಿಸಿ ಹಾಗೂ ಇತರೆ ಸಮುದಾಯಗಳು ತಂಡೋಪತಂಡವಾಗಿ ಆಗಮಿಸಿ, ಸಮಾವೇಶ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ವಕೀಲ ಅನಂತನಾಯ್ಕ ಮಾತನಾಡಿ, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರವನ್ನು ದುರ್ಬಲಗೊಳಿಸಲು ಹೆಚ್.ಡಿ.ಕುಮಾರಸ್ವಾಮಿ ಮುಖಾಂತರ ಅಪ್ರಚಾರ ಮಾಡುತ್ತಿರುವ ವರಿಗೆ ಮುಂದಿನ ಚುನಾವಣೆಯಲ್ಲಿ ತಕ್ಕಪಾಠ ಕಲಿಸಬೇಕು. ಬಹುಮತವುಳ್ಳ ಸರ್ಕಾರವನ್ನು ಕೆಡವಿದರೆ, ನಾನು ಬೆಂಬಲಿಸುತ್ತೇನೆ ಎನ್ನುವ ಹೆಚ್‌ಡಿಕೆ ಅವರ ದ್ವಿಮುಖ ನೀತಿ ಅನಾವರಣಗೊಂಡಿದೆ. ಹಾಸನದಲ್ಲಿ ನಡೆಯುವ ಸ್ವಾಭಿಮಾನಿ ಸಮಾವೇಶದ ಮೂಲಕ ಇಡೀ ದೇಶಕ್ಕೆ ಎಚ್ಚರಿಕೆ ಸಂದೇಶ ರವಾನಿಸುವುದು ಮುಖ್ಯ ಉದ್ದೇಶವಾಗಿದೆ ಎಂದರು.

ಮುಖಂಡ ಕೆ.ಎಂ.ರಾಮಚಂದ್ರಪ್ಪ ಮಾತನಾಡಿ, ಮುಡಾ, ವಾಲ್ಮೀಕಿ ಹಗರಣದಲ್ಲಿ ರಾಜ್ಯಪಾಲರ ಮೂಲಕ ಕಾಂಗ್ರೆಸ್ ಸರ್ಕಾರ ದುರ್ಬಲಗೊಳಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ರಾಜ್ಯದ ಎಲ್ಲಾ ವರ್ಗಗಳಿಗೆ ನೀಡಿರುವ ಜನಪರ ಕಾರ್ಯಕ್ರಮಗಳನ್ನು ನೆನಪು ಮಾಡಿಕೊಂಡು ಬೆಂಬಲ ಸೂಚಿಸುತ್ತೇವೆ ಎಂದರು.

ನಗರ ಪಾಲಿಕೆ ಮಾಜಿ ಸದಸ್ಯ ಶಿವಣ್ಣ ಮಾತನಾಡಿ, ಹಾಸನದಲ್ಲಿ ಡಿ.5ರಂದು ನಡೆಯುವ ಸ್ವಾಭಿಮಾನಿ ಸಮಾವೇಶಕ್ಕೆ ಮೈಸೂರು, ಚಾಮರಾಜನಗರ ಜಿಲ್ಲೆಯ ವತಿಯಿಂದ 1.25 ಲಕ್ಷ ಮಂದಿ ಭಾಗವಹಿಸಲಿದ್ದಾರೆ ಎಂದರು.

ಸಭೆಯಲ್ಲಿ ಶೋಷಿತ ಸಮುದಾಯಗಳ ಮುಖಂಡರಾದ ಆದರ್ಶ ಯಲಪ್ಪ, ಚಳ್ಳಕೆರೆ ರಘು, ಜಗದೀಶ್, ನಾಗರಾಜು, ಮಂಡ್ಯ ಡಿಸಿಸಿ ಅಧ್ಯಕ್ಷ ಎಸ್.ಕೃಷ್ಣ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ, ಚಿಕ್ಕನಾಯಕನಹಳ್ಳಿ ರವಿಕುಮಾರ್, ನಗರ ಪಾಲಿಕೆ ಮಾಜಿ ಸದಸ್ಯ ನಾಗಭೂಷಣ, ಹಿಂದುಳಿದ ವರ್ಗಗಳ ಮುಖಂಡ ಎನ್.ಆರ್.ನಾಗೇಶ್, ಆನಂದ್, ದ್ಯಾವಪ್ಪನಾಯಕ ಸೇರಿದಂತೆ ಇತರರಿದ್ದರು.

> ರಾಜ್ಯದ ಜಿಲ್ಲಾ ಹಾಗೂ ಹೈಕೋರ್ಟ್‌ನ ಸರ್ಕಾರಿ ವಕೀಲರ ನೇಮಕಾತಿಯಲ್ಲಿ ಎಸ್ಸಿಗೆ ಶೇ.17, ಎಸ್ಟಿಗೆ ಶೇ.7ರಷ್ಟು ಸೇರಿದಂತೆ ಒಟ್ಟು ಶೇ.24ರಷ್ಟು ಮೀಸಲಾತಿ ಜಾರಿ ಮಾಡಿರುವುದು ಸ್ವಾಗತಾರ್ಹ. ಹಾಗೆಯೇ ದೇಶದ ವಿವಿಧೆಡೆ ರಾಜ್ಯಗಳ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ನಲ್ಲೂ ಮೀಸಲಾತಿ ಜಾರಿಗೊಳಿಸುವ ಅವಶ್ಯಕತೆ ಇದೆ. ಅದರಲ್ಲೂ ಮಹಿಳೆಯರಿಗೆ ವಿಶೇಷ ಮೀಸಲಾತಿ ಜಾರಿಗೊಳಿಸುವ ಅಗತ್ಯವಿದೆ. ಜೊತೆಗೆ ಮಾದಿಗ ಸಮುದಾಯ ವಕೀಲರ ನೇಮಕಾತಿಯಲ್ಲೂ ಒಳ ಮೀಸಲಾತಿ ಜಾರಿಗೊಳಿಸಿ ಎಂದು ಕೇಳುವುದರಲ್ಲಿ ತಪ್ಪಿಲ್ಲ. ಅವರು ಕೇಳುತ್ತಿರುವುದು ದೊರಕಬೇಕಾದ ನ್ಯಾಯಯುತ ಬೇಡಿಕೆ.
>
> -ಮಾವಳ್ಳಿ ಶಂಕರ್, ದಲಿತ ಮುಖಂಡ

ಮೈಸೂರು ಮಿತ್ರ

ನಿಖಿಲ್ ಕುಮಾರಸ್ವಾಮಿ ನೇತೃತ್ವದ ನಿಯೋಗದಿಂದ ಕೇಂದ್ರ ಸಚಿವ ಪಿಯೂಷ್ ಗೋಯಲ್ ಭೇಟಿ

ತಂಬಾಕು ಬೆಳೆಗಾರರ ಸಂಕಷ್ಟ ಪರಿಹಾರಕ್ಕೆ ಮನವಿ



ನವದೆಹಲಿಯಲ್ಲಿ ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರನ್ನು ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದ ರೈತ ಮುಖಂಡರ ನಿಯೋಗ ಭೇಟಿ ಮಾಡಿ, ಮನವಿ ಸಲ್ಲಿಸಿತು.

ಹುಣಸೂರು, ಡಿ.2– ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ನೇತೃತ್ವದ ರೈತ ಮುಖಂಡರ ನಿಯೋಗ ಸೋಮವಾರ ನವದೆಹಲಿಯಲ್ಲಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿ ರಾಜ್ಯದಲ್ಲಿ ತಂಬಾಕು ಬೆಳೆಗಾರರ ಸಂಕಷ್ಟಗಳನ್ನು ಪರಿಹರಿಸುವಂತೆ ಮನವಿ ಸಲ್ಲಿಸಿತು.

ನಿಯೋಗದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಕೋಲಾರ ಸಂಸದ ಮಲ್ಲೇಶ್‌ಬಾಬು, ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಸಚಿವ ಸಾ.ರಾ.ಮಹೇಶ್ ಹಾಗೂ ರೈತ ಮುಖಂಡರಿದ್ದರು.

ನವದೆಹಲಿಯಲ್ಲಿ ಸೋಮವಾರ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಖಾತೆ ಸಚಿವ ಪಿಯೂಷ್ ಗೋಯಲ್ ಅವರನ್ನು ಭೇಟಿ ಮಾಡಿದ ನಂತರ ನಮ್ಮ ಮನವಿಗೆ ಕೇಂದ್ರ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ನಿಖಿಲ್ ಕುಮಾರಸ್ವಾಮಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನೆರೆ ರಾಜ್ಯಗಳಲ್ಲಿ ತಂಬಾಕು ಬೆಳೆಗಾರರಿಗೆ ಉತ್ತಮ ದರ ಸಿಗುತ್ತಿದೆ. ಕರ್ನಾಟಕದ ಬೆಳೆಗಾರರಿಗೆ ಸಿಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ತಾವು ಗಮನ ಹರಿಸಿ ಬೆಳೆಗಾರರಿಗೆ ಉತ್ತಮ ಬೆಲೆ ಸಿಗುವಂತೆ ಮಾಡಬೇಕು. ಆಂಧ್ರಪ್ರದೇಶದಲ್ಲಿ ತಂಬಾಕಿನ ಬೆಲೆ ಪ್ರತಿ ಕೆಜಿಗೆ ಸರಾಸರಿ 320 ರೂ. ಇದೆ. ಕರ್ನಾಟಕದಲ್ಲಿ ಪ್ರತಿ ಕೆಜಿಗೆ 265 ರೂ. ಇದೆ. ಕಡಿಮೆ ಬೆಲೆಯಿಂದಾಗಿ ಬಡ ಹಾಗೂ ಮಧ್ಯಮ ಗಾತ್ರದ ಬೆಳೆಗಾರರಿಗೆ ಬಹಳ ನಷ್ಟವಾಗುತ್ತಿದೆ ಎಂಬ ಅಂಶವನ್ನು ಗೋಯಲ್ ಅವರ ಗಮನಕ್ಕೆ ತರಲಾಗಿದೆ ಎಂದು ಅವರು ತಿಳಿಸಿದ್ದಾರೆ.

ತಂಬಾಕು ಬೆಳೆಯನ್ನು ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆ ವ್ಯಾಪ್ತಿಗೆ ತಂದರೆ ಸಣ್ಣ, ಅತಿ ಸಣ್ಣ ಹಾಗೂ ಮಧ್ಯಮ ಗಾತ್ರದ ಬೆಳೆಗಾರರಿಗೆ ಸಹಾಯ ಆಗುತ್ತದೆ ಹಾಗೂ ತಂಬಾಕು ಬೆಳೆಗೂ ಬೆಂಬಲ ಬೆಲೆ ನೀಡಿದರೆ ಬಡ ಕುಟುಂಬಗಳಿಗೆ ಆರ್ಥಿಕವಾಗಿ ಶಕ್ತಿ ತುಂಬಿದಂತೆ ಆಗುತ್ತದೆ. ಐಟಿಸಿಯಂತಹ ಬೃಹತ್ ಕಂಪನಿಗಳು ಇಂತಹ ಬೆಳೆಗಾರರಿಂದ ನೇರವಾಗಿ ತಂಬಾಕು ಖರೀದಿಸುವಂತೆ ಸೂಚನೆ ಕೊಡಬೇಕು ಎಂದು ಪಿಯೂಷ್ ಗೋಯಲ್ ಅವರಲ್ಲಿ ಮನವಿ ಮಾಡಲಾಗಿದೆ ಎಂದು ನಿಖಿಲ್ ತಿಳಿಸಿದ್ದಾರೆ.

ಸಚಿವರ ಭೇಟಿ ವೇಳೆ ಮಾತನಾಡಿದ ಹುಣಸೂರು ಶಾಸಕ ಜಿ.ಡಿ.ಹರೀಶ್ ಗೌಡ, ಹುಣಸೂರು, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ಕೆ.ಆರ್.ನಗರ ಮತ್ತು ಅರಕಲಗೂಡು ತಾಲೂಕು ರಾಮನಾಥಪುರದಲ್ಲಿ ರೈತರು ಬೆಳೆಯುವ ಎಫ್‌ಸಿವಿ ತಂಬಾಕು ಅಂತಾರಾಷ್ಟ್ರೀಯ ಮಾರುಕಟ್ಟೆ ಹೊಂದಿದೆ. ಆದರೆ ಪ್ರತಿವರ್ಷ ತಂಬಾಕು ಬೆಳೆವ ರೈತರಿಗೆ ನ್ಯಾಯಯುತ ದರ ಪಡೆಯುವಲ್ಲಿ ವಿಫಲರಾಗುತ್ತಿದ್ದಾರೆ. ಈ ಬಾರಿ ಕಟಾವಿನ ಸಮಯಲ್ಲಿ ಅತಿಯಾದ ಮಳೆಯಿಂದಾಗಿ ನಿರೀಕ್ಷಿತ ಪ್ರಮಾಣದ ಗುಣಮಟ್ಟದ ಬೆಳೆ ಸಿಗಲಿಲ್ಲ ಎಂದರು. ಮಧ್ಯಮ ಗುಣಮಟ್ಟದ ತಂಬಾಕು ಶೇ.30ರಷ್ಟು ಮತ್ತು ಬ್ರೈಟ್ ಗ್ರೇಡ್ ತಂಬಾಕು ಶೇ.20ರಷ್ಟು ಎಂದು ಅಂದಾಜಿಸಲಾಗಿತ್ತು ಆದರೆ ಮಳೆಯ ಅವಾಂತರ ಎಲ್ಲವನ್ನು ತಲೆಕೆಳಗು ಮಾಡಿದೆ.

> ಈ ಬಾರಿ ದರ ಸಮಸ್ಯೆ ಮತ್ತಷ್ಟು ಬಿಗಡಾಯಿಸುತ್ತಿದೆ. ಕಾಲಹರಣ ಮಾಡದೇ ಖರೀದಿ ಕಂಪನಿಗಳ ಜೊತೆ ಸಭೆ ನಡೆಸಿ ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕಿದೆ. ರೈತರ ನಿಜವಾದ ಸಮಸ್ಯೆಗಳನ್ನು ಪರಿಹರಿಸುವತ್ತ ಶೀಘ್ರ ಕ್ರಮ ಅನಿವಾರ್ಯ.
>
> – *ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ*

ಮುಖ್ಯವಾಗಿ ತಂಬಾಕಿನಲ್ಲಿರುವ ನಿಕೋಟಿನ್ ಅಂಶ ನಿಗದಿತ ಪ್ರಮಾಣದಲ್ಲಿ ಇಲ್ಲದಿರುವುದು ದರ ಕುಸಿತಕ್ಕೆ ಮುಖ್ಯ ಕಾರಣವಾಗಿದೆ ಎಂದರು. ರೈತರು ಆರ್ಥಿಕ ಸಂಕಷ್ಟವನ್ನು ಎದುರಿಸುವ ಪರಿಸ್ಥಿತಿ ಎದುರಾಗಿದ್ದು, ಕೇಂದ್ರ ಸರ್ಕಾರ ಕೂಡಲೇ ತಂಬಾಕು ಮಂಡಳಿ, ಖರೀದಿ ಕಂಪನಿಗಳು ಮತ್ತು ರೈತರೊಂದಿಗೆ ಸಭೆ ನಡೆಸಿ ಕರ್ನಾಟಕ ರೈತರ ಪರ ನಿಲುವು ತೆಗೆದುಕೊಂಡು ಸೂಕ್ತ ದರ ನಿಗದಿಪಡಿಸಿಕೊಡಬೇಕೆಂದು ಒತ್ತಾಯಿಸಿದರು.

ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ತಂಬಾಕು ಬೆಳೆಗಾರರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಉಂಡುವಾಡಿ ಸಿ.ಚಂದ್ರೇಗೌಡ ಸಮಸ್ಯೆ ಕುರಿತು ವಿವರಿಸಿದರು.

ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಕಳವು

ಚುಂಚನಕಟ್ಟೆ, ಡಿ.2– ನಾಲ್ವರು ದುಷ್ಕರ್ಮಿಗಳ ತಂಡ ಮನೆ ಬಾಗಿಲು ಮುರಿದು ಬೀರುವಿನಲ್ಲಿದ್ದ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ಹಣ ದೋಚಿರುವ ಘಟನೆ ಭಾನುವಾರ ಮುಂಜಾನೆ ಕೆ.ಆರ್.ನಗರ ತಾಲೂಕಿನ ಹೆಬ್ಬಾಳು ಹೋಬಳಿಯ ಮಾರಗೌಡನಹಳ್ಳಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ಚಂದ್ರಶೇಖರ್ ಅವರ ಮನೆಯಲ್ಲೇ ಕಳ್ಳತನ ನಡೆದಿರುವುದು. ಮನೆ ಬಾಗಿಲನ್ನು ಹಾರೆಯಿಂದ ಮೀಟಿದ ದುಷ್ಕರ್ಮಿಗಳು ಬೀರುವಿನಲ್ಲಿದ್ದ 70 ಗ್ರಾಂ ಚಿನ್ನ, 600 ಗ್ರಾಂ ಬೆಳ್ಳಿ ಹಾಗೂ 15 ಸಾವಿರ ರೂ. ನಗದು ದೋಚಿ ಪರಾರಿ ಯಾಗಿದ್ದಾರೆ. ಈ ಘಟನೆ ವೇಳೆ ಮನೆ ಮಾಲೀಕ ಚಂದ್ರಶೇಖರ್, ಅವರ ಮಗ, ಸೊಸೆ ಮನೆಯಲ್ಲಿದ್ದರೂ, ಮತ್ತೊಂದು ಕೊಠಡಿಯಲ್ಲಿ ಅವಿತು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಇದಕ್ಕೂ ಮುನ್ನಾ ಇದೇ ದುಷ್ಕರ್ಮಿಗಳ ತಂಡ ಗ್ರಾಮದ ಮಲೆ ಮಹದೇಶ್ವರ ಬೆಟ್ಟ ಠಾಣೆಯ ಇನ್ಸ್‌ಪೆಕ್ಟರ್ ಜಗದೀಶ್, ರೈತ ಸಂಘದ ನಟರಾಜು, ಮಹದೇವ್ ಮತ್ತು ರಾಜೇಂದ್ರ ಅವರ ಮನೆ ನುಗ್ಗುವ ಪ್ರಯತ್ನ ಮಾಡಿದ್ದು, ಮನೆಯವರ ಕಿರುಚಾಟದಿಂದ ವಿಫಲಗೊಂಡಿದೆ. ಈ ಸಂಬಂಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೋಜಾ ಕೊಲೆ ಪ್ರಕರಣ: ಮತ್ತೋರ್ವ ಆರೋಪಿ ಬಂಧನ

ಹುಣಸೂರು, ಡಿ.2– ತಾಲೂಕಿನ ಬೆಂಕಿಪುರದಲ್ಲಿ ಹಾಡಹಗಲೇ ನಡೆದಿದ್ದ ರೋಜಾ ಕೊಲೆ ಪ್ರಕರಣ ಸಂಬಂಧ ಮತ್ತೋರ್ವ ಆರೋಪಿಯನ್ನು ಬಿಳಿಕೆರೆ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಸಣ್ಣಮಲ್ಲಿಗೆ

ಬೆಂಕಿಪುರ ಗ್ರಾಮದ ನಿವಾಸಿ ಸಣ್ಣಮಲ್ಲಿಗೆ (37) ಬಂಧಿತ ಆರೋಪಿ. ಈಕೆಯನ್ನು ಬಿಳಿಕೆರೆ ಪೊಲೀಸರು ಡಿ.1ರಂದು ಮುಂಜಾನೆ ತಾಲೂಕಿನ ನಲ್ಲೂರು ಪಾಲ ಗ್ರಾಮದ ಬಸ್ ನಿಲ್ದಾಣ ದಲ್ಲಿ ವಶಕ್ಕೆ ಪಡೆದು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಇದಕ್ಕೂ ಮುನ್ನಾ ಆರೋಪಿ ಸ್ವಾಮಿ ನಾಯಕನನ್ನು ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಕಾರ್ಯಾಚರಣೆಯಲ್ಲಿ ಬಿಳಿಕೆರೆ ಠಾಣೆ ಇನ್ಸ್‌ಪೆಕ್ಟರ್ ಲೋಲಾಕ್ಷಿ, ಸಿಬ್ಬಂದಿಗಳಾದ ಪ್ರಸಾದ್ ಶಿವಕುಮಾರ, ಹರೀಶ, ಅಶೋಕ ಭಾಗವಹಿಸಿದ್ದರು.

ಪೋಷಕರು ಮಕ್ಕಳ ಪ್ರತಿಭೆ ಗುರ್ತಿಸಿ, ಪ್ರೋತ್ಸಾಹಿಸಿ

ಸಂಸದ ಸುನೀಲ್ ಬೋಸ್



ಕಾರ್ಯಕ್ರಮದಲ್ಲಿ ಸಂಸದ ಸುನೀಲ್ ಬೋಸ್ ಅವರನ್ನು ಸನ್ಮಾನಿಸಲಾಯಿತು.

ನಂಜನಗೂಡು, ಡಿ.2– ಪೋಷಕರು ಮಕ್ಕಳ ಪ್ರತಿಭೆ ಗುರ್ತಿಸಿ, ಅವರ ಆಶಯಗಳಿಗೆ ಪ್ರೋತ್ಸಾಹ ನೀಡಬೇಕು. ಯಾವುದೇ ಕಾರಣಕ್ಕೂ ಮಕ್ಕಳ ಮೇಲೆ ಒತ್ತಡ ಹೇರಬಾರದು ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ನಗರದ ಕಾರ್ಮಲ್ ಇಂಗ್ಲಿಷ್ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಅವರು, ನಾನು ಓದಿದ ಶಾಲೆಯ ಕಾರ್ಯಕ್ರಮದಲ್ಲಿ ಅತಿಥಿಯಾಗಿ ಭಾಗವಹಿಸುತ್ತಿರುವುದು ಸಂತೋಷ ತಂದಿದೆ. ಶಾಲೆಯಲ್ಲಿ ನನ್ನ ಬಾಲ್ಯದ ಶಿಸ್ತಿನ, ಖುಷಿಯ ದಿನಗಳು ಜ್ಞಾಪಕಕ್ಕೆ ಬರುತ್ತಿದೆ. ಶಾಲೆಯ ಶಿಕ್ಷಕರು ನನಗೆ ಉತ್ತಮ ಪ್ರೋತ್ಸಾಹ, ಬೆಂಬಲ ನೀಡಿದ್ದಾರೆ. ಆ ದಿನಗಳಲ್ಲಿ ಶಾಲೆಯ ಶುಲ್ಕ 45 ರೂ. ಭರಿಸಲಾರದೆ ಹೊರಗೆ ನಿಂತಿದ್ದೆ. ನಾವೇನು ಸುಖದ ಸುಪ್ಪತ್ತಿಗೆಯಲ್ಲಿ ಬೆಳೆದವರಲ್ಲ. ಕಷ್ಟದ ದಿನಗಳಲ್ಲಿ ಜೀವನ ಕಲಿಸಿದ ಪಾಠ ಮರೆಯಲಾರೆ. ವಿದ್ಯಾರ್ಥಿಗಳು ಆರ್ಥಿಕ ಸಂಕಷ್ಟ ಹೇಳಿಕೊಂಡು ಸಹಾಯ ಬೇಡಿ ಬಂದಾಗ ಬರಿಗೈಲಿ ಕಳುಹಿಸುವುದಿಲ್ಲ. ನಮ್ಮ ಭದ್ರ ಭವಿಷ್ಯಕ್ಕೆ ಶಾಲೆ ಭದ್ರ ಬುನಾದಿ ಹಾಕಿದೆ. ಪೋಷಕರು ಮಕ್ಕಳಿಗೆ ಬಾಲ್ಯದ ಜೀವನವನ್ನು ಅನುಭವಿಸಲು ಬಿಡಬೇಕು. ವಿದ್ಯಾರ್ಥಿಗಳಿಗೆ ಕಠಿಣ ಪರಿಶ್ರಮ ಹೊರತಾಗಿ ಅನ್ಯ ಮಾರ್ಗ ವಿಲ್ಲ. ಪೋಷಕರ ಆಶಯದಂತೆ ಉನ್ನತ ವ್ಯಾಸಂಗ ಮಾಡಿ ಶಾಲೆಗೆ ಕೀರ್ತಿ ತರಬೇಕು. ಚಿಕ್ಕ ವಯಸ್ಸಿನಲ್ಲಿ ಕಲಿತ ಪಾಠ, ನಯ, ವಿನಯ, ಸಂಸ್ಕೃತಿ, ನಮ್ಮ ಜೀವನದ ಕೊನೆಯವರೆಗೂ ಉಳಿಯುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಕಲಿತು ಜೀವನದಲ್ಲಿ ರೂಢಿಸಿಕೊಳ್ಳಬೇಕು ಎಂದರು.

ಶಾಸಕ ದರ್ಶನ್ ಮಾತನಾಡಿದರು. ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ನಗರಸಭಾಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷ ರಿಯಾನಾ ಬಾನು, ಮುಖಂಡರಾದ ಇಂಧನ್ ಬಾಬು, ಎನ್.ಟಿ.ಗಿರೀಶ್, ಚಾಮರಾಜು, ಮಾದಪ್ಪ, ಚೋಳರಾಜು, ಕೆಂಪಣ್ಣ, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿಎಂ ಶಂಕರ್, ಜಿಪಂ ಮಾಜಿ ಸದಸ್ಯ ಕೆ.ಬಿ.ಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಬಿಇಓ ಮಹೇಶ್, ಶಾಲಾ ಮುಖ್ಯೋಪಾಧ್ಯಾಯನಿ ಕ್ಯಾರೋಲಿನ, ಶಾಲಾ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

ಸ್ವಾಭಿಮಾನಿ ಸಮಾವೇಶಕ್ಕೆ ಎಲ್ಲರೂ ಬೆಂಬಲ ನೀಡಿ



ಸಭೆಯಲ್ಲಿ ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ ಮಾತನಾಡಿದರು.

ಕೆ.ಆರ್.ನಗರ, ಡಿ.2– ಹಾಸನದಲ್ಲಿ ಡಿ.5ರಂದು ನಡೆಯುವ ಸ್ವಾಭಿಮಾನಿ ಸಮಾವೇಶಕ್ಕೆ ಸರ್ವ ಜನಾಂಗದವರು ಬೆಂಬಲ ನೀಡಬೇಕು ಎಂದು ತಾಲೂಕು ಕುರುಬರ ಸಂಘದ ಅಧ್ಯಕ್ಷ ಜೆ.ಶಿವಣ್ಣ ಮನವಿ ಮಾಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ತಮ್ಮ ರಾಜಕೀಯ ಜೀವನದುದ್ದಕ್ಕೂ ಜನಸೇವೆ ಕೈಗೊಂಡಿರುವ ಸಿಎಂ ಸಿದ್ದರಾಮಯ್ಯ ವಿರುದ್ಧ ಸುಳ್ಳು ಆರೋಪ ಮಾಡುತ್ತಾ ಅವರನ್ನು ನ್ಯಾಯಾಲಯದ ಕಟಕಟ್ಟೆಯಲ್ಲಿ ನಿಲ್ಲಿಸಲು ಸಂಚು ನಡೆಸುತ್ತಿರುವ ವಿಪಕ್ಷಗಳ ಷಡ್ಯಂತ್ರದ ವಿರುದ್ಧ ನಾವೆಲ್ಲರೂ ಹೋರಾಟ ಮಾಡಬೇಕಾಗಿದೆ ಎಂದರು.

ಇತ್ತೀಚಿನ ದಿನಗಳಲ್ಲಿ ಪ್ರಾಮಾಣಿಕವಾಗಿ ಜನಸೇವೆ ಮಾಡುವ ನಾಯಕರನ್ನು ರಾಜಕೀಯವಾಗಿ ಮುಗಿಸುವ ಹುನ್ನಾರ ನಿರಂತರವಾಗಿ ನಡೆಯುತ್ತಿದೆ. ಭವಿಷ್ಯದಲ್ಲಿ ಶೋಷಿತರ ಧ್ವನಿ ದಮನ ಮಾಡಲು ಕೆಲವು ಶಕ್ತಿಗಳು ಸಂಚು ನಡೆಸುತ್ತಿದ್ದು ಅದನ್ನು ಒಕ್ಕೊರಲಿನಿಂದ ಖಂಡಿಸಬೇಕೆಂದು ಮನವಿ ಮಾಡಿದರು. ಹಾಸನದಲ್ಲಿ ನಡೆಯುವ ಸಮಾವೇಶವನ್ನು ಸರ್ವ ಜನಾಂಗದವರು ಜಾತ್ಯಾತೀತ ಮತ್ತು ಪಕ್ಷಾತೀತವಾಗಿ ಬೆಂಬಲಿಸಬೇಕು. ಸಮಾವೇಶದಲ್ಲಿ ಕೆ.ಆರ್.ನಗರದಿಂದ ಕನಿಷ್ಠ 20 ಸಾವಿರ ಮಂದಿ ಭಾಗವಹಿಸಲಿದ್ದಾರೆ ಎಂದು ಮಾಹಿತಿ ನೀಡಿದರು.

ಸಮಾವೇಶದಲ್ಲಿ ಭಾಗವಹಿಸುವವರಿಗೆ ವಾಹನದ ವ್ಯವಸ್ಥೆ ಮಾಡಲಾಗಿದೆ. ಸ್ವಾಭಿಮಾನಿಗಳು ಸ್ವಯಂ ಪ್ರೇರಿತವಾಗಿ ಪಾಲ್ಗೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಕೈ ಬಲಪಡಿಸಬೇಕು ಎಂದರು.

ರಾಜ್ಯ ಕಾಂಗ್ರೆಸ್ ಎಸ್‌ಟಿ ವಿಭಾಗದ ಉಪಾಧ್ಯಕ್ಷ ಜಿ.ಶ್ರೀನಿವಾಸ್, ದಲಿತ ಮುಖಂಡ ಹೆಚ್.ಎಸ್.ವೇಣುಗೋಪಾಲ್, ತಾಲೂಕು ಕುಂಬಾರರ ಸಂಘದ ಮಾಜಿ ಅಧ್ಯಕ್ಷ ತಿಮ್ಮಶೆಟ್ಟಿ ಮಾತನಾಡಿದರು. ತಾಲೂಕು ಕುರುಬರ ಸಂಘದ ಉಪಾಧ್ಯಕ್ಷ ಕೆ.ಎಂ.ಶ್ರೀನಿವಾಸ್, ನಿರ್ದೇಶಕರಾದ ಕೆ.ಹೆಚ್.ಬುಡೀಗೌಡ, ಕೃಷ್ಣೇಗೌಡ, ನಟರಾಜು, ಗ್ರಾಪಂ ಸದಸ್ಯ ಕೆ.ಪಿ.ಜಗದೀಶ್, ಮುಖಂಡರಾದ ನವೀದ್, ಮುರಳಿ ಇನ್ನಿತರರಿದ್ದರು.

ಕೋಟೆಯಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಬೈಕ್ ರ‍್ಯಾಲಿ

ಪ್ರತಿಯೊಬ್ಬರೂ ಹೆಲ್ಮೆಟ್ ಧರಿಸಿ ಬೈಕ್ ಚಾಲನೆ ಮಾಡಿ: ಸಿಪಿಐ ಶಬ್ಬೀರ್ ಹುಸೇನ್



ಹ್ಯಾಂಡ್‌ಪೋಸ್ಟ್‌ನಲ್ಲಿ ರಸ್ತೆ ಸುರಕ್ಷತಾ ಜಾಗೃತಿ ಕಾರ್ಯಕ್ರಮ ನಡೆಯಿತು.

ಹೆಚ್.ಡಿ.ಕೋಟೆ, ಡಿ.2– ಹೆಲ್ಮೆಟ್ ನಮ್ಮನ್ನು ಹಾಗೂ ನಮ್ಮ ಕುಟುಂಬವನ್ನು ರಕ್ಷಣೆ ಮಾಡುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಬ್ಬ ಸವಾರರು ಹೆಲ್ಮೆಟ್ ಧರಿಸಿ ಬೈಕ್ ಚಾಲನೆ ಮಾಡಬೇಕು ಎಂದು ಸಿಪಿಐ ಶಬ್ಬೀರ್ ಹುಸೇನ್ ಮನವಿ ಮಾಡಿದರು.

ಪಟ್ಟಣದ ಹ್ಯಾಂಡ್‌ಪೋಸ್ಟ್ ಸರ್ಕಲ್‌ನಲ್ಲಿ ಜೀವ ರಕ್ಷಾ ಸಂಸ್ಥೆ ಬೆಂಗಳೂರು ಮತ್ತು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸರಗೂರು, ರೋಟರಿ ಕ್ಲಬ್ ಹೆಚ್.ಡಿ.ಕೋಟೆ, ಮೈಸೂರು ಮತ್ತು ಬೆಂಗಳೂರು, ಸರಗೂರು ಮತ್ತು ಹೆಚ್.ಡಿ.ಕೋಟೆ ಪೊಲೀಸ್ ಠಾಣೆ ಸಹಭಾಗಿತ್ವದಲ್ಲಿ ನಡೆದ ರಸ್ತೆ ಸುರಕ್ಷತಾ ಜಾಗೃತಿ ಬೈಕ್ ರ‍್ಯಾಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪೊಲೀಸ್‌ನವರು ದಂಡ ಹಾಕುತ್ತಾರೆ ಎಂಬ ಭಾವನೆಯಿಂದ ಸವಾರರು ಹೊರಬರಬೇಕು. ಕೇವಲ ದಂಡ ತಪ್ಪಿಸಿಕೊಳ್ಳುವ ಉದ್ದೇಶದಿಂದ ಹೆಲ್ಮೆಟ್ ಧರಿಸುವುದಲ್ಲ ಬದಲಿಗೆ ಅದು ನಮ್ಮನ್ನು ಮತ್ತು ನಮ್ಮ ಕುಟುಂಬವನ್ನು ರಕ್ಷಣೆ ಮಾಡುತ್ತದೆ ಎಂಬ ಬಗ್ಗೆ ಜಾಗೃತರಾಗಬೇಕು ಎಂದರು.

ರೋಟರಿ ಕ್ಲಬ್ ತಾಲೂಕು ಅಧ್ಯಕ್ಷ ನಿರಂಜನ್ ಮಾತನಾಡಿ, ಬೈಕ್ ಸವಾರರು ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬಾರದು. ಹೆಲ್ಮೆಟ್ ಧರಿಸದೆ, ಕಾರಿನಲ್ಲಿ ಬೆಲ್ಟ್ ಧರಿಸದೇ ವಾಹನ ಚಾಲನೆ ಮಾಡುವುದರಿಂದ ಎಷ್ಟೋ ಜೀವಹಾನಿಯಾಗುತ್ತದೆ. ಹೀಗಾಗಿ ವಾಹನ ಚಾಲನೆ ಮಾಡುವ ವೇಳೆ ಹೆಲ್ಮೆಟ್, ಸೀಟ್ ಬೆಲ್ಟ್ ಅನ್ನು ತಪ್ಪದೇ ಧರಿಸುವ ಮೂಲಕ ತಮ್ಮ ಪ್ರಾಣ ಉಳಿಸಿಕೊಳ್ಳಬೇಕು ಎಂದರು.

ಹೆಲ್ಮೆಟ್ ಧರಿಸುವುದರಿಂದ ನಮ್ಮ ರಕ್ಷಣೆ ನಮ್ಮ ಹೊಣೆ ಎಂಬ ಘೋಷಣೆಯೊಂದಿಗೆ 40 ಮಂದಿ ಬೈಕ್ ರ‍್ಯಾಲಿ ಮೂಲಕ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿದರು. ವಿವೇಕಾನಂದ ಸ್ಮಾರಕ ಆಸ್ಪತ್ರೆ ಸಿಬ್ಬಂದಿ ವರ್ಗ ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಹೆಲ್ಮೆಟ್ ಧರಿಸಿ ನೃತ್ಯದ ಮೂಲಕ ಸಾರ್ವಜನಿಕರಿಗೆ ಹೆಲ್ಮೆಟ್ ಮಹತ್ವ ಕುರಿತು ರಸ್ತೆ ಸುರಕ್ಷತೆ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಜೀವರಕ್ಷಾ ಸಂಸ್ಥೆಯ ಸಿಇಓ ಡಾ.ರಾಮ್, ಕೆಂಪರಾಜು, ಕವಿತ, ರಾಜು, ವಿವೇಕಾನಂದ ಸ್ಮಾರಕ ಆಸ್ಪತ್ರೆ ಸಿಬ್ಬಂದಿಗಳಾದ ಪ್ರತಾಪ್, ಸುಧಾರಾಣಿ, ಬಂಗಾರಶೆಟ್ಟಿ, ರೇಚಣ್ಣ ಪ್ರಸಾದ್, ರೋಟರಿ ಕ್ಲಬ್ ಸದಸ್ಯರಾದ ಗಣೇಶ್ ಲಾಡ್, ಶಿವಣ್ಣ, ಚಿನ್ನ ಬೆಳ್ಳಿ ರವಿ, ಎಎಸ್‌ಐ ಸುರೇಶ್ ನಾಯಕ್, ಸಿಬ್ಬಂದಿ ವರ್ಗದವರು ಮತ್ತು ಸಾರ್ವಜನಿಕರು ಭಾಗಿಯಾಗಿದ್ದರು.

ಮುಳ್ಳೂರು ಪಿಎಸಿಎಸ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹುಣಸೂರು ತಾಲೂಕಿನ ಮುಳ್ಳೂರು ಪಿಎಸಿಎಸ್ ಅಧ್ಯಕ್ಷರಾಗಿ ಬಿ.ಕೆ.ಚನ್ನರಸೇಗೌಡ ಹಾಗೂ ಉಪಾಧ್ಯಕ್ಷೆಯಾಗಿ ಕಮಲಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ರತ್ನಾಕರ ವಾಲ್ಮೀಕಿ ನಾಯಕರ ಯುವ ವೇದಿಕೆ ಪದಾಧಿಕಾರಿಗಳ ಆಯ್ಕೆ



ರತ್ನಾಕರ ವಾಲ್ಮೀಕಿ ತಾಲೂಕು ನಾಯಕರ ಯುವ ವೇದಿಕೆ ಪದಾಧಿಕಾರಿಗಳ ಆಯ್ಕೆ ನಡೆಯಿತು.

ಸರಗೂರು, ಡಿ.2– ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ರತ್ನಾಕರ ವಾಲ್ಮೀಕಿ ನಾಯಕರ ಯುವ ವೇದಿಕೆ ಅಧ್ಯಕ್ಷರಾಗಿ ವಿಜಯ ಪ್ರಕಾಶ ನಾಯಕ ಆಯ್ಕೆಯಾಗಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸೋಮವಾರ ನಡೆದ ವೇದಿಕೆಯ ವಾರ್ಷಿಕ ಮತ್ತು ನೂತನ ಕಾರ್ಯಕಾರಿಣಿ ಆಯ್ಕೆ ಸಭೆಯಲ್ಲಿ ಅಧ್ಯಕ್ಷರಾಗಿ ವಿಜಯ ಪ್ರಕಾಶ ನಾಯಕ, ಗೌರವಾಧ್ಯಕ್ಷರಾಗಿ ವೀರಭದ್ರನಾಯಕ, ಉಪಾಧ್ಯಕ್ಷರಾಗಿ ಸದಾಶಿವ ಕಾರ್ಯದರ್ಶಿ ಚೆಲುವನಾಯಕ, ಖಜಾಂಚಿ ರವಿಕುಮಾರ.ಡಿ, ಪತ್ರಿಕಾ ಪ್ರತಿನಿಧಿ ರವಿಕುಮಾರ್.ಎಂ, ನಿರ್ದೇಶಕರಾಗಿ ಬಸವರಾಜು, ಸೋಮೇಶ್ ನಾಯಕ, ರಾಜು, ಗೋವಿಂದನಾಯಕ, ಚಂದ್ರ ಮತ್ತು ವೇದಿಕೆ ಸದಸ್ಯರಾಗಿ ಬಸಪ್ಪ, ನವೀನ್ ಕುಮಾರ್, ವೇಣುಗೋಪಾಲ್, ಸಣ್ಣಸ್ವಾಮಿ ನಾಯಕ, ವೆಂಕಟಾಚಲು, ಸ್ವಾಮಿ, ನಿಂಗರಾಜು, ಜವರಾಜು ಆಗತ್ತೂರು ಆಯ್ಕೆಯಾದರು.

ಕನ್ನಡ ರಾಜ್ಯೋತ್ಸವ, ಕನಕ ಜಯಂತಿ



ತಿ.ನರಸೀಪುರದ 22ನೇ ವಾರ್ಡ್‌ನಲ್ಲಿ ಗಜಪಡೆ ಯುವಕ ಸಂಘದಿಂದ 69ನೇ ಕನ್ನಡ ರಾಜ್ಯೋತ್ಸವ ಹಾಗೂ ಕನಕ ಜಯಂತಿ ಆಚರಿಸಲಾಯಿತು. ಪುರಸಭಾ ಸದಸ್ಯ ಬಾದಾಮಿ ಮಂಜು, ಟೌನ್ ಕುರುಬರ ಸಂಘದ ನಿರ್ದೇಶಕ ಗುರುಮಲ್ಲಪ್ಪ, ಅಹಿಂದ ಜಿಲ್ಲಾಧ್ಯಕ್ಷ ಅನೂಪ್‌ಗೌಡ, ಸಮಿತಿ ಸದಸ್ಯರಾದ ಗ್ಯಾಸ್ ಸ್ವಾಮಿ, ಜಯಂತ್, ಜಯಂತ್‌ಗೌಡ, ಚಂದು, ಯಶ್ವಂತ್, ಅಪ್ಪು, ಸಿದ್ದು, ರೇವಣ್ಣ, ಚೇತು, ನವೀನ್, ಹೇಮಂತ್ ಗೌಡ, ಕುಚೇಲ ಗೌಡ, ರೋಹಿತ್, ಮನೋಜ್ ಇತರರಿದ್ದರು.

ನೇಮಕ



ತಿ.ನರಸೀಪುರ, ಡಿ.2– ರಾಷ್ಟ್ರೀಯ ಅಹಿಂದ ಒಕ್ಕೂಟ ಸಂಘಟನೆ ಮೈಸೂರು ಜಿಲ್ಲಾ ಪ್ರಧಾನ ಕಾರ್ಯದರ್ಶಿಯಾಗಿ ಕನ್ನಾಯಕನಹಳ್ಳಿ ಗ್ರಾಮದ ಕುಮಾರ್ ರಾಮೇಗೌಡ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜ್ಯಾಧ್ಯಕ್ಷ ಮುತ್ತಣ್ಣ ಎಸ್.ಶಿವಳ್ಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಿ.ನರಸೀಪುರದಲ್ಲಿ ಕನ್ನಡ ರಾಜ್ಯೋತ್ಸವ



ತಿ.ನರಸೀಪುರದಲ್ಲಿ ಕನ್ನಡ ರಾಜ್ಯೋತ್ಸವ ನಡೆಯಿತು.

ತಿ.ನರಸೀಪುರ, ಡಿ.2– ಪ್ರತಿಯೊಬ್ಬರಲ್ಲೂ ಕನ್ನಡ ನೆಲ, ಜಲ, ಸಂಸ್ಕೃತಿ ಬಗ್ಗೆ ಪ್ರೀತಿ ಇದ್ದಾಗ ಮಾತ್ರ ಮಾತೃಭಾಷೆ ಬೆಳವಣಿಗೆ ಸಾಧ್ಯ ಎಂದು ಅನಾಥ ಶವಗಳ ಮುಕ್ತಿದಾತ ಡಾ.ಎಂ.ಮಾದೇಶ್ ತಿಳಿಸಿದರು.

ಪಟ್ಟಣದ ಸಾರಿಗೆ ಬಸ್ ನಿಲ್ದಾಣದ ಬಳಿಯ ವಾಲ್ಮೀಕಿ ಆಟೋ ಚಾಲಕರ ಸಂಘದಿಂದ ನಡೆದ 69ನೇ ಕನ್ನಡ ರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಕನ್ನಡ ಕೇವಲ ಭಾಷೆಯಲ್ಲ. ನಮ್ಮ ಸಂಸ್ಕೃತಿ, ಅಸ್ಮಿತೆಯಾಗಬೇಕಾಗಿದೆ. ದೇಶ ಹಾಗೂ ರಾಜ್ಯಕ್ಕಾಗಿ ಸಂಗೊಳ್ಳಿ ರಾಯಣ್ಣ, ಬಸವಣ್ಣ, ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮನಂತಹ ಅಪ್ರತಿಮರು ಹೋರಾಡಿದ ನಾಡು ಕರ್ನಾಟಕವಾಗಿದೆ. ರಾಜ್ಯ ಕಟ್ಟುವಲ್ಲಿ ಮೈಸೂರು ಮಹಾರಾಜರ ಪಾತ್ರ ಅನನ್ಯ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಕಷ್ಟ ಕಾಲದಲ್ಲೂ ಸಹ ಅಣೆಕಟ್ಟೆ ಕಟ್ಟಿ ಲಕ್ಷಾಂತರ ರೈತರ ಬದುಕು ಕಟ್ಟಿ ಕೊಟ್ಟಿದ್ದಾರೆ ಎಂದರು. ಈ ವೇಳೆ ಶಿವಕುಮಾರ್, ಸಿ.ಮಹದೇವಪ್ಪ ಅವರನ್ನು ಸನ್ಮಾನಿಸಲಾಯಿತು. ವಾಲ್ಮೀಕಿ ಆಟೋ ಚಾಲಕರ ಸಂಘದ ಮಾದೇಶ್, ಗಣೇಶ್, ಗಿರಿ, ನಿಂಗರಾಜ್, ಗೌತಮ್, ಪ್ರದೀಪ್ ಇತರರಿದ್ದರು.

1.84 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ದರ್ಶನ್ ಭೂಮಿ ಪೂಜೆ ನೆರವೇರಿಸಿದರು.

ನಂಜನಗೂಡು, ಡಿ.2– ತಾಲೂಕಿನ ಎಲ್ಲಾ ಗ್ರಾಮಗಳಿಗೂ ಮೂಲ ಸೌಕರ್ಯಗಳನ್ನು ಒದಗಿಸುವುದಲ್ಲದೇ, ಅತೀ ಹೆಚ್ಚು ಅಭಿವೃದ್ಧಿ ಕಾರ್ಯಗಳ ಮೂಲಕ ಕ್ಷೇತ್ರವನ್ನು ರಾಜ್ಯಕ್ಕೆ ಮಾದರಿಯಾಗಿಸಲು ಶ್ರಮಿಸುತ್ತೇನೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಹೊರಳವಾಡಿ, ಹೊರಳವಾಡಿ ಹೊಸೂರು, ಗೋಳೂರು, ಬದನವಾಳು, ಹೆಡತಲೆ, ಹೆಮ್ಮರಗಾಲ, ಹಂಪಾಪುರ, ಗ್ರಾಮಗಳಲ್ಲಿ 1.84 ಕೋಟಿ ವೆಚ್ಚದ ಸಿ.ಸಿ.ರಸ್ತೆ, ಚರಂಡಿ, ಸಮುದಾಯ ಭವನ, ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಅವರು ತಾಲೂಕಿನ ಹೆಮ್ಮರಗಾಲ ಗ್ರಾಮದಲ್ಲಿ ಮಾತನಾಡಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕ್ಷೇತ್ರಕ್ಕೆ 25 ಕೋಟಿ ವಿಶೇಷ ಅನುದಾನ ನೀಡಿದ್ದು, 20 ಕೋಟಿ ರೂ.ಗಳನ್ನು ಕ್ಷೇತ್ರದ ಗ್ರಾಮಾಂತರ ಪ್ರದೇಶಗಳಲ್ಲಿ ಸಿಸಿ ರಸ್ತೆ, ಚರಂಡಿ ಕಾಮಗಾರಿ ನಡೆಸಲು ಮೀಸಲಿರಿಸಲಾಗಿದೆ. ಹೆಮ್ಮರಗಾಲದಲ್ಲಿ 20 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ, ಚರಂಡಿ, ಹೊರಳ ವಾಡಿ ಹೊಸೂರು ಗ್ರಾಮದಲ್ಲಿ 40 ಲಕ್ಷ ವೆಚ್ಚದ ಸಿಸಿ ರಸ್ತೆ, ಗೋಳೂರು ಹಾಗೂ ಬದನವಾಳು ಗ್ರಾಮಗಳಲ್ಲಿ ತಲಾ 20 ಲಕ್ಷ ವೆಚ್ಚದ ಸಿಸಿ ರಸ್ತೆ, ಹೆಡತಲೆ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ರಥದ ಬೀದಿ ಅಭಿವೃದ್ಧಿ ಕಾಮಗಾರಿ, ಗೋಳೂರು ಗ್ರಾಮದಲ್ಲಿ 5 ಲಕ್ಷ ವೆಚ್ಚದಲ್ಲಿ ಕಮ್ಮಾರ ಸಮುದಾಯ ಭವನ, ಹಂಪಾಪುರ ಗ್ರಾಮದಲ್ಲಿ 10 ಲಕ್ಷ ವೆಚ್ಚದಲ್ಲಿ ಕನಕ ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ವಿಪಕ್ಷದವರು ಗ್ಯಾರಂಟಿ ಯೋಜನೆಗಳಿಂದಾಗಿ ಅಭಿವೃದ್ಧಿ ಕೆಲಸಗಳಿಗೆ ಹಣ ಬಿಡುಗಡೆಯಾಗುತ್ತಿಲ್ಲ ಎಂದು ಟೀಕೆ ಮಾಡುತ್ತಿದ್ದರು. ಕಾಂಗ್ರೆಸ್ ಸರ್ಕಾರ ಜನರಿಗೆ ನೀಡಿದ ಭರವಸೆಯಂತೆ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿ, ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವ ಮೂಲಕ ಸೂಕ್ತ ಉತ್ತರ ನೀಡಿದೆ ಎಂದು ಹೇಳಿದರು.

ಇದೇ ಸಂದರ್ಭ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಜಿಪಂ ಮಾಜಿ ಸದಸ್ಯೆ ಲತಾ, ಗ್ರಾಪಂ ಸದಸ್ಯ ಮುದ್ದು ಮಾದಶೆಟ್ಟಿ, ನವೀನ, ರಂಗದಾಸ್, ಮುಖಂಡರಾದ ನಾಗರಾಜಯ್ಯ, ದೊರೆಸ್ವಾಮಿ ನಾಯಕ, ಶಿವಕುಮಾರ್, ಮಹದೇವಸ್ವಾಮಿ, ಜಯಮಾಲಾ, ರಂಗಸ್ವಾಮಿ, ವಿಜಯ್ ಕುಮಾರ್, ಶ್ರೀನಿವಾಸಮೂರ್ತಿ, ಎನ್.ಎಂ.ಮಂಜುನಾಥ್, ಎನ್.ಎಸ್.ಮಾದಪ್ಪ, ಶಿವಪ್ಪದೇವರು, ರಾಜೇಶ, ಮಹೇಂದ್ರ, ಕೆಆರ್‌ಐಡಿಎಲ್ ಇಂಜಿನಿಯರ್ ಶರಣ್, ಪುರುಷೋತ್ತಮ, ಪಿಡಿಓಗಳಾದ ಕರಿಯಪ್ಪ, ರಾಜಶೇಖರ್ ಸೇರಿದಂತೆ ಇತರರಿದ್ದರು.

ಕೌಲಂದೆ ಭಾಗ ಹಸಿರೀಕರಣಕ್ಕೆ ಕ್ರಮ

ನನ್ನ ತಂದೆ, ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರಿಗೆ ಕೌಲಂದೆ ಹೋಬಳಿ ಬರಡು ಪ್ರದೇಶವಾಗಿರುವುದರಿಂದ ಈ ಭಾಗಕ್ಕೆ ಏತ ನೀರಾವರಿ ಯೋಜನೆ ಜಾರಿಗೊಳಿಸುವ ಮೂಲಕ ಹಸರೀಕರಣಗೊಳಿಸಬೇಕು ಎಂಬ ಆಸೆ ಇತ್ತು. ಆ ಆಸೆಯನ್ನು ನನಸು ಮಾಡುವ ಸಲುವಾಗಿ 90 ಕೋಟಿ ವೆಚ್ಚದಲ್ಲಿ ದೇವನೂರು ಏತ ನೀರಾವರಿ ಯೋಜನೆ ಜಾರಿಗೊಳಿಸಲು ಅನುದಾನ ಮಂಜೂರಾಗಿದ್ದು ಶೀಘ್ರದಲ್ಲೇ ಕಾಮಗಾರಿ ಪ್ರಾರಂಭವಾಗಲಿದೆ. ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿಗಳಿಂದ ಅತಿ ಹೆಚ್ಚು ಅನುದಾನ ಮಂಜೂರು ಮಾಡಿಸಿ ಏತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಈ ಭಾಗವನ್ನು ಹಸರೀಕರಣಗೊಳಿಸಲು ಬದ್ಧನಾಗಿದ್ದೇನೆ ಎಂದು ಶಾಸಕ ದರ್ಶನ್ ತಿಳಿಸಿದರು.

ಮೈಸೂರು ಮಿತ್ರ ಮಂಗಳವಾರ 3 ಡಿಸೆಂಬರ್ 2024

ಮುನೇಶ್ವರ ನಗರದ ಹೆಸರನ್ನೇ ಬದಲಿಸುವ ಕುತಂತ್ರ ನಡೆದಿದೆ!

ಕಾಂಗ್ರೆಸ್ ಸರ್ಕಾರದ ವಿರುದ್ಧ ಆರ್.ಅಶೋಕ್ ಕಿಡಿ



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸೋಮವಾರ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಪ್ರತಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಮೈಸೂರು, ಡಿ.2(ಬಿಎಲ್‌ಯು)– ಮೈಸೂರಿನ ಗುಂಡೂರಾವ್ ನಗರದ ಬಳಿಯ ಮುನೇಶ್ವರನಗರದ ಹೆಸರನ್ನೇ ಬದಲಿಸುವ ಕುತಂತ್ರವೇ ನಡೆದಿದೆ ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಸರ್ವೆ ನಂಬರ್ 153 ರ 1.38 ಎಕರೆಯಲ್ಲಿ 101 ಮನೆಗಳಿದ್ದು, 'ಮುನೇಶ್ವರ ನಗರ' ಹೆಸರಿನ ಈ ಬಡಾವಣೆಯಲ್ಲಿ ಹತ್ತಾರು ವರ್ಷಗಳಿಂದ ಜನರು ವಾಸ ಮಾಡುತ್ತಿದ್ದಾರೆ. ಆದರೆ ಇತ್ತೀಚಿಗೆ ಇಲ್ಲಿನ ಮನೆಗಳನ್ನು ವಕ್ಫ್ ಆಸ್ತಿ ಎಂದು ನೋಟಿಸ್ ಜಾರಿ ಮಾಡಲಾಗಿದೆ ಎಂದು ದೂರಿದರು.

ನಗರಪಾಲಿಕೆ ವತಿಯಿಂದ ಇಡೀ ಬಡಾವಣೆ ಅಭಿವೃದ್ಧಿಯಾಗಿದೆ. ಆದರೆ ಈಗ ಇಲ್ಲಿನ ಜನರನ್ನು ಒಕ್ಕಲೆಬ್ಬಿಸುವ ಪ್ರಯತ್ನ ಮಾಡಲಾಗುತ್ತಿದೆ. ಸರ್ವೆ ನಂಬರ್ 168 ರಲ್ಲಿ ಕೂಡ ಬೇಲಿ ಹಾಕಿದ್ದಾರೆ. ಈ ಜಾಗದಲ್ಲಿ ಒಂದೇ ಒಂದು ಮುಸ್ಲಿಂ ಕುಟುಂಬವಿದೆ. ಅದಾಗಲೇ ಮಸೀದಿ ನಿರ್ಮಾಣ ಮಾಡಿ ಪ್ರತಿ ದಿನ ಬೆಳಿಗ್ಗೆಯಿಂದ ರಾತ್ರಿ ತನಕ ಆಜಾನ್ ಕೂಗುತ್ತಿದ್ದಾರೆ. ಈ ಮೂಲಕ ಮುನೇಶ್ವರ ನಗರದ ಹೆಸರನ್ನೇ ಬದಲಿಸುವ ಸಂಚು ನಡೆದಿದೆ ಎಂದು ದೂರಿದರು.

ಶ್ರೀ ಮಾತೆ ಮಾದೇವಿ ಅವರು ನಿರ್ಮಿಸಿರುವ ಶ್ರೀ ಬಸವ ಜ್ಞಾನ ಮಂದಿರಕ್ಕೂ ನೋಟಿಸ್ ನೀಡಿದ್ದಾರೆ. ಬಸವಣ್ಣನವರ ಈ ಮಠದಲ್ಲಿ ಯಾವಾಗ ಗುಮ್ಮಟ ನಿರ್ಮಿಸಿ ಮಸೀದಿ ಮಾಡುತ್ತಾರೋ ತಿಳಿಯದು ಎಂದು ಅಶೋಕ್ ಆತಂಕ ವ್ಯಕ್ತಪಡಿಸಿದರು.

ಜವಾಹರಲಾಲ್ ನೆಹರು ಅವರು ಹಿಂದೂಗಳನ್ನು ಎರಡನೇ ದರ್ಜೆ ಪ್ರಜೆಗಳನ್ನಾಗಿ ನೋಡುವ ಪರಿಸ್ಥಿತಿಗೆ ತಂದಿಟ್ಟರು. ಮುಸ್ಲಿಂ ಪರವಾದ ಕಾಯ್ದೆ, ಕಾನೂನು ಜಾರಿಗೊಳಿಸಿದರು. 2016 ರಲ್ಲಿ ಡಾ. ಮನಮೋಹನ್ ಸಿಂಗ್ ಸರ್ಕಾರ ಕೂಡ ಕಾಯ್ದೆ ಜಾರಿಗೊಳಿಸಿ, ಒಂದು ಬಾರಿ ವಕ್ಫ್ ಆಸ್ತಿಯೆಂದು ಘೋಷಣೆ ಮಾಡಿದರೆ ಅದನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ ಎಂಬ ನಿಯಮ ರೂಪಿಸಿದರು. ಇದರಿಂದ ದೆಹಲಿಯಲ್ಲಿ ಒಂದೇ ದಿನ ಒಂದು ಲಕ್ಷ ಕೋಟಿ ಮೌಲ್ಯದ ಆಸ್ತಿಯನ್ನು ವಕ್ಫ್ ಆಸ್ತಿಯಾಗಿ ಘೋಷಣೆ ಮಾಡಲಾಯಿತು ಎಂದು ಆಪಾದಿಸಿದರು.

ನೆಹರು ಕಾಲದಿಂದ ಇಲ್ಲಿ ತನಕ ಬಿಜೆಪಿಯವರು ಮತ ಬ್ಯಾಂಕ್‌ಗಾಗಿ ಅನುಕೂಲ ಸಿಂಧು ರಾಜಕಾರಣ ಮಾಡಿಕೊಂಡು ಬರುತ್ತಿದ್ದಾರೆ. ಇದರಿಂದ ಈಗ ವಕ್ಫ್ ವಿವಾದ ಹಿಂದೂಗಳಿಗೆ ಭೂತವಾಗಿ ಕಾಡಿದೆ. ಕ್ಯಾನ್ಸರ್‌ನಂತೆ ಎಲ್ಲಾ ಹಿಂದೂಗಳ ಆಸ್ತಿಗಳನ್ನು ವಕ್ಫ್ ಆಸ್ತಿಯಾಗಿ ಆವರಿಸಿಕೊಂಡು ಬರುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಸಂದರ್ಭದಲ್ಲೆಲ್ಲಾ ಹಿಂದೂಗಳಿಗೆ ಈ ಸ್ಥಿತಿ ಎದುರಾಗುತ್ತದೆ ಎಂದು ಕಿಡಿಕಾರಿದರು.

ಸರ್ಕಾರ ವಕ್ಫ್ ತಿದ್ದುಪಡಿ ತೆರವು ಮಾಡಬೇಕು. ರೈತರನ್ನು ವಕ್ಫ್ ಬೋರ್ಡ್ ಮುಂದೆ ನಿಲ್ಲಿಸುವುದನ್ನು ಬಿಡಬೇಕು, ಮಠ ಮಾನ್ಯಗಳ ಆಸ್ತಿ ಕಬಳಿಸುವ ಪ್ರಯತ್ನ ಕೈ ಬಿಡಬೇಕು. ಇಲ್ಲದಿದ್ದರೆ ನಮ್ಮ ಹೋರಾಟ ಇನ್ನು ತೀವ್ರವಾಗುತ್ತದೆ. ಕಾಂಗ್ರೆಸ್‌ನವರು ಎಷ್ಟೇ ವಿರೋಧ ಮಾಡಿದರೂ ಕೇಂದ್ರ ಸರ್ಕಾರ ವಕ್ಫ್ ತಿದ್ದುಪಡಿ ತಂದೇ ತರುತ್ತದೆ ಎಂದು ಅಶೋಕ್ ಎಚ್ಚರಿಸಿದರು.

ಈ ವೇಳೆ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಮತಾಂಧರಿಗೆ ಕಾಯ್ದೆ ಮೂಲಕ ಬಲ ನೀಡುವ ಕೆಲಸವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಓಟ್ ಬ್ಯಾಂಕ್ ರಾಜಕಾರಣ ಮಾಡಲು ಮುಸ್ಲಿಂರ ತುಷ್ಟೀಕರಣಕ್ಕಾಗಿ ಇಂತಹ ಕೆಲಸಕ್ಕೆ ಕೈ ಹಾಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ತವರು ಜಿಲ್ಲೆ ಮೈಸೂರಿನ ಜನರಿಗೆ ನ್ಯಾಯ ನೀಡಬೇಕು. ಎರಡು ಬಾರಿ ಮುಖ್ಯಮಂತ್ರಿ ಮಾಡಿದ ಜಿಲ್ಲೆಯ ಜನರಿಗೆ ಮೋಸ ಮಾಡಬಾರದು ಎಂದು ಮನವಿ ಮಾಡಿದರು.

ವಾರದೊಳಗೆ ಭಿನ್ನಾಭಿಪ್ರಾಯ ಶಮನ

ಕರ್ನಾಟಕದಲ್ಲಿರುವ ಬಿಜೆಪಿಯಲ್ಲಿನ ಭಿನ್ನಾಭಿಪ್ರಾಯ ಒಂದು ವಾರದೊಳಗೆ ಶಮನವಾಗಲಿದೆ ಎಂದು ಅಶೋಕ್ ವಿಶ್ವಾಸ ವ್ಯಕ್ತಪಡಿಸಿದರು.

ಶಾಸಕ ಬಸನಗೌಡ ಪಾಟೀಲ್ ಯತ್ನಾಳ್‌ಗೆ ಬಿಜೆಪಿ ಶಿಸ್ತು ಸಮಿತಿ ನೋಟಿಸ್ ಜಾರಿ ಮಾಡಿರುವುದು ನನಗೆ ಗೊತ್ತಿಲ್ಲ. ಈ ವಿಚಾರದ ಬಗ್ಗೆ ರಾಷ್ಟ್ರೀಯ ನಾಯಕರು ಮಾತನಾಡುತ್ತಾರೆ ಎಂದರು. ಪಕ್ಷದಲ್ಲಿರುವ ಭಿನ್ನಾಭಿಪ್ರಾಯಗಳು ಇನ್ನು ಒಂದು ವಾರದೊಳಗೆ ಪರಿಹಾರವಾಗಲಿದೆ ಎಂದು ಅಶೋಕ್ ತಿಳಿಸಿದರು.

ಚಂದ್ರಶೇಖರ ಸ್ವಾಮೀಜಿ ಮುಟ್ಟಿದರೆ ಹುಷಾರ್...

ಎಫ್‌ಐಆರ್ ದಾಖಲಿಸಿರುವ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನದ ಶ್ರೀ ಚಂದ್ರಶೇಖರ ಸ್ವಾಮೀಜಿ ಮುಟ್ಟಿದರೆ ಅವರ ಇಡೀ ಸಮುದಾಯ ಬೆನ್ನಿಗೆ ನಿಲ್ಲಲಿದೆ ಎಂದು ವಿಧಾನ ಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ರಾಜ್ಯ ಸರ್ಕಾರವನ್ನು ಎಚ್ಚರಿಸಿದರು.

ಚಂದ್ರಶೇಖರ ಸ್ವಾಮೀಜಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಅಲ್ಲದೆ ತಾವು ನೀಡಿದ ಹೇಳಿಕೆಗೆ ಕ್ಷಮೆ ಕೂಡ ಕೋರಿದ್ದಾರೆ. ಆದರೂ ಯಾರೋ ಒಬ್ಬ ದೂರು ದಾಖಲಿಸಿದ್ದಾನೆಂದು ನೋಟಿಸ್ ನೀಡಿ ಅವರ ವಿರುದ್ಧ ಕ್ರಮಕ್ಕೆ ಸರ್ಕಾರ ಮುಂದಾಗಿದೆ. ಮೊದಲು ಸರ್ಕಾರ ಪ್ರಕರಣ ವಾಪಸು ಪಡೆಯಬೇಕು ಎಂದು ಆಗ್ರಹಿಸಿದರು.


ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ ಬಿರಿಯಾನಿ ಕೊಟ್ಟು ಕಳುಹಿಸಿದ್ದಾರೆ. ಡಿಜೆ ಹಳ್ಳಿ ಮತ್ತು ಕೆಜಿ ಹಳ್ಳಿಯಲ್ಲಿ ಪೊಲೀಸ್ ಸ್ಟೇಷನ್ ಮೇಲೆ ದಾಳಿ ಮಾಡಿದವರ ಕೇಸ್ ವಾಪಸು ಪಡೆದಿದ್ದಾರೆ. ದೇಶ ವಿರೋಧಿ ಕೃತ್ಯ ಎಸಗಿದವರ ವಿರುದ್ಧ ಕ್ರಮ ಕೈಗೊಳ್ಳದೆ ತಮ್ಮ ಹೇಳಿಕೆಗೆ ಕ್ಷಮೆಯಾಚಿಸಿದ ಸ್ವಾಮೀಜಿಗೆ ನೋಟಿಸ್ ಜಾರಿ ಮಾಡಿರುವುದು ಎಷ್ಟು ಸರಿ ಎಂದು ಅಶೋಕ್ ಪ್ರಶ್ನಿಸಿದರು.

ಮುಸ್ಲಿಂರಿಗೆ ಸಣ್ಣ ಗಾಯವಾದರೂ ಕಾಂಗ್ರೆಸ್‌ನವರು ಮುಲಾಮ್ ಹಚ್ಚುತ್ತಾರೆ. ಆದರೆ ಹಿಂದೂಗಳಿಗೆ ಎಂತಹ ಅನ್ಯಾಯವಾದರೂ ದನಿ ಎತ್ತುವುದಿಲ್ಲ. ಇದು ಕಾಂಗ್ರೆಸ್‌ನವರ ಧೋರಣೆ ಎಂದು ಕಿಡಿಕಾರಿದರು.

ಶ್ರೀ ಚಂದ್ರಶೇಖರ ಸ್ವಾಮೀಜಿ ಅವರನ್ನು ಮುಟ್ಟಬಾರದು, ಒಂದು ವೇಳೆ ಕ್ರಮಕ್ಕೆ ಮುಂದಾದರೆ ಅವರ ಇಡೀ ಸಮುದಾಯ ಬೆನ್ನಿಗೆ ನಿಲ್ಲಲಿದೆ. ಇದನ್ನು ಮೊದಲು ನೆನಪಿಗೆ ಇಟ್ಟುಕೊಳ್ಳಿ ಎಂದು ಅಶೋಕ್ ಎಚ್ಚರಿಸಿದರು.

ಕ್ಯಾನ್ಸರ್‌ನಿಂದಾಗಿ ವಿಚಾರಣೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ

ಪೊಲೀಸರಿಗೆ ಚಂದ್ರಶೇಖರನಾಥ ಸ್ವಾಮೀಜಿ ಪತ್ರ



ಬೆಂಗಳೂರು, ಡಿ.2– ಮುಸ್ಲಿಮರ ಮತದಾನದ ಹಕ್ಕಿನ ಬಗ್ಗೆ ವಿವಾದಾತ್ಮಕ ಮಾತುಗಳನ್ನಾಡಿದ್ದ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಚಂದ್ರಶೇಖರನಾಥ ಸ್ವಾಮೀಜಿ ಅವರ ವಿರುದ್ಧ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಸೋಮವಾರ ವಿಚಾರಣೆಗೆ ಹಾಜರಾಗುವಂತೆ ಪೊಲೀಸರು ನೋಟಿಸ್ ನೀಡಿದ್ದರು.

ಇಂದು (ಡಿ.2) ವಿಚಾರಣೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ ಎಂದು ಚಂದ್ರಶೇಖರನಾಥ ಸ್ವಾಮೀಜಿ ಉಪ್ಪಾರಪೇಟೆ ಪೊಲೀಸ್ ಉಪ ನಿರೀಕ್ಷಕರಿಗೆ ಪತ್ರದ ಮೂಲಕ ತಿಳಿಸಿದ್ದಾರೆ. ತಾವು ಮಾರಕ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದು, ವೈದ್ಯರು ಸುಮಾರು 10 ದಿನಗಳ ಕಾಲ ವಿಶ್ರಾಂತಿಯಲ್ಲಿ ಇರಲು ಸೂಚಿಸಿರುವುದರಿಂದ ವಿಚಾರಣೆಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಡಿ.18ರಂದು ಮಧ್ಯಾಹ್ನ ಸುಮಾರು 3 ಗಂಟೆ ವೇಳೆಗೆ ವಿಚಾರಣೆಗೆ ಹಾಜರಾಗುತ್ತೇವೆ. ವಿಚಾರಣೆಗೆ ಬರಲು ಸಾಧ್ಯವಾಗುತ್ತಿಲ್ಲವಾದ್ದರಿಂದ, ಏನಾದರೂ ಅನಾನುಕೂಲವಾದಲ್ಲಿ ತನಿಖಾಧಿಕಾರಿಗಳೇ ಮಠಕ್ಕೆ ಬಂದು ಹೇಳಿಕೆಯನ್ನು ಪಡೆದುಕೊಳ್ಳುವುದರಲ್ಲಿ ನಮಗೆ ಯಾವುದೇ ಅಭ್ಯಂತರವಿಲ್ಲ.

ಈಗಾಗಲೇ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಯಿತಪ್ಪಿನಿಂದಾಗಿ ನೀಡಿದ್ದ ಹೇಳಿಕೆಗೆ ವಿಷಾದ ವ್ಯಕ್ತಪಡಿಸಿದ್ದು, ಸ್ಪಷ್ಟೀಕರಣ ನೀಡಿರುವುದು ಎಲ್ಲಾ ಪತ್ರಿಕಾ ಮಾಧ್ಯಮ ಹಾಗೂ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗಿರುತ್ತದೆ. ಆದ್ದರಿಂದ ಸಮಾಜದ ಸ್ವಾಸ್ಥ್ಯ ಹಾಗೂ ಶಾಂತಿಯ ದೃಷ್ಟಿಯಿಂದ ಈ ಪ್ರಕರಣವನ್ನು ಬೆಳೆಸದೇ ಇಲ್ಲಿಗೇ ಮುಕ್ತಾಯಗೊಳಿಸಬೇಕೆಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇವೆ ಎಂದು ಚಂದ್ರಶೇಖರನಾಥ ಸ್ವಾಮೀಜಿ ಉಪ್ಪಾರಪೇಟೆ ಪೊಲೀಸ್ ಉಪ ನಿರೀಕ್ಷಕರಿಗೆ ಪತ್ರದ ಮೂಲಕ ತಿಳಿಸಿದ್ದಾರೆ.

ಗ್ಯಾಸ್ ಪೈಪ್ ಅಳವಡಿಸಲು ತೆಗೆದ ಹಳ್ಳ ಸಮರ್ಪಕವಾಗಿ ಮುಚ್ಚದ ಕಾರಣ ಹೂತುಹೋದ ಕಾರುಗಳು

ಮೈಸೂರು, ಡಿ.2(ಎಸ್‌ಬಿಡಿ)– ಗ್ಯಾಸ್ ಪೈಪ್‌ಲೈನ್ ಅಳವಡಿಕೆ ಬಳಿಕ ಸಮರ್ಪಕವಾಗಿ ಗುಂಡಿಮುಚ್ಚದ ಕಾರಣ ಮೈಸೂರಿನ ಸರಸ್ವತಿಪುರಂನಲ್ಲಿ ಕಾರುಗಳು ಹೂತುಕೊಂಡು, ಮಾಲೀಕರು ಪರಿತಪಿಸುವಂತಾಗಿದೆ.

ಎಡಬಿಡದೆ ಸುರಿಯುತ್ತಿರುವ ಮಳೆ ನಡುವೆ ಸರಸ್ವತಿಪುರಂ 12ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆಯಲ್ಲಿ ಈ ಅವಾಂತರ ಸೃಷ್ಟಿಯಾಗಿದೆ. ಮನೆ ಮುಂದೆ ನಿಲ್ಲಿಸಿದ್ದ ಐದಾರು ಕಾರುಗಳು ಚಕ್ರಗಳು ಪೈಪ್‌ಲೈನ್ ಗುಂಡಿಯಲ್ಲಿ ಹೂತುಕೊಂಡಿವೆ. ಒಂದೆರಡು ಕಾರುಗಳನ್ನು ಸಾರ್ವಜನಿಕರ ಸಹಾಯದಿಂದ ಮೇಲೆತ್ತಲಾಗಿದ್ದು, ಉಳಿದ ಕಾರುಗಳು ಗುಂಡಿಯಲ್ಲೇ ಹೂತಿವೆ.

ಮನೆ ಮನೆಗೆ ಪೈಪ್‌ಲೈನ್ ಮೂಲಕ ಗ್ಯಾಸ್ ಕಲ್ಪಿಸುವ ಯೋಜನೆ ನಗರದಲ್ಲಿ ಆಮೆಗತಿಯಲ್ಲಿ ನಡೆದಿದ್ದು, ಸರಸ್ವತಿಪುರಂ 12ನೇ ಮುಖ್ಯರಸ್ತೆಯ, 15ನೇ ಕ್ರಾಸ್‌ನಲ್ಲೂ ನಾಲ್ಕೈದು ದಿನಗಳ ಹಿಂದೆಯಷ್ಟೇ ಪೈಪ್‌ಲೈನ್ ಅಳವಡಿಸಲಾಗಿದೆ. ಆದರೆ ಬಳಿಕ ಕಾಲುವೆಗೆ ಸಮರ್ಪಕವಾಗಿ ಗುಂಡಿ ಮುಚ್ಚದೆ ಬೇಕಾಬಿಟ್ಟಿ ಮಣ್ಣು ಹಾಕಿ ಕೈತೊಳೆದುಕೊಳ್ಳಲಾಗಿದೆ. ಇದೀಗ ಜಡಿ ಮಳೆಯಿಂದಾಗಿ ಮಣ್ಣು ಕುಸಿದಿದೆ. ಪರಿಣಾಮ ಆ ಜಾಗದಲ್ಲಿ ನಿಲ್ಲಿಸಿದ್ದ ಕಾರುಗಳ ಚಕ್ರಗಳು ಮಣ್ಣಿನಲ್ಲಿ ಹೂತುಕೊಂಡಿವೆ.

ಪೈಪ್‌ಲೈನ್ ಮಾಡಿ ಸರಿಯಾಗಿ ಮಣ್ಣು ಮುಚ್ಚದೆ ಸಾರ್ವಜನಿಕರಿಗೆ ಸಂಕಷ್ಟ ತಂದೊಡ್ಡಿದ್ದಾರೆ. ಪೈಪ್‌ಲೈನ್ ನಡೆಸಿದ ಜಾಗದಲ್ಲಿ ನಿಲ್ಲಿಸಿದ್ದ ಐದಾರು ಕಾರುಗಳು ಹೂತಿವೆ. ಅಲ್ಲದೆ ಇಡೀ ರಸ್ತೆಯೇ ರಾಡಿಯಾಗಿದ್ದು, ಜನ ಓಡಾಡಲಾಗದ ಸ್ಥಿತಿ ನಿರ್ಮಾಣವಾಗಿದೆ. ಈ ಬಗ್ಗೆ ಸಂಬಂಧಪಟ್ಟ ಏಜೆನ್ಸಿಯವರಿಗೆ ತಿಳಿಸಿದರೂ ಕ್ರಮ ವಹಿಸಿಲ್ಲ. ನಗರ ಪಾಲಿಕೆಯವರೂ ಸ್ಪಂದಿಸುತ್ತಿಲ್ಲ. ಕೂಡಲೇ ಸೂಕ್ತ ಪರಿಹಾರ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಮನವಿ ಮಾಡಿದ್ದಾರೆ.



ಮೈಸೂರಿನ ಸರಸ್ವತಿಪುರಂನಲ್ಲಿ ಗ್ಯಾಸ್ ಪೈಪ್‌ಲೈನ್ ಅಸಮರ್ಪಕ ಕಾಮಗಾರಿಯಿಂದ ಕಾರು ಹೂತಿರುವುದು.

ಇಂದು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷರ ಮೈಸೂರು ಜಿಲ್ಲಾ ಪ್ರವಾಸ

ಮೈಸೂರು,ಡಿ.2– ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಜಿ.ಪದ್ಮಾವತಿ, ಡಿ.3 ರಂದು ಮೈಸೂರು ಜಿಲ್ಲಾ ಪ್ರವಾಸವನ್ನು ಕೈಗೊಂಡಿದ್ದು, ಅಂದು ಬೆಳಗ್ಗೆ 10.30 ಗಂಟೆಗೆ ವಿಜಯನಗರ 2ನೇ ಹಂತದಲ್ಲಿರುವ ಕೃಷ್ಣದೇವರಾಯ ವೃತ್ತ ಹತ್ತಿರದ ಸ್ತ್ರೀ ಶಕ್ತಿ ಭವನದಲ್ಲಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರ ಕಚೇರಿಯಲ್ಲಿ ಮಹಿಳಾ ಅಭಿವೃದ್ಧಿ ನಿಗಮದ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಲಿದ್ದಾರೆ. ಮಧ್ಯಾಹ್ನ 1.30 ಗಂಟೆಗೆ ವಿವಿಧ ಫಲಾನುಭವಿಗಳಿಗೆ ಆದೇಶ ಪತ್ರವನ್ನು ವಿತರಿಸಲಿದ್ದು, ಮಧ್ಯಾಹ್ನ 2 ಗಂಟೆಗೆ ಅಧಿಕಾರಿಗಳೊಂದಿಗೆ ವಿವಿಧ ಘಟಕಗಳ ವೀಕ್ಷಣೆ ಮಾಡಲಿದ್ದಾರೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು,ಡಿ.2– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಖೇಲೋ ಇಂಡಿಯಾ ಯೋಜನೆಯಡಿ ರಾಜ್ಯ ಉತ್ಕೃಷ್ಟತಾ ಕೇಂದ್ರಕ್ಕೆ ಖೇಲೋ ಇಂಡಿಯಾ ನಿಯಮಗಳನುಸಾರ ಗುತ್ತಿಗೆ ಆಧಾರದ ಮೇಲೆ ಯುವ ವೃತ್ತಿಪರರು, ಮಸಾಜು ಮಾಡುವವರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳು ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಭರ್ತಿಮಾಡಿ ಸಂಬಂಧಿಸಿದ ದಾಖಲೆಗಳನ್ನು ನೋಟರಿ ಮಾಡಿಸಿ ಡಿ.5 ರೊಳಗೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಚೇರಿಗೆ ಸಲ್ಲಿಸಬಹುದು.

ಅರ್ಜಿ ನಮೂನೆ ಮತ್ತು ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯ ನೋಟಿಸ್ ಬೋರ್ಡ್ ಅಥವಾ ದೂ.ಸಂ: 0821–2564179 ಅನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ಶವ ಪತ್ತೆ

ಮೈಸೂರು,ಡಿ.2– ನ.30 ರಂದು ಮೈಸೂರು ರೈಲ್ವೆ ನಿಲ್ದಾಣದ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರದ ಹತ್ತಿರ ಸುಮಾರು 45 ವರ್ಷದ ಅಪರಿಚಿತ ಗಂಡಸು ಸ್ವಾಭಾವಿಕವಾಗಿ ಮೃತಪಟ್ಟಿದ್ದಾನೆ. ಮೃತದೇಹವು ಮೈಸೂರಿನ ಕೆ.ಆರ್ ಆಸ್ಪತ್ರೆಯ ಶವಾಗಾರದಲ್ಲಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ವ್ಯಕ್ತಿಗೆ ಸುಮಾರು 45 ವರ್ಷ ವಯಸ್ಸಾಗಿದ್ದು, 5.6 ಅಡಿ ಎತ್ತರ, ಕೋಲುಮುಖ, ಸಾಧಾರಣ ಮೈಕಟ್ಟು, ಕಪ್ಪು ಮೈಬಣ್ಣ, ಬಲಗೈ ಮೊಣಕೈ ಹತ್ತಿರ ಒಂದು ಹಳೆಯ ಒಣಗಿದ ಗಾಯವಿರುತ್ತದೆ.

ಮೃತನ ವಾರಸುದಾರರ ಬಗ್ಗೆ ಮಾಹಿತಿ ದೊರೆತಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂರವಾಣಿ ಸಂ: 0821–2516579 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಫ್ತು ವ್ಯವಹಾರ ಹೆಚ್ಚಳ ಜಿಡಿಪಿ ಬೆಳವಣಿಗೆಗೆ ಸಹಕಾರಿ

- ಬೆಂಗಳೂರು ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಜಂಟಿ ನಿರ್ದೇಶಕ ಸಿ.ಎಸ್. ಬಾಬು ನಾಗೇಶ್ ಅಭಿಮತ
- ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮಕ್ಕೆ ಚಾಲನೆ

ಮೈಸೂರು,ಡಿ.2(ಎಂಟಿವೈ)– ದೇಶದ ಕೈಗಾರಿಕಾ ಕ್ಷೇತ್ರದಲ್ಲಿ ರಫ್ತು ಹೆಚ್ಚಾದರೆ ದೇಶದ ಜಿಡಿಪಿ ಬೆಳವಣಿಗೆ ಹೆಚ್ಚಾಗುತ್ತದೆ ಎಂದು ಬೆಂಗಳೂರಿನ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಜಂಟಿ ನಿರ್ದೇಶಕ ಸಿ.ಎಸ್.ಬಾಬು ನಾಗೇಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರ ಬೆಂಗಳೂರು, ಜಿಲ್ಲಾ ಕೈಗಾರಿಕಾ ಕೇಂದ್ರ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಆರು ದಿನಗಳ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆಮದು ಕಡಿಮೆ ಮಾಡಿ, ರಫ್ತು ಹೆಚ್ಚಾದರೆ ದೇಶದ ಜಿಡಿಪಿ ಹೆಚ್ಚಾಗುತ್ತದೆ. ರಫ್ತಿನಲ್ಲಿ ಯಾವುದೇ ಕಾರಣಕ್ಕೂ ನಷ್ಟ ಇರುವುದಿಲ್ಲ. ಇದರಿಂದ ಅಧಿಕ ಆದಾಯ ಗಳಿಸಿ ಬೆಳವಣಿಗೆ ಹೊಂದಲು ಸಾಧ್ಯವಾಗುತ್ತದೆ. ಹೊರದೇಶಗಳಿಗೆ ರಫ್ತು ಮಾಡಿದರೆ ಆ ದೇಶದ ಕರೆನ್ಸಿಯಲ್ಲಿ ಆದಾಯ ದೊರೆಯುತ್ತದೆ. ಹಾಗೆಯೇ ತರಬೇತಿಯಲ್ಲಿ ಆಯಾ ಇಲಾಖೆಯ ಸಂಸ್ಥೆಗಳು ಮಾಹಿತಿಯನ್ನು ನೀಡುತ್ತವೆ. ಅದನ್ನು ಸದುಪಯೋಗಪಡಿಸಿಕೊಳ್ಳಲು ಕೈಗಾರಿಕೋದ್ಯಮಿಗಳು ಮುಂದಾಗಬೇಕು. ದೇಶೀಯವಾಗಿ ರಫ್ತು ಘಟಕ ಪ್ರಾರಂಭಿಸಿ, ಯಶಸ್ಸು ಕಂಡರೆ ಉದ್ಯಮಗಳು ಏಳಿಗೆ ಸಾಧಿಸುತ್ತವೆ ಎಂದು ತಿಳಿಸಿದರು.

ರಫ್ತು ಹೆಚ್ಚಳಕ್ಕೆ ಸಂಬಂಧಿಸಿದಂತೆ ಇದುವರೆಗೂ ನಡೆದಿರುವ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ಶೇ.100ರಷ್ಟು ಕೈಗಾರಿಕೋದ್ಯಮಿಗಳಲ್ಲಿ ಶೇ.30ರಷ್ಟು ಮಂದಿ ತರಬೇತಿಯನ್ನು ಯಶಸ್ವಿಯಾಗಿ ಉಪಯೋಗಿಸಿಕೊಂಡು ರಫ್ತು ವ್ಯವಹಾರದಲ್ಲಿ ಮುಂದಾಗಿದ್ದಾರೆ. ಉಳಿದ ಶೇ.70ರಷ್ಟು ಮಂದಿಯಿಂದ ಸಕಾರಾತ್ಮಕ ಪ್ರತಿಕ್ರಿಯೆ ಕಂಡು ಬರುತಿಲ್ಲ ಎಂದು ವಿಷಾದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಕೆ.ಶಿವಲಿಂಗಯ್ಯ ಮಾತನಾಡಿ, ರಫ್ತು ಉತ್ತೇಜನ ಕಾರ್ಯಕ್ರಮದಲ್ಲಿ ಅಧಿಕ ಆದಾಯ ಗಳಿಕೆಯ ಬಗ್ಗೆ ಮಾಹಿತಿ ಪಡೆದು ಹೆಚ್ಚಿನ ಉತ್ಪನ್ನಗಳ ರಫ್ತು ಮಾಡುವತ್ತ ಗಮನಹರಿಸಬೇಕು. 6 ದಿನಗಳ ರಫ್ತು ತರಬೇತಿ ಕಾರ್ಯಕ್ರಮವನ್ನು ಸದುಪಯೋಗಪಡಿಸಿಕೊಂಡು ಆಮದು ಮತ್ತು ರಫ್ತಿನ ವಿನಿಮಯದಲ್ಲಿ ದೇಶ ಅಭಿವೃದ್ಧಿಯನ್ನು ಕಾಣಲು ಎಲ್ಲರೂ ಕೈಜೋಡಿಸಬೇಕು ಎಂದರು.

ಮೈಸೂರಿನ ಕೈಗಾರಿಕೆಗಳ ಸಂಘದ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಮಾತನಾಡಿ, ಆಮದು ಕಡಿಮೆ ಆಗಬೇಕು. ರಫ್ತು ಹೆಚ್ಚಾಗಬೇಕು. ಆಗ ಮಾತ್ರ ನಮ್ಮ ದೇಶದ ಜಿಡಿಪಿ ಹೆಚ್ಚಾಗುತ್ತದೆ. ಎಂಎಸ್‌ಎಂಇಯಲ್ಲಿ ರಫ್ತಿಗೆ ಸಂಬಂಧಿಸಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರ ಉತ್ತೇಜನ ನೀಡುತ್ತಿದೆ. ಮೈಸೂರಿನಲ್ಲಿ 165 ಕ್ಕೂ ಹೆಚ್ಚು ರಫ್ತು ಆದಾಯದ ಕೈಗಾರಿಕೆಗಳಿವೆ. ಇದನ್ನು ಹೊರತುಪಡಿಸಿ ಪರೋಕ್ಷ ಮದ್ರಾಸ್, ಬಾಂಬೆಯಿಂದ ರಫ್ತು ಮಾಡುವ ಉದ್ಯಮಗಳು ಸಾಕಷ್ಟು ಪ್ರಮಾಣದಲ್ಲಿ ಇವೆ. ರಫ್ತಿನಲ್ಲಿ ಅಗರಬತ್ತಿ, ಹ್ಯಾಂಡಿ–ಕ್ರಾಫ್ಟ್ಸ್, ಮೈಸೂರು ಸ್ಯಾಂಡಲ್, ಮೈಸೂರು ಸಿಲ್ಕ್ ಉತ್ಪನ್ನಗಳು ಹೆಚ್ಚಾಗಿವೆ. ಇವು ಪ್ರಪಂಚದ ರಫ್ತು ಉದ್ಯಮ ವರ್ಗಗಳನ್ನು ಆಕರ್ಷಿಸಿವೆ ಎಂದು ತಿಳಿಸಿದರು.

ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಕೆ.ಬಿ.ಲಿಂಗರಾಜು ಮಾತನಾಡಿ, ಉತ್ಪಾದನೆ ಮಾಡುವುದು ಮಾತ್ರವಲ್ಲ ರಫ್ತು ಮಾಡಲು ಚಾಣಾಕ್ಷತನ ಬೇಕು. ನಾವು ತಯಾರು ಮಾಡುವಂತಹ ರಫ್ತುಗಳ ಗುಣಮಟ್ಟ, ತೂಕ, ಅಳತೆ ಮತ್ತು ಪ್ಯಾಕ್ ಎಲ್ಲವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದಾಗ ಮಾತ್ರ ನಮ್ಮ ಉತ್ಪನ್ನಗಳು ಅಧಿಕ ಜನರನ್ನು ತಲುಪಲು ಸಾಧ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮೈಸೂರು ಮತ್ತು ವಿಟಿಪಿಸಿ– ರಫ್ತು ಸೌಲಭ್ಯ ಕೇಂದ್ರ, ಜಿ.ಪಂ. ಉಪನಿರ್ದೇಶಕರಾದ ಮೇಘಲಾ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಕೈಗಾರಿಕೋದ್ಯಮಿಗಳಿಗಾಗಿ ರಫ್ತು ಹೆಚ್ಚಳ ಸಂಬಂಧ ಆಯೋಜಿಸಿದ್ದ ಕಾರ್ಯಾಗಾರವನ್ನು ಬೆಂಗಳೂರಿನ ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರದ ಜಂಟಿ ನಿರ್ದೇಶಕ ಸಿ.ಎಸ್.ಬಾಬು ನಾಗೇಶ್ ಉದ್ಘಾಟಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಅಮರನ್(ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಜಲಂಧರ(ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ಕಿ ವಿದ್ಯಾ ಕಾ ವೋ ವಾಲಾ ವಿಡಿಯೋ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಜಲಂಧರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಮೆಕ್ಯಾನಿಕ್ ರಾಕಿ (ತೆ)	4 ಪ್ರದರ್ಶನಗಳು
ಸಂಗಂ	
ಭೈರತಿ ರಣಗಲ್ (ಕ)	4 ಪ್ರದರ್ಶನಗಳು
ಲಿಡೋ	
ಲಕ್ಕಿ ಭಾಸ್ಕರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಘೀರ (ಕ)	4 ಪ್ರದರ್ಶನಗಳು
ಪ್ರಭಾ	
ಬಘೀರಾ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕಂಗುವಾ (3ಡಿ) (ತ): ಬೆ.10ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ಅಮರನ್ (ತ): ಸಂ.4ಕ್ಕೆ, ಆನಂದ್ ಶ್ರೀಬಾಲ (ಮ): ರಾ.10.20ಕ್ಕೆ.
ಸ್ಕ್ರೀನ್ 2	ಅಮರನ್ (ತ): ಬೆ.9.40ಕ್ಕೆ, ಮ.1ಕ್ಕೆ, ಬಘೀರ (ಕ): ಸಂ.4.15ಕ್ಕೆ, ಗ್ಲಾಡಿಯೇಟರ್ 2 (ಇಂ): ರಾ.7.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ದಿ ಸಬರ್‌ಮತಿ ರಿಪೋರ್ಟ್ (ಹಿಂ): ಬೆ.10.35ಕ್ಕೆ, ರಾ.7.15ಕ್ಕೆ, ಬಘೀರ (ಕ): ಮ.1.10ಕ್ಕೆ, ಲಕ್ಕಿ ಭಾಸ್ಕರ್ (ಮ): ಸಂ.4.15ಕ್ಕೆ, ಮಟ್ಕಾ (ತೆ): ರಾ.9.55ಕ್ಕೆ.
ಸ್ಕ್ರೀನ್ 4	ಭೈರತಿ ರಣಗಲ್ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಬಘೀರ (ಕ): ಬೆ.10ಕ್ಕೆ, ಮ.3.55ಕ್ಕೆ, ಕಂಗುವಾ (ಕ): ಮ.1ಕ್ಕೆ, ಕಂಗುವಾ (ತ): ಸಂ.6.55ಕ್ಕೆ, ಅಮರನ್ (ತ): ರಾ.9.50ಕ್ಕೆ.
ಸ್ಕ್ರೀನ್ 2	ಅಮರನ್ (ಕ): ಬೆ.10.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಸಂ.4.25ಕ್ಕೆ, ರಾ.7.05ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಭೈರತಿ ರಣಗಲ್ (ಕ): ಬೆ.10ಕ್ಕೆ, ಸಂ.6.30ಕ್ಕೆ, ಅಮರನ್ (ಕ): ಮ.12.40ಕ್ಕೆ, ಕಂಗುವಾ (3ಡಿ)(ತ): ಮ.3.55ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಕಂಗುವಾ (ತ): ಬೆ.10.30ಕ್ಕೆ, ಸಂ.5.20ಕ್ಕೆ, ಅಮರನ್ (ತ): ಮ.2.10ಕ್ಕೆ, ಅಮರನ್ (ಕ): ರಾ.8.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಯೋಜನೆಗಳು ಫಲಾನುಭವಿಗಳಿಗೆ ತಲುಪಲಿ

ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಸಲಹೆ



ಮೈಸೂರು,ಡಿ.2– ಯಾವುದೇ ಯೋಜನೆಗಳಿಗೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಶೀಘ್ರವಾಗಿ ಅವರಿಗೆ ಸೌಲಭ್ಯಗಳು ದೊರೆಯುವಂತೆ ಮಾಡಬೇಕು ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ್ ರೆಡ್ಡಿ ಅಧಿಕಾರಿಗಳಿಗೆ ಸೂಚಿಸಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವಿವಿಧ ಯೋಜನೆಗಳಾದ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಅಧಿನಿಯಮ–2005, ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆಯನ್ನು ತಡೆಗಟ್ಟುವಿಕೆ, ರಕ್ಷಣೆ ಮತ್ತು ಪುನರ್ವಸತಿ, ಉದ್ಯೋಗಸ್ಥ ಮಹಿಳೆಯರ ವಸತಿನಿಲಯಗಳ ಕಾರ್ಯನಿರ್ವಹಣೆ. ಕೇಂದ್ರ ಪುರಸ್ಕೃತ ಮಿಷನ್ ಶಕ್ತಿ ಯೋಜನೆ ಅನುಷ್ಠಾನ, ಸಾಂತ್ವನ ಯೋಜನೆ ಹಾಗೂ ಸ್ತ್ರೀಶಕ್ತಿ ಯೋಜನೆಗಳ ಸಂಬಂಧ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಅಂಗನವಾಡಿ ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಗಳು ಆರಂಭಗೊಂಡಿದ್ದು, ಡಿಸೆಂಬರ್ 3 ನೇ ವಾರದೊಳಗೆ ಅಂತಿಮ ಪಟ್ಟಿಯನ್ನು ಬಿಡುಗಡೆ ಮಾಡಬೇಕು. ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಅರ್ಹ ಅಭ್ಯರ್ಥಿಗೆ ಯಾವುದೇ ರೀತಿಯ ಅಕ್ರಮ ಆಗದಂತೆ ನೋಡಿಕೊಂಡು ಅರ್ಹರನ್ನು ಆಯ್ಕೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಮಹಿಳೆಯರಿಗಾಗಿ ಕೆಲಸ ನಿರ್ವಹಿಸುತ್ತಿರುವ 8 ಸಾಂತ್ವನ ಕೇಂದ್ರಗಳಿದ್ದು, ಇಲ್ಲಿ ಲೈಂಗಿಕ ಕಿರುಕುಳ, ಕೌಟುಂಬಿಕ ಕಿರುಕುಳ ಹಾಗೂ ಇತ್ಯಾದಿ ಸಮಸ್ಯೆಗಳಿಂದ ಬಳಲುತ್ತಿರುವ ಮಹಿಳೆಯರಿಗೆ ಕೌನ್ಸಿಲಿಂಗ್ ಮೂಲಕ ಪರಿಹಾರ ನೀಡುವುದು ಹಾಗೂ ಆಶ್ರಯವನ್ನು ನೀಡಿ ಸಂತೈಸಲಾಗುತ್ತಿದ್ದು, ಇದರಿಂದ ಜಿಲ್ಲೆಯ ಹಲವಾರು ಹೆಣ್ಣು ಮಕ್ಕಳು ತಮ್ಮ ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಹಾಗಾಗಿ ಈ ರೀತಿಯ ಸಂಸ್ಥೆಗಳು ಇನ್ನೂ ಹೆಚ್ಚಿನ ಕಾರ್ಯನಿರ್ವಹಿಸಲು ಮುಂದಾಗಬೇಕು ಎಂದು ಹೇಳಿದರು.

ಸರ್ಕಾರೇತರ ಸಂಸ್ಥೆಗಳು ಪ್ರಾರಂಭಿಸಿರುವ ಉದ್ಯೋಗಸ್ಥ ಮಹಿಳೆಯರ ವಸತಿ ನಿಲಯಗಳಲ್ಲಿ ತಮ್ಮಲ್ಲಿರುವ ಅನುದಾನದ ಮಟ್ಟದಲ್ಲಿ ಊಟದ ವ್ಯವಸ್ಥೆಯನ್ನು ಕಲ್ಪಿಸಲು ಮುಂದಾಗಿ ಮಹಿಳೆಯರಿಗೆ ಅನುಕೂಲವಾಗುವಂತೆ ಮಾಡಬೇಕು. ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆಗಳು ಕಂಡುಬಂದರೆ ಅದರ ವಿರುದ್ಧ ತಕ್ಷಣ ಕ್ರಮ ಕೈಗೊಂಡು ಸಾಗಾಣಿಕೆಯನ್ನು ಶಾಶ್ವತವಾಗಿ ನಿರ್ಮೂಲನೆ ಮಾಡಲು ಕ್ರಮಕೈಗೊಳ್ಳಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರಸ್ವಾಮಿ ಪಿ.ಸಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಬಸವರಾಜು ಸೇರಿದಂತೆ ಜಿಲ್ಲಾ ಮಟ್ಟದ ಹಾಗೂ ತಾಲೂಕು ಮಟ್ಟದ ಅಧಿಕಾರಗಳು ಉಪಸ್ಥಿತರಿದ್ದರು.

ಡಿ.6, ಡಾ.ಬಿ.ಆರ್.ಅಂಬೇಡ್ಕರ್‌ರವರ ಪ್ರತಿಮೆಗೆ ಪುಷ್ಪಾರ್ಚನೆ

ಮೈಸೂರು,ಡಿ.2– ಜಿಲ್ಲಾಡಳಿತ, ಮೈಸೂರು ವತಿಯಿಂದ ರಾಷ್ಟ್ರನಾಯಕ ಡಾ.ಬಿ.ಆರ್. ಅಂಬೇಡ್ಕರ್‌ರವರ 66ನೇ ಮಹಾಪರಿನಿರ್ವಾಣ ಕಾರ್ಯಕ್ರಮದ ಪ್ರಯುಕ್ತ ಡಿ.6 ರಂದು ಬೆಳಗ್ಗೆ 9.30 ಗಂಟೆಗೆ ಟೌನ್‌ಹಾಲ್ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಕಿಸ್ತಾನ ಜಿಂದಾಬಾದ್ ಎಂದು ಕೂಗಿದವರಿಗೆ ರಕ್ಷಣೆ

ಬಾಯ್ತಪ್ಪಿ ಆಡಿದ ಮಾತಿಗೆ ಕ್ಷಮೆಯಾಚಿಸಿದರೂ ಸ್ವಾಮೀಜಿಗೆ ಬೆದರಿಕೆ; ಎಫ್‌ಐಆರ್ ದಾಖಲು



ಬೆಂಗಳೂರು, ಡಿ.2(ಕೆಎಂಶಿ)–ದೇಶ ದ್ರೋಹಿ ಚಟುವಟಿಕೆಗಳಲ್ಲಿ ಪಾಲ್ಗೊಂಡವರ ಮೇಲಿನ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯುವ ಸರ್ಕಾರ ಹಿಂದೂ ಸ್ವಾಮೀಜಿಗಳಿಗೆ ಬೆದರಿಕೆ ಹಾಕಿ ನೋಟಿಸ್ ನೀಡುತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ಗುಡುಗಿದ್ದಾರೆ.

ಪಾಕಿಸ್ತಾನ್ ಜಿಂದಾಬಾದ್ ಎಂದು ಕೂಗಿದವರನ್ನು ರಕ್ಷಿಸುತ್ತೀರಿ, ಮಾಡಿದ ತಪ್ಪಿಗೆ ಆಕ್ರೋಶ ವ್ಯಕ್ತವಾದಾಗ, ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ಚಂದ್ರಶೇಖರನಾಥ ಮಹಾ ಸ್ವಾಮೀಜಿ ಕ್ಷಮೆ ಕೇಳಿದ ಮೇಲೂ ಅವರ ಮೇಲೆ ಕ್ರಮ ಜರುಗಿಸುವುದಾದರೆ, ದ್ವಿಮುಖ ನೀತಿ ನಿಮ್ಮದಲ್ಲವೇ? ಎಂದು ಪ್ರಶ್ನಿಸಿದ್ದಾರೆ.

ನಗರದ ಮೈಸೂರು ರಸ್ತೆ ಬಳಿ ಇರುವ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದಲ್ಲಿ ಚಂದ್ರಶೇಖರನಾಥ ಮಹಾಸ್ವಾಮೀಜಿ ಅವರನ್ನು ಇಂದು ಭೇಟಿ ಮಾಡಿ ಆರೋಗ್ಯ ವಿಚಾರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವಕ್ಫ್ ವಿಚಾರದಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಹೋರಾಟದಲ್ಲಿ ಸ್ವಾಮೀಜಿಗಳು, ರಾಜ್ಯ ಸರ್ಕಾರದ ನಡವಳಿಕೆ ವಿರುದ್ಧ ಆಕ್ರೋಶಭರಿತರಾಗಿ ಹೇಳಿಕೆ ಕೊಟ್ಟಿದ್ದರು, ಆ ಹೇಳಿಕೆ ಬಗ್ಗೆ ಸ್ವಾಮೀಜಿಗಳು ಕ್ಷಮೆಯನ್ನೂ ಕೇಳಿದ್ದಾರೆ. ಇದರ ನಡುವೆ ರಾಜ್ಯ ಸರ್ಕಾರವು ಸ್ವಾಮೀಜಿಗಳ ವಿರುದ್ಧ ಎಫ್‌ಐಆರ್ ದಾಖಲು ಮಾಡಿ ಅವರಿಗೆ ತನಿಖೆಗೆ ಬರಲು ಒತ್ತಾಯಿಸಿದೆ ಎಂದು ಆಕ್ಷೇಪಿಸಿದರು.

ಸ್ವಾಮೀಜಿಗಳ ಆರೋಗ್ಯ ಸರಿ ಇಲ್ಲದಿರುವ ಕುರಿತು ತಿಳಿಸಿದ್ದಲ್ಲದೆ, ಅಗತ್ಯ ಉತ್ತರವನ್ನು ಪತ್ರ ಮೂಲಕ ನೀಡಿದ್ದರು, ಆದರೂ, ಒತ್ತಡ ಹಾಕುತ್ತಿರುವುದು ಸರಿಯಲ್ಲ ಎಂದು ಖಂಡಿಸಿದರು. ರಾಜ್ಯ ಸರ್ಕಾರವು ವಕ್ಫ್ ವಿಷಯ ಮುಂದಿಟ್ಟು ರೈತರನ್ನು ಒಕ್ಕಲೆಬ್ಬಿಸುತ್ತಿದೆ, ಮಠ ಮಾನ್ಯಗಳ ಜಮೀನು ಕಿತ್ತುಕೊಳ್ಳುತ್ತಿದೆ, ಅಧಿಕಾರಿಗಳ ಮೂಲಕ ನೋಟಿಸ್ ಕೊಡುತ್ತಿದೆ ಇದರ ವಿರುದ್ಧ ಉಗ್ರ ಪ್ರತಿಭಟನೆ ನಡೆದಿದ್ದು, ರೈತರು ಬೀದಿಗೆ ಇಳಿದಿದ್ದಾರೆ ಎಂದರು.

ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ್ ಮಾತನಾಡಿ, ಸ್ವಾಮೀಜಿಗಳು ಕ್ಷಮೆ ಕೇಳಿದರೂ ಕೇಸು ದಾಖಲಿಸಿದ್ದಾರೆ, ದೇಶ ವಿರೋಧಿ, ಗಲಭೆ ಎಬ್ಬಿಸುವ ಹಾಗೂ ಸೌಹಾರ್ದತೆ ಹಾಳು ಮಾಡುವ ರೀತಿಯಲ್ಲಿ ಹೇಳಿಕೆ ಕೊಟ್ಟ ಇತರರ ಬಗ್ಗೆ ಸರ್ಕಾರ ಏಕೆ ಕೇಸು ಹಾಕಿಲ್ಲ, ಅವರ ಮೇಲೂ ಪ್ರಕರಣ ದಾಖಲಿಸಬೇಕಿತ್ತಲ್ಲವೇ, ಕಾನೂನು ಬೇರೆ ಬೇರೆ ಇದೆಯೇ ಎಂದು ಪ್ರಶ್ನಿಸಿದರು.

ಸ್ವಾಮೀಜಿಯವರಿಗೆ 80 ವರ್ಷ ವಯಸ್ಸಾಗಿದ್ದು, ಅನಾರೋಗ್ಯದಿಂದಿದ್ದಾರೆ, ಬಹಳ ನೊಂದಿದ್ದಾರೆ, ದೇಶ ದ್ರೋಹಿಗಳಿಗೂ ಇದು ಅನ್ವಯ ಮಾಡಬೇಕಿತ್ತು. ಎಲ್ಲರೂ ಒಗ್ಗೂಡಿ ಕೆಲಸ ಮಾಡಿ ಎಂಬುದಾಗಿ ಸ್ವಾಮೀಜಿ ಆಶೀರ್ವದಿಸಿದ್ದಾಗಿ ಹೇಳಿದರು.

ಪಂಜಾಬ್ ಮಾಜಿ ಡಿಸಿಎಂ ಸುಖಬೀರ್ ಬಾದಲ್‌ಗೆ ಪಾತ್ರೆ ತೊಳೆಯುವ, ಬೂಟು ಸ್ವಚ್ಛಗೊಳಿಸುವ ಶಿಕ್ಷೆ!

ಚಂಡೀಗಢ: ಧಾರ್ಮಿಕ ದುರ್ವರ್ತನೆ ತೋರಿದ್ದಕ್ಕಾಗಿ ಪಂಜಾಬ್ ಮಾಜಿ ಉಪ ಮುಖ್ಯಮಂತ್ರಿ, ಹಾಗೂ ಶಿರೋಮಣಿ ಅಕಾಲಿದಳ (ಎಸ್‌ಎಡಿ)ದ ಮಾಜಿ ಅಧ್ಯಕ್ಷ ಸುಖಬೀರ್ ಸಿಂಗ್ ಬಾದಲ್‌ಗೆ ಧಾರ್ಮಿಕ ಶಿಕ್ಷೆ ನೀಡಲಾಗಿದೆ.



'ತಂಖಾಹ್' ಎಂದು ಕರೆಯಲ್ಪಡುವ ಅಕಾಲ್ ತಖ್ತ್ ಜತೇದಾರ್ ಗ್ಯಾನಿ ರಘಬೀರ್ ಸಿಂಗ್ ನೇತೃತ್ವದ ಐವರು ಪ್ರಧಾನ ಅರ್ಚಕರು ಸೋಮವಾರ ಸುಖಬೀರ್ ಬಾದಲ್ ಅವರಿಗೆ ಶಿಕ್ಷೆ ಘೋಷಿಸಿದ್ದು, ಅಮೃತಸರದ ಸ್ವರ್ಣ ಮಂದಿರದಲ್ಲಿ ಪಾತ್ರೆಗಳನ್ನು ತೊಳೆಯಲು ಮತ್ತು ಬೂಟುಗಳನ್ನು ಸ್ವಚ್ಛಗೊಳಿಸುವಂತೆ ಆದೇಶಿಸಲಾಗಿದೆ.

ಇದೇ ವೇಳೆ ಪಕ್ಷದ ಕಾರ್ಯಕಾರಿ ಸಮಿತಿಯು ಸುಖ್ಬೀರ್ ಅವರ ರಾಜೀನಾಮೆಯನ್ನು ಅಂಗೀಕರಿಸಬೇಕು ಮತ್ತು ಮೂರು ದಿನಗಳಲ್ಲಿ ಅಕಾಲ್ ತಖ್ತ್‌ಗೆ ವರದಿ ಮಾಡುವಂತೆ ಸೂಚಿಸಲಾಯಿತು. ಅಲ್ಲದೆ ಆರು ತಿಂಗಳೊಳಗೆ SAD ಅಧ್ಯಕ್ಷ ಮತ್ತು ಪದಾಧಿಕಾರಿಗಳ ಹುದ್ದೆಗೆ ಚುನಾವಣೆ ನಡೆಸಲು ಸಮಿತಿ ರಚಿಸುವಂತೆ ಸೂಚಿಸಲಾಗಿದೆ.

ಸಿಖ್ಖರ ಸರ್ವೋಚ್ಚ ಧಾರ್ಮಿಕ ಸಂಸ್ಥೆಯಾದ ಅಕಾಲ್ ತಖ್ತ್, ಮಾಜಿ ಮುಖ್ಯಮಂತ್ರಿ ದಿವಂಗತ ಪ್ರಕಾಶ್ ಸಿಂಗ್ ಬಾದಲ್ ಅವರಿಗೆ ನೀಡಲಾಗಿದ್ದ 'ಪಂಥ್ ರತನ್ ಫಖ್ರ್–ಎ–ಕ್ವಾಮ್' ಎಂಬ ಬಿರುದನ್ನು ಕೂಡ ಹಿಂತೆಗೆದುಕೊಂಡಿದೆ. ಧರ್ಮನಿಂದನೆ ಪ್ರಕರಣದ ಆರೋಪಿಯಾಗಿರುವ ಸ್ವಯಂ ಘೋಷಿತ ದೇವಮಾನವ ಮತ್ತು ಡೇರಾ ಸಚ್ಚಾ ಸೌದಾ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್ ಅವರಿಗೆ ಕ್ಷಮಾದಾನ ನೀಡಿದ ಆರೋಪವನ್ನೂ ಅವರ ಮೇಲೆ ಹೊರಿಸಲಾಗಿದೆ.

ಅನುದಾನರಹಿತ ಶಾಲೆಗಳಿಗೆ ವಿಧಿಸುವ ಅಗ್ನಿ, ಕಟ್ಟಡ ಸುರಕ್ಷತೆ ನಿಯಮ ಸರ್ಕಾರಿ ಶಾಲೆಗೂ ಅನ್ವಯವಾಗಬೇಕು

ಸರ್ಕಾರಕ್ಕೆ ಹೈಕೋರ್ಟ್ ಚಾಟಿ

ಬೆಂಗಳೂರು, ಡಿ.2– ಅನುದಾನರಹಿತ ಶಾಲೆಗಳಿಗೆ ವಿಧಿಸಲಾಗಿರುವ ಕಟ್ಟಡ ಹಾಗೂ ಅಗ್ನಿ ಸುರಕ್ಷತೆ ಸೇರಿದಂತೆ ಹಲವು ಷರತ್ತುಗಳ ಪಾಲನೆ ಹಾಗೂ ಮಾರ್ಗಸೂಚಿಯಂತೆ ಅಳವಡಿಸುವ ವಿಚಾರದಲ್ಲಿ ಸರ್ಕಾರಿ ಶಾಲೆಗಳಿಗೆ ವಿನಾಯಿತಿ ಸಲ್ಲದು ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.



ಅನುದಾನರಹಿತ ಮಾನ್ಯತೆ ಪಡೆದ ಶಾಲೆಗಳ ಸಂಘಟನೆ (ಅವರ್ಸ್ ಸ್ಕೂಲ್ಸ್) ಕಾರ್ಯದರ್ಶಿ ಎನ್.ಪ್ರಭಾಕರ ಅರಸ್ ಸೇರಿದಂತೆ ಒಟ್ಟು 11 ವಿದ್ಯಾಸಂಸ್ಥೆ ಪ್ರತಿನಿಧಿಗಳು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ನ್ಯಾ. ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಈ ವಿಷಯದಲ್ಲಿ ಸರ್ಕಾರ ಕೂಡಾ ಮಾದರಿ ನಾಗರಿಕನಂತೆ ನಡೆದುಕೊಳ್ಳಬೇಕು ಎಂದು ಹೇಳಿದೆ.

ಈ ಪ್ರಕರಣದಲ್ಲಿ ಅನೇಕ ಆರ್ಥಿಕ ವಿಚಾರಗಳು ಅಡಕವಾಗಿವೆ. ಹಾಗಾಗಿ, ಕಟ್ಟಡ ಸುರಕ್ಷತೆ, ಅಗ್ನಿ ಸುರಕ್ಷತೆ ಪ್ರಮಾಣ ಪತ್ರ ಪಡೆದುಕೊಳ್ಳುವ ವಿಷಯಕ್ಕೆ ಸಂಬಂಧಿಸಿದಂತೆ ಖಾಸಗಿ ಅನುದಾನರಹಿತ ಶಾಲೆಗಳಿಗೆ ಮುಂದಿನ ಶೈಕ್ಷಣಿಕ ವರ್ಷ ಅಂದರೆ, 2025–26ರವರೆಗೆ ಕಾಲಾವಕಾಶ ನೀಡಿ ಎಂದು ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ನಿರ್ದೇಶನ ನೀಡಿದೆ. ಖಾಸಗಿ ಶಾಲೆಗಳಿಗೆ ಕಡ್ಡಾಯಗೊಳಿಸಿರುವ ಷರತ್ತುಗಳು ಸರ್ಕಾರಿ ಶಾಲೆಗಳಿಗೂ ಅನ್ವಯವಾಗುತ್ತವೆ. ಕಟ್ಟಡ ಸುರಕ್ಷತೆ ಮತ್ತು ಅಗ್ನಿ ಸುರಕ್ಷತೆಯ ಕ್ರಮಗಳನ್ನು ಖಾಸಗಿ ಶಾಲೆಗಳು ಕಡ್ಡಾಯವಾಗಿ ಪಾಲಿಸಬೇಕೆಂದು ಬಯಸುವ ಸರ್ಕಾರ, ತನ್ನ ಅಧೀನದಲ್ಲಿರುವ ಸರ್ಕಾರಿ ಶಾಲೆಗಳಲ್ಲೂ ಇಂತಹುದನ್ನೇ ನಿರೀಕ್ಷಿಸಬೇಕು ಎಂದು ಹೇಳಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಸುದರ್ಶನ ಸುರೇಶ್ ವಾದ ಮಂಡಿಸಿದರು.

ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಕಟ್ಟಡ ಮತ್ತು ಅಗ್ನಿ ಸುರಕ್ಷತಾ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಪ್ರಾಧಿಕಾರಗಳಿಂದ ಪಡೆದು ಸಲ್ಲಿಸುವ ಶಾಲೆಗಳ ನೋಂದಣಿ, ಮಾನ್ಯತೆ ಹಾಗೂ ಮಾನ್ಯತೆ ನವೀಕರಣವನ್ನು ನಿಯಮಾನುಸಾರ ಮಾಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ್ತರು 2022ರ ಜೂನ್ 6ರಂದು ಹೊರಡಿಸಿದ್ದ ಸುತ್ತೋಲೆಯನ್ನು ಅರ್ಜಿದಾರರು ಪ್ರಶ್ನಿಸಿದ್ದರು.

ಬೈರತಿ ಸುರೇಶ್ ಕಚೇರಿ ಸಿಬ್ಬಂದಿಗೆ ಇಡಿ ನೋಟಿಸ್

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಸೈಟ್ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ ತನಿಖೆ ಚುರುಕುಗೊಂಡಿದ್ದು ಈಗ ಬೈರತಿ ಸುರೇಶ್ ಅವರ ಸಚಿವಾಲಯದ ಸಿಬ್ಬಂದಿಗೂ ನೋಟಿಸ್ ನೀಡಲಾಗಿದೆ.

ವಿಧಾನಸೌಧದ ನಗರಾಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿಗೆ ನೋಟಿಸ್ ನೀಡಿದ ಇಡಿ ಮಂಗಳವಾರ ಬೆಳಗ್ಗೆ 11 ಗಂಟೆಗೆ ವಿಚಾರಣೆಗೆ ಹಾಜರಾಗುವಂತೆ ಸಮನ್ಸ್ ನೀಡಿದೆ. ದಾಖಲೆಗಳ ಸಮೇತ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ. ಮುಡಾ ನಗರಾಭಿವೃದ್ಧಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಹಿನ್ನೆಲೆಯಲ್ಲಿ ಕಾರ್ಯದರ್ಶಿಗೆ ನೋಟಿಸ್ ನೀಡಲಾಗಿದೆ.

60 ಅಡಿ ಬಾವಿಗೆ ಬಿದ್ದರೂ ಬಚಾವ್ ಆದ 94ರ ವೃದ್ಧೆ!

ಚಿಕ್ಕಮಗಳೂರು: ಕಾಲು ಜಾರಿ 60 ಅಡಿ ಆಳದ ಬಾವಿಗೆ ಬಿದ್ದಿದ್ದ 94 ವರ್ಷದ ವೃದ್ಧೆಯನ್ನು ಅಗ್ನಿಶಾಮಕ ಸಿಬ್ಬಂದಿ ರಕ್ಷಿಸಿದ ಘಟನೆ ಕೊಪ್ಪ ತಾಲೂಕಿನ ಮರಕಟ್ಟೆ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಕಮಲ ಎಂಬ ವೃದ್ಧೆ ಕಾಲು ಜಾರಿ ಬಾವಿಗೆ ಬಿದ್ದಿದ್ದರು. ನೀರಿನಲ್ಲಿ ಮುಳುಗದಂತೆ ಬಾವಿಯೊಳಗೆ ಪೈಪ್ ಹಿಡಿದುಕೊಂಡು ಒಂದು ಗಂಟೆಗೂ ಹೆಚ್ಚು ಕಾಲ ಅವರು ಸಾವು ಬದುಕಿನ ನಡುವೆ ಹೋರಾಡಿದ್ದಾರೆ. ಬಳಿಕ ಅಗ್ನಿಶಾಮಕ ದಳಕ್ಕೆ ಮಾಹಿತಿ ನೀಡಲಾಗಿದೆ. ತಕ್ಷಣ ಸ್ಥಳಕ್ಕೆ ಬಂದ ಅಗ್ನಿಶಾಮಕ ಸಿಬ್ಬಂದಿ ವೃದ್ಧೆಯನ್ನು ರಕ್ಷಿಸಿದ್ದಾರೆ. ಹಗ್ಗದ ಸಹಾಯದಿಂದ ಅಗ್ನಿಶಾಮಕ ಸಿಬ್ಬಂದಿ ವಿಶ್ವನಾಥ ಅವರು ವೃದ್ಧೆಯನ್ನು ಮೇಲೆತ್ತಿದ್ದಾರೆ. ಅವರ ಕಾರ್ಯಕ್ಕೆ ಸ್ಥಳೀಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ 1] ಶ್ರೀ ವಿರೂಪಾಕ್ಷ ಶಾಸ್ತ್ರೀ ಹೆಚ್.ವೈ., 2] ಶ್ರೀಮತಿ ಸಿಂಧು ಮುರಳೀಧರ್, 3] ಶ್ರೀ ಸುಬ್ರಮಣ್ಯ ಹೆಚ್.ವೈ., 4] ಶ್ರೀ ಬಾಲಚಂದ್ರ ಹೆಚ್.ಎಸ್., 5] ಶ್ರೀ ವಲ್ಲಭ ಶಾಸ್ತ್ರೀ ಹೆಚ್.ಎಸ್. ಮತ್ತು 6] ಶ್ರೀಮತಿ ಪ್ರತಿಭಾ ಕೃಷ್ಣ ಪ್ರಕಾಶ್ ರವರು ಒಟ್ಟಾಗಿ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಬ್ಯಾಂಕ್ ಮತ್ತು ಇನ್ನಿತರ ಆರ್ಥಿಕ ಸಂಸ್ಥೆಗಳನ್ನು ಒಳಗೊಂಡಂತೆ, ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 7 (ಏಳು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದ್ದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಖಿಲ್ಲೆ ಮೊಹಲ್ಲಾ, ದೇವಿರಮ್ಮಣ್ಣಿ ಅಗ್ರಹಾರ, ಮನೆ ನಂ. 31 ಹೊಸ ನಂ. ಎಫ್–10, ಹಾಲಿ ಮೈಸೂರು ಮಹಾನಗರ ಪಾಲಿಕೆ ಸ್ವತ್ತಿನ ನಂ. 7–1–508–31 ಎಫ್–10, ಸ್ವತ್ತಿನ ಹಳೆ ನಂ. 31 ಎಫ್–10, ನಿರ್ಧರಣಾ ನಂ. 31 ಎಫ್–10, ವಾರ್ಡ್ ನಂ. 7, ಎಸ್‌ಐಎಸ್ ಚಲನಂತೆ ಪಿಐಡಿ ನಂ. 141452, ವಾರ್ಡ್ ನಂ. 51 ರ ಸ್ವತ್ತಿನ ವಿಸ್ತೀರ್ಣ ಪೂರ್ವ–ಪಶ್ಚಿಮ: 7.620015 ಮೀಟರ್ ಮತ್ತು ಉತ್ತರ–ದಕ್ಷಿಣ: 38.100076 ಮೀಟರ್, ಒಟ್ಟು ವಿಸ್ತೀರ್ಣ: 290.321875 ಚದರ ಮೀಟರ್‌ಗಳು, ಇದರಲ್ಲಿರತಕ್ಕ ಕಟ್ಟಡವನ್ನೊಳಗೊಂಡ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ– ಟಿ. ಎನ್. ಸುಬ್ರಮಣ್ಯ ರವರ ಮನೆ ನಂ. 30, ಪಶ್ಚಿಮಕ್ಕೆ –ಎಂ.ಎಸ್. ಸುಬ್ರಮಣ್ಯ ರವರ ಮನೆ ನಂ. 32, ಉತ್ತರಕ್ಕೆ – ದೇವಿರಮ್ಮಣ್ಣಿ ಅಗ್ರಹಾರದ ರಸ್ತೆ ಮತ್ತು ದಕ್ಷಿಣಕ್ಕೆ – ಕನ್ಸರ್‌ವೆನ್ಸಿ ಮತ್ತು ಚರಂಡಿ.

ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ಎಸ್‌ಎಲ್‌ಡಿ ಲಾ ಫರ್ಮ್
ನಂ. 1416, ನಾರಾಯಣಶಾಸ್ತ್ರಿ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು.
ಮೊ: 9844640641
email: sldlawfirm2021@gmail.com

ಸಾರ್ವಜನಿಕ ತಿಳುವಳಿಕೆ ಪತ್ರ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಈ ಕೆಳಗೆ ಕಾಣಿಸಿರುವ ಅನುಸೂಚಿ ಸ್ವತ್ತನ್ನು, ಅನುಸೂಚಿ ಸ್ವತ್ತಿನ ಮಾಲೀಕರಾದ ಬೆಂಗಳೂರು ದಕ್ಷಿಣ –560 098 ಐಡಿಯಲ್ ಹೋಮ್ ಟೌನ್‌ಶಿಪ್ ಎನ್.ಆರ್. ಹಿಲ್ ವೀವ್ ಸ್ಕೂಲ್ 12ನೇ ಅಡ್ಡ ರಸ್ತೆ ಸಿ–ಕ್ರಾಸ್ ಮನೆ ಸಂಖ್ಯೆ 28ರಲ್ಲಿ ವಾಸವಾಗಿರುವ ಶ್ರೀ.ಆರ್.ಕೆ. ನಾಗಭೂಷಣಾ ರವರ ಧರ್ಮಪತ್ನಿ, ಸುಮಾರು 57ವರ್ಷ ವಯಸ್ಸಿನ ಶ್ರೀಮತಿ ಜಿ.ವಿ. ಮೀರಾ ರವರಿಂದ ಅನುಸೂಚಿ ಸ್ವತ್ತನ್ನು ಕ್ರಯಕ್ಕೆ ಖರೀದಿಸಿಲು ನನ್ನ ಕಕ್ಷೀದಾರರು ಕ್ರಯದ ಕರಾರನ್ನು ಈಗಾಗಲೇ ಮಾಡಿಕೊಂಡು ಕ್ರಯ ಪತ್ರ ಮಾಡಿಕೊಳ್ಳಲು ಮುಂದಾಗಿರುವುದು ಸರಿಯಷ್ಟೆ. ಅನುಸೂಚಿ ಸ್ವತ್ತಿನ ಸಂಬಂಧ ಯಾರಾದರು ಅಧಿಕಾರ ಪತ್ರ ಹೊಂದಿದ್ದಲ್ಲಿ ಅಥವಾ ಸ್ವತ್ತಿನ ಸಂಬಂಧ ಹಕ್ಕು, ಆಸಕ್ತಿ, ಕ್ಲೇಮ್, ಆಧಾರ, ಸಾಲ ಬಾಕಿ, ಇತರೆ ತಂಟೆ ತಕಾರರು ಇದ್ದಲ್ಲಿ, ಅವರು ಖುದ್ದಾಗಿ ಸದರಿ ಸ್ವತ್ತಿಗೆ ಸಂಬಂಧಿಸಿದ ಅಸಲು ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 07 (ಏಳು) ದಿನಗಳ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಸಂಪರ್ಕಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ಸ್ವತ್ತಿನ ಸಂಬಂಧ ಯಾರೂ ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಆಸಕ್ತಿ, ಕ್ಲೇಮ್, ಆಧಾರ, ಸಾಲ ಬಾಕಿ, ಇರುವುದಿಲ್ಲ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯದ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು.

ಅನುಸೂಚಿ ಸ್ವತ್ತಿನ ವಿವರ

ಮೈಸೂರು ನಗರ, ದೇವರಾಜ ಮೊಹಲ್ಲಾ ಹೆಬ್ಬಾಳು ಬಡಾವಣೆ 2ನೇ ಹಂತದಲ್ಲಿರುವ ನಿವೇಶನ ಸಂಖ್ಯೆ: 1425 (ಒಂದು ಸಾವಿರದ ನಾಲ್ಕು ನೂರ ಇಪ್ಪತ್ತೈದು) ವುಳ್ಳ ಮತ್ತು ಮೈಸೂರು ಮಹಾ ನಗರ ಪಾಲಿಕೆಯ ನಮೂನೆ 2ರಂತೆ ಸ್ವತ್ತಿನ ಸಂಖ್ಯೆ 4452474516 ಹಾಗು ಪಿಐಡಿ ಸಂಖ್ಯೆ 71142 ಹೊಂದಿರುವ ಪೂರ್ವ ಪಶ್ಚಿಮ 12.00 ಮೀಟರ್, ಉತ್ತರ ದಕ್ಷಿಣ 18.00 ಮೀಟರ್ ಒಟ್ಟಾರೆ 216.00 ಚದರ ಮೀಟರ್ ಅಳತೆ ಹೊಂದಿರುವ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ನಿವೇಶನ ಸಂಖ್ಯೆ 1426 ; ಪಶ್ಚಿಮಕ್ಕೆ : ನಿವೇಶನ ಸಂಖ್ಯೆ 1424 ; ಉತ್ತರಕ್ಕೆ: ನಿವೇಶನ ಸಂಖ್ಯೆ 1410 ; ದಕ್ಷಿಣಕ್ಕೆ: ರಸ್ತೆ.

ಸಹಿ/– ಚಂದ್ರಶೇಖರ್ ಹೆಚ್.ಎನ್., ಬಿ.ಕಾಂ, ಎಲ್‌ಎಲ್‌ಬಿ, ಪಿಜಿಡಿ, ಹೆಚ್‌ಆರ್‌ಎಂ., KAR 427/01, ವಕೀಲರು, ನಂ. 390/ಇ, ಮೊದಲನೇ ಮಹಡಿ, 4ನೇ ಮುಖ್ಯ ರಸ್ತೆ, ಮಾರುತಿ ದೇವಸ್ಥಾನದ ರಸ್ತೆ, ಕುವೆಂಪುನಗರ, ಮೈಸೂರು–570 023.
ದಿನಾಂಕ: 2–12–2024